“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೇಳನೆಯ ಅಧಿವೇಶನ

**14ನೇ ಸೆಪ್ಟೆಂಬರ್ 2022**

**ಬುಧವಾರ**

## ವಿಷಯಾನುಕ್ರಮಣಿಕೆ (INDEX)

**01. ಸಂತಾಪ ಸೂಚನೆ**

"ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಶ್ರೀ ಎಂ.ವೀರಭದ್ರಪ್ಪನವರ ನಿಧನದ ಬಗ್ಗೆ'

ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

403– ನಕಲಿ ಉದ್ಯೋಗದ ಪ್ರಕರಣ ಕುರಿತು

ಶ್ರೀ ಅರವಿಂದ ಕುಮಾರ್ ಅರಳಿ

ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನೆ ಸಚಿವರು)

237– ಗುಳ್ಯ ಗ್ರಾಮದ ಸೇತುವೆ ಕುರಿತು

ಶ್ರೀ ಪ್ರಾಣೇಶ್ ಎಂ.ಕೆ.

ಶ್ರೀ ಸಿ.ಸಿ.ಪಾಟೀಲ್(ಲೋಕೋಪಯೋಗಿ ಸಚಿವರು)

286–ರಾಜ್ಯದಲ್ಲಿನ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಿರುವ ಕುರಿತು

ಶ್ರೀ ಶಶೀಲ್ ಜಿ.ನಮೋಶಿ

ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

293-ಭೂ ಮಂಜೂರಾತಿ ಪಡೆದ ಭೂಮಿಯ ಪೋಡಿಯ ಬಗ್ಗೆ

ಶ್ರೀ ಮುನಿರಾಜು ಗೌಡ ಪಿ.ಎಂ.

ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

250-ಕಂದಾಯ ಇಲಾಖೆಗೆ ಸಂಬಂಧಿಸಿದ ಅರೆನ್ಯಾಯಿಕ ಪ್ರಕರಣಗಳ ಬಗ್ಗೆ

ಶ್ರೀ ಸಿ.ಎನ್.ಮಂಜೇಗೌಡ

ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

306-ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಸಾಲಿನಲ್ಲಿ ಭಾರಿ ಮಳೆಯಿಂದ ಉಂಟಾದ ನಷ್ಟದ ಪರಿಹಾರ ಕುರಿತು

ಶ್ರೀ ಎಸ್.ಎಲ್.ಭೋಜೇಗೌಡ

ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

245-ರಾಜ್ಯದಲ್ಲಿ ಗೋಶಾಲೆಗಳನ್ನು ಸ್ಥಾಪಿಸುವ ಬಗ್ಗೆ

ಶ್ರೀ ಯು.ಬಿ.ವೆಂಕಟೇಶ್ (ಶ್ರೀ ಎಸ್.ರವಿ ಅವರ ಪರವಾಗಿ)

ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನೆ ಸಚಿವರು)

230-ಶ್ರೀ ಧರ್ಮರಾಯಸ್ವಾಮಿ ದೇವಾಲಯದ ಆಸ್ತಿ ಕುರಿತು

ಶ್ರೀ ಎನ್.ರವಿಕುಮಾರ್

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ)

ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

319-ಪಶುಸಂಗೋಪನೆ ಕುರಿತು

ಶ್ರೀ ಕೆ.ಎ.ತಿಪ್ಪೇಸ್ವಾಮಿ

ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನೆ ಸಚಿವರು)

226–ವಿಜಯಪುರ ಜಿಲ್ಲೆಯ ವಿಮಾನ ನಿಲ್ದಾಣದ ಕಾಮಗಾರಿ ಕುರಿತು

ಶ್ರೀ ಪ್ರಕಾಶ್ ಕೆ.ರಾಥೋಡ್

ಶ್ರೀ ವಿ.ಸೋಮಣ್ಣ(ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

275–ಸಾರ್ವಜನಿಕ ಉದ್ದೇಶಗಳಿಗೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಜಾಗ ಮಂಜೂರು ಮಾಡುವ ಕುರಿತು

ಶ್ರೀ ಮಂಜುನಾಥ್ ಭಂಡಾರಿ

ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

(207+208)–ವಿಜಯಪುರ ಜಿಲ್ಲೆಯಲ್ಲಿ ಸಂಭವಿಸಿದ ಭೂಕಂಪನದ ಕುರಿತು ಅಧ್ಯಯನ ನಡೆಸುವ ಕುರಿತು

ಶ್ರೀ ಸುನೀಲ್ ಗೌಡ ಪಾಟೀಲ್

ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

298–ದಕ್ಷಿಣ ಕನ್ನಡ ಜಿಲ್ಲಾ ಸೂರತ್ಕಲ್‌ನಲ್ಲಿರುವ ಟೋಲ್‌ಗೇಟ್ ಬಗ್ಗೆ

ಶ್ರೀ ಕೆ.ಹರೀಶ್ ಕುಮಾರ್

ಶ್ರೀ ಸಿ.ಸಿ.ಪಾಟೀಲ್ (ಲೋಕೋಪಯೋಗಿ ಸಚಿವರು)

270–ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಪರಿಗಣಿಸುವ ಬಗ್ಗೆ

ಶ್ರೀ ಎಂ.ಎಲ್.ಅನಿಲ್ ಕುಮಾರ್

ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನೆ ಸಚಿವರು)

269–ರಾಜ್ಯವನ್ನು ಗುಡಿಸಲು ಮುಕ್ತವಾಗಿಸಲು ಕೈಗೊಂಡಿರುವ ಕ್ರಮಗಳು

ಶ್ರೀ ಎಂ.ನಾಗರಾಜು

ಶ್ರೀ ವಿ.ಸೋಮಣ್ಣ(ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

ಅ) ಖಾಸಗಿ ಶಿಕ್ಷಣ ಸಂಸ್ಥೆಗಳ ಭೂ ಪರಿವರ್ತನೆಗೆ ಹಾಗೂ ಮಾನ್ಯತೆ ನವೀಕರಣಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳಿಂದ ಅನಗತ್ಯ ಕಿರುಕುಳದ ಬಗ್ಗೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

ಆ) ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಕುರಿತು

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಕಂದಾಯ ಸಚಿವರ ಪರವಾಗಿ)

ಇ) ಬೆಂಗಳೂರಿನ ಧರ್ಮರಾಯಸ್ವಾಮಿ ದೇವಸ್ಥಾನದ ಆಸ್ತಿಯನ್ನು ರಕ್ಷಣೆ ಮಾಡುವಂತೆ ಹಾಗೂ ಒತ್ತುವರಿಯ ತೆರವಿನ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದೆ ಇರುವ ಬಗ್ಗೆ.

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ)

**೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ಆನೆ ದಾಳಿಯಿಂದ ಮೃತಪಟ್ಟ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡುವ ಬಗ್ಗೆ

ಶ್ರೀ ಎಂ.ಕೆ.ಪ್ರಾಣೇಶ್
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) ಕೊಡಗು ಜಿಲ್ಲೆಯ ಭಾಗಮಂಡಲ ತೀರ್ಥಯಾತ್ರಾ ಸ್ಥಳದಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವ ಬಗ್ಗೆ.

ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)
ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು)

ಇ) ಕಳೆದ 15 ವರ್ಷಗಳಿಂದ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳ ನೇಮಕಾತಿ ಬಗ್ಗೆ.

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಈ) ರಾಜ್ಯದ ಹತ್ತು ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳ ಕಟ್ಟಡಗಳು ಅಪಾಯದ ಅಂಚಿನಲ್ಲಿದ್ದು, ಆ ಶಾಲೆಗಳಿಗೆ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವ ಕುರಿತು

ಶ್ರೀ ಕೆ.ಹರೀಶ್ ಕುಮಾರ್

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಉ) ವಸತಿ ಇಲಾಖೆಯಲ್ಲಿಯ ವಿವಿಧ ವಸತಿ ಯೋಜನೆಗಳಿಗೆ ಬಾಕಿ ಇರುವ ಅನುದಾನ ಬಿಡುಗಡೆಗೊಳಿಸುವ ಕುರಿತು.

ಶ್ರೀ ಯು.ಬಿ.ವೆಂಕಟೇಶ್

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಊ) 2022-23ನೇ ಸಾಲಿನ ಸಿ.ಇ.ಟಿ., ಪಿ.ಯು.ಸಿ. ಪರೀಕ್ಷೆಯ ಗೊಂದಲ ಪರಿಹರಿಸುವ ಬಗ್ಗೆ.

ಶ್ರೀ ಟಿ.ಎ.ಶರವಣ

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಋ) ಬೀದರ್ ಬ್ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 96 ಸ್ವಚ್ಛತಾ ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕಿರುವ ಕುರಿತು.

ಶ್ರೀ ಅರವಿಂದ ಕುಮಾರ್ ಅರಳಿ

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಎ) ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹಧನ ಸೇರಿ ಇತರೆ ಸೌಲಭ್ಯಗಳ ಸಮರ್ಪಕ ವಿತರಣೆ ಬಗ್ಗೆ.

ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಏ)ಹುಬ್ಬಳ್ಳಿಯ ತಾರಿಹಾಳ ಕೈಗಾರಿಕಾ ಪ್ರದೇಶದಲ್ಲಿ ಸ್ಪಾರ್ಕಲ್ ಕ್ಯಾಂಡಲ್ ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಗಾಯಾಳು ಹಾಗೂ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡದಿರುವ ಬಗ್ಗೆ.

ಶ್ರೀ ಸಲೀಂ ಅಹಮದ್

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಐ) ಆರ್ಥಿಕ ಸಂಕಷ್ಟದಲ್ಲಿರುವ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಬೇಕಾದ ರೂ.185 ಕೋಟಿ ಬಾಕಿ ಹಣ ಬಿಡುಗಡೆ ಕುರಿತು

ಶ್ರೀ ಎಸ್.ವ್ಹಿ.ಸಂಕನೂರ

ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**೦5. ವರದಿಯನ್ನೊಪ್ಪಿಸುವುದು**

**೦6. ಸಭೆಯ ಮುಂದಿಡಲಾದ ಕಾಗದಪತ್ರ**

**೦7. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಚರ್ಚೆ**

"ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿ ಹೋಗಿದ್ದು, ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು."

ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)

ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯರು)

ಶ್ರೀ ಎಸ್.ಎಲ್.ಭೋಜೇಗೌಡ

ಶ್ರೀ ಸಿ.ಸಿ.ಪಾಟೀಲ್(ಲೋಕೋಪಯೋಗಿ ಸಚಿವರು)

ಡಾ: ಸಿ.ಎನ್.ಅಶ್ವತ್ಥ್‌ನಾರಾಯಣ(ಉನ್ನತ ಶಿಕ್ಷಣ, ಐಟಿ-ಬಿಟಿ ಮತ್ತು ಎಸ್‌ಟಿ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು)

~ * ~ ~ * ~ ~ * ~

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

(806) 11:20 14.09.2022 ಎಸ್‌ಪಿಆರ್/ಎಕೆ

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 14ನೇ ಸೆಪ್ಟೆಂಬರ್ 2022**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ರಘುನಾಥ್ ರಾವ್ ಮಲ್ಕಾಪೂರೆ ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 1. ಸಂತಾಪ ಸೂಚನೆ

**ವಿಷಯ:- ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಎಂ.ವೀರಭದ್ರಪ್ಪರವರ ನಿಧನದ ಬಗ್ಗೆ**

**- - -**

**ಸಭಾಪತಿಯವರು:-** ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಎಂ.ವೀರಭದ್ರಪ್ಪರವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ವಿಧಾನ ಪರಿಷತ್ತಿನ ಮಾಜಿ ಶಾಸಕರಾದ ಎಂ.ವೀರಭದ್ರಪ್ಪರವರು ದಿನಾಂಕ 13/09/2022 ರಂದು ನಿಧನ ಹೊಂದಿರುತ್ತಾರೆ.

1937 ರ ಏಪ್ರಿಲ್, 30 ರಂದು ದಾವಣಗೆರೆಯಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ. ಪದವಿಧರರಾಗಿದ್ದು, ವೃತ್ತಿಯಲ್ಲಿ ಕೈಗಾರಿಕೋದ್ಯಮಿಯಾಗಿದ್ದರು. ಶ್ರೀಯುತರು 1988 ರಿಂದ 1994ರ ವರೆಗೆ ವಿಧಾನ ಪರಿಷತ್ತಿಗೆ ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರರಾಗಿ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿದ್ದರು. ಶಿಕ್ಷಣ ಪ್ರೇಮಿಯಾಗಿದ್ದ ಇವರು ನೂತನ್ ಪಿ.ಯು.ಕಾಲೇಜಿನ ಸಂಸ್ಥಾಪಕರು ಹಾಗೂ ಮಾಜಿ ಅಧ್ಯಕ್ಷರಾಗಿದ್ದರಲ್ಲದೆ, ದಾವಣಗೆರೆ ವಿಶ್ವವಿದ್ಯಾಲಯದ ಸ್ಥಾಪನೆಯ ರುವಾರಿಯಾಗಿದ್ದರು. ತಮ್ಮ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದು, ತಮ್ಮ ಮೃತ ದೇಹವನ್ನು ಜೆ.ಜೆ.ಎಂ.ಸಿ. ಕಾಲೇಜಿನ ಅಂಗ ಶಾಸ್ತ್ರ ವಿಭಾಗಕ್ಕೆ ವೈದ್ಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಮುಡುಪಾಗಿಟ್ಟಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸರಳ ರಾಜಕಾರಣಿ ಹಾಗೂ ಶಿಕ್ಷಣ ಪ್ರೇಮಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಾರ್ಥಕ ಜೀವನವನ್ನು ಕಂಡವರಲ್ಲಿ ಎಂ.ವೀರಭದ್ರಪ್ಪನವರು ಒಬ್ಬರಾಗಿದ್ದಾರೆ. 1988 ರಿಂದ 1994ರ ವರೆಗೆ ವಿಧಾನ ಪರಿಷತ್ತಿನಲ್ಲಿ ಪಕ್ಷೇತರರಾಗಿ ಶಿಕ್ಷಕರ ಕ್ಷೇತ್ರದಿಂದ ಅವರು ಆಯ್ಕೆಯಾಗಿರುವುದೇ ಒಂದು ದಾಖಲೆಯಾಗಿದೆ. ನಾವುಗಳೆಲ್ಲರೂ ರಾಜಕಾರಣದ ಚೌಕಟ್ಟಿನೊಳಗೆ ಬರುವಾಗ ಪಕ್ಷಕ್ಕೆ ಹೆಚ್ಚು ಒತ್ತು ಕೊಟ್ಟು ಕೆಲಸ ಕಾರ್ಯಗಳನ್ನು ಮಾಡಿದವರು ಮತ್ತು ಅವರು ಪಕ್ಷದ ವತಿಯಿಂದ ಆಯ್ಕೆಯಾದವರು ಎನ್ನುವ ಭಾವನೆಗಳು ನಮ್ಮಲ್ಲಿ ಇವೆ. ಈ ಮಧ್ಯದಲ್ಲಿ ಆ ದಿನಗಳಲ್ಲಿ ಪಕ್ಷೇತರರಾಗಿ ಅದರಲ್ಲೂ ಶಿಕ್ಷಕರ ಕ್ಷೇತ್ರದಲ್ಲಿ

ಆಯ್ಕೆಯಾಗಿರುವುದು ಸಾಧನೆಗಳಲ್ಲಿ ಒಂದು ಎಂದು ನನಗೆ ಅನ್ನಿಸುತ್ತದೆ. ಶಿಕ್ಷಣದ ಬಗ್ಗೆ ಅಪಾರವಾದ ತಜ್ಞತೆ, ಅನುಭವ, ಆಳವಾದ ಯೋಚನೆ ಮತ್ತು ಚಿಂತನೆಗಳನ್ನು ಹೊಂದಿದ್ದ ಎಂ.ವೀರಭದ್ರಪ್ಪನವರು ನೂತನ್ ಪಿ.ಯು. ಕಾಲೇಜು ಎಂಬ ಶಿಕ್ಷಣ ಸ್ಥಂಸ್ಥೆಯನ್ನು ಪ್ರಾರಂಭಿಸುತ್ತಾರೆ. ವಿದ್ಯಾ ದಾನ ಮಾಡಲು ತಮ್ಮದೇ ಆದ ಶಕ್ತಿಯ ಮೂಲಕ ಜನ ಸೇವೆ ಮಾಡಲು ಕಾರಣೀಭೂತರಾಗುತ್ತಾರೆ. ದಾವಣಗೆರೆ ವಿಶ್ವವಿದ್ಯಾಲಯದಂತಹ ಬಹು ದೊಡ್ಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಶ್ರೀಯುತರು ಕಾರಣೀಭೂತರಾಗುತ್ತಾರೆ ಎನ್ನುವುದೇ ಒಂದು ಇತಿಹಾಸವಾಗಿದೆ. ಎಲ್ಲದ್ದಕ್ಕಿಂತಲೂ ಹೆಚ್ಚಾಗಿ ಸಾವಿನಲ್ಲಿಯೂ ಸಹ ಒಂದು ಸಾರ್ಥಕತೆ ಕಂಡದ್ದನ್ನು ತಾವು ಸಂತಾಪ ಸೂಚನೆಯಲ್ಲಿ ಉಲ್ಲೇಖಿಸಿದ್ದೀರಿ. ಶ್ರೀಯುತರು ತಮ್ಮ ಮೃತ ದೇಹವನ್ನು ಜೆ.ಜೆ.ಎಂ.ಸಿ. ಕಾಲೇಜಿನ ಅಂಗ ಶಾಸ್ತ್ರ ವಿಭಾಗಕ್ಕೆ ವೈದ್ಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಮುಡುಪಾಗಿಟ್ಟು, ದೇಹ ದಾನ ಮಾಡಿರುವುದು ಒಂದು ದಾಖಲೆ ಎಂದು ನನಗನ್ನಿಸುತ್ತದೆ. ಅವರು ತಮ್ಮ ಇಡೀ ಬದುಕಿನ ಉದ್ದಕ್ಕೂ ಸಾರ್ವಜನಿಕ ಬದುಕಿನಲ್ಲಿ ಶಿಕ್ಷಣಕ್ಕೆ, ಕೈಗಾರಿಕೆಗೆ ಒತ್ತು ಕೊಟ್ಟು ಜನಮಾನಸದ ಮಧ್ಯೆ ಶಾಶ್ವತವಾಗಿ ಸ್ಥಾನವನ್ನು ಗಳಿಸಿರುವ ಎಂ.ವೀರಭದ್ರಪ್ಪನವರು ನಮ್ಮನ್ನೆಲ್ಲಾ ಅಗಲಿದ್ದಾರೆ ಎನ್ನುವ ನೋವಿಗೆ ಪೂರಕವಾಗಿ ತಾವು ಮಂಡಿಸಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ದೇವರು ಕರುಣಿಸಲಿ. ಅವರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿ ಸಿಗಲಿ ಎಂದು ನಾನು ಹಾರೈಸುತ್ತೇನೆ. ತಾವು ಮಂಡಿಸಿರುವ ಸಂತಾಪ ಸೂಚನೆ ಪ್ರಸ್ತಾವನೆಗೆ ನನ್ನ ಹಾಗೂ ಸರ್ಕಾರದ ಸಹಮತವನ್ನು ಸಲ್ಲಿಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಎಂ.ವೀರಭದ್ರಪ್ಪನವರು ಈ ಸದನದ ಸದಸ್ಯರಾಗಿ 1988 ರಿಂದ 1994ರ ವರೆಗೆ ಶಿಕ್ಷಕರ ಕ್ಷೇತ್ರದಿಂದ ಪಕ್ಷೇತರರಾಗಿ ಆಯ್ಕೆಗೊಂಡಿದ್ದರು. ಆಗಿನ ಕಾಲಘಟ್ಟದಲ್ಲಿ ಪದವೀಧರರ ಕ್ಷೇತ್ರದಿಂದ ಬಹಳಷ್ಟು ಜನರು ಪಕ್ಷೇತರರಾಗಿ ಆಯ್ಕೆಗೊಳ್ಳುತ್ತಿದ್ದರು. ಜನಸಂಘದವರು ಹಾಗೂ ಭಾರತೀಯ ಜನತಾ ಪಕ್ಷದವರು ಆಯ್ಕೆಗೊಂಡು ಬರುತ್ತಿದ್ದರು.

(ಮುಂದು)

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

807/14-09-2022/11-20/ಬಿಕೆಪಿ-ಬಿಎನ್‌ಎಸ್

**ಶ್ರೀ ಬಿ.ಕೆ. ಹರಿಪ್ರಸಾದ್(ಮುಂದು)**

ಆದರೆ, ಪಕ್ಷೇತರರಾಗಿ ಚುನಾಯಿತರಾಗಿ ಬಂದು, ತದನಂತರ ದಾವಣಗೆರೆ ಇವತ್ತು ಏನಾದರೂ ಒಂದು ಶೈಕ್ಷಣಿಕವಾಗಿ ಅಂದರೆ ಬಹಳಷ್ಟು ವಿದ್ಯಾ ಸಂಸ್ಥೆಗಳ ಊರು ಆಗಿರತಕ್ಕಂತಹ ದಾವಣಗೆರೆಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡಬೇಕಾದ ಸಂದರ್ಭದಲ್ಲಿ ಆಗಿನ ಮುಖ್ಯಮಂತ್ರಿಗಳ ಜೊತೆ ಸೇರಿ ದಾವಣಗೆರೆಯಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ತಂದಿರತಕ್ಕದ್ದು ನಿಜವಾಗಿಯೂ ಸಹ ಶ್ರೀಯುತರ ರಾಜಕೀಯ ಜೀವನದಲ್ಲಿ ಬಹಳ ದೊಡ್ಡ ಸಾಧನೆ ಎಂದು ಹೇಳಿದರೆ ತಪ್ಪಾಗಲಾರದು. ಮತ್ತೆ ತಾವು ತಿಳಿಸಿದ ಹಾಗೆ ಅವರ ಸಾವಿನಲ್ಲೂ ಸಹ ಅವರ ಮೃತದೇಹವನ್ನು ಜೆ.ಜೆ.ಎಂ.ಸಿ. ಕಾಲೇಜಿನ ಅಂಗಶಾಸ್ತ್ರ ವಿಭಾಗಕ್ಕೆ ವಿದ್ಯಾರ್ಥಿಗಳ ಉಪಯೋಗಕ್ಕೆ ಕೊಟ್ಟಿರುವಂತಹದ್ದು ಬಹಳ ಸಾರ್ಥಕವಾಗಿರುವಂತಹದ್ದು. ಇಂತಹ ಮಹಾನ್ ವ್ಯಕ್ತಿಗಳನ್ನು ನಾವು ಕಳೆದುಕೊಂಡಿರುವುದು ರಾಜಕೀಯ ಕ್ಷೇತ್ರದಲ್ಲಿ ಬಹಳ ದೊಡ್ಡ ನಷ್ಟ. ಈ ಸಂದರ್ಭದಲ್ಲಿ ತಾವು ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ನನ್ನ ಸಹಮತವನ್ನು ವ್ಯಕ್ತ ಮಾಡುತ್ತಾ, ಮೃತರ ಆತ್ಮಕ್ಕೆ ಶಾಂತಿಯನ್ನು ಮತ್ತು ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನ ಆಚರಣೆಯನ್ನು ಕೈಗೊಳ್ಳಬೇಕೆಂದು ಕೋರುತ್ತೇನೆ.

**(ಈ ಹಂತದಲ್ಲಿ ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನ ಆಚರಿಸಿದರು)**

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಬೆಳಗ್ಗೆ 11 ಗಂಟೆ 22 ನಿಮಿಷಕ್ಕೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(೪೦೪) 14.09.2022 11.30 ಎಸ್‌ವಿ-ಬಿಎನ್‌ಎಸ್

**(ಬೆಳಗ್ಗೆ 11 ಗಂಟೆ 22 ನಿಮಿಷಗಳಿಗೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿದ್ದ ಸದನವು ಪುನಃ ಬೆಳಗ್ಗೆ 11 ಗಂಟೆ 37 ನಿಮಿಷಗಳಿಗೆ ಸಮಾವೇಶಗೊಂಡಿತು.**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**ಶ್ರೀ ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇಂದು ಕರ್ನಾಟಕ ರಾಜ್ಯದಲ್ಲಿ ಹಿಂದಿ ಭಾಷಾ ದಿನವನ್ನು ಆಚರಿಸಬೇಕೆಂದು ಸರ್ಕಾರ ಹೇಳುವುದು ಕನ್ನಡಿಗರ ಸ್ವಾಭಿಮಾನವನ್ನು ಪ್ರಶ್ನೆ ಮಾಡುವಂತಾಗಿದೆ. ನಾವು ಇದನ್ನು ತೀವ್ರವಾಗಿ ಖಂಡಿಸುತ್ತೇವೆ. ದಯಮಾಡಿ ಇದಕ್ಕೆ ಅವಕಾಶವನ್ನು ಕೊಡಬಾರದು. ಸರ್ಕಾರದ ವತಿಯಿಂದ ಇದು ಆಗಬಾರದು.

(ಗೊಂದಲ)

**ಸಭಾಪತಿಯವರು:-** ನೀವು ಏನೇ ಹೇಳಬೇಕಾಗಿದ್ದರೂ ನನಗೆ ಮೊದಲು ಅರ್ಜಿಯನ್ನು ಕೊಡಿ. ಈಗ ಪ್ರಶ್ನೋತ್ತರ. ಮೊದಲನೆಯ ಪ್ರಶ್ನೆ ಮಾನ್ಯ ಅರವಿಂದಕುಮಾರ್ ಅರಳಿ ಅವರದ್ದು.

(ಗೊಂದಲ)

**(ಈ ಹಂತದಲ್ಲಿ ಜೆ.ಡಿ(ಎಸ್) ನ ಸದಸ್ಯರು ಹಿಂದಿ ಭಾಷಾ ದಿವಸಕ್ಕೆ ವಿರೋಧವನ್ನು ವ್ಯಕ್ತಪಡಿಸಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು. ಜೆ.ಡಿ.(ಎಸ್)ನ ಮಾನ್ಯ ಭೋಜೇಗೌಡರು "ಬಾರಿಸು ಕನ್ನಡ ಡಿಂಡಿಮವ" ಗೀತೆಯನ್ನು ಹಾಡುವ ಮೂಲಕ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು)**

**ಶ್ರೀ ಆರ್.ಅಶೋಕ್(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ತಾವು ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡಿ.

(ಮುಂದು)

(೮೦೯) 14-09-2022 (11.40) ಕೆಜಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 403**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ನೀಡಿರುವಂತಹ ಉತ್ತರ ಸಮಂಜಸವಾದುದಲ್ಲವೆಂದು ನನಗೆ ಅನಿಸುತ್ತದೆ. ಇದು ನಿರುದ್ಯೋಗಿ ಯುವಕರಿಗೆ ಮೋಸ ಮಾಡಿದಂತಹ ಒಂದು ಕೃತ್ಯವಾಗಿದೆ. ನಾನು ಏಕೆ ಪ್ರಶ್ನೆಯನ್ನು ಮಾಡಿದ್ದೇನೆಂದರೆ, "ಸುದ್ದಿ ಮೂಲ" ಪತ್ರಿಕೆಯಲ್ಲಿ "ಸಚಿವ ಪ್ರಭು ಬಿ.ಚವ್ಹಾಣ್‌ರವರ ಆಪ್ತನ ಸೆರೆಗೆ ಸಿಕ್ಕ ಸುಳಿವು ಯಾವುದು ಗೊತ್ತಾ?" ಎಂದು ಬಂದಿದೆ. ಪತ್ರಿಕೆಯಲ್ಲಿ ಈ ರೀತಿ ಸುದ್ದಿ ಬಂದ ಮೇಲೆ, ನಾವು ಸಂಜಯನಗರ ಪೊಲೀಸ್ ಠಾಣೆಗೆ ಹೋಗಿ FIR ಅನ್ನು ನೋಡಿದಾಗ, FIR ನಲ್ಲಿ ಬಹಳಷ್ಟು ಯುವಕರಿಗೆ ಮೋಸವಾಗಿರುವುದು ಕಂಡುಬಂದಿದೆ.

ಮಾನ್ಯ ಸಭಾಪತಿಯವರೇ, ಆದರೆ, ಮಾನ್ಯ ಸಚಿವರು ಮೋಸವಾಗಿರುವುದಿಲ್ಲವೆಂದು ಉತ್ತರವನ್ನು ನೀಡಿದ್ದಾರೆ. ಇದು ತಪ್ಪು ಇದೆ. ಇದರಲ್ಲಿ ಸಂಬಂಧಪಟ್ಟ ಇಲಾಖೆ ಹಾಗೂ ಮಾನ್ಯ ಸಚಿವರು ಶಾಮೀಲಾಗಿದ್ದಾರೆಂದು ನನ್ನ ಆರೋಪ ಇದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ನೀಡಲಿ, ನಾನು ನಂತರ ಪ್ರಶ್ನೆ ಕೇಳುತ್ತೇನೆ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅರವಿಂದ ಕುಮಾರ್ ಅರಳಿಯವರು ಸುಮ್ಮನೆ ಸುಳ್ಳು, ಸುಳ್ಳು ಆರೋಪ ಮಾಡುತ್ತಿದ್ದಾರೆ. ಮೊದಲನೆಯದಾಗಿ, ನಕಲಿ ಉದ್ಯೋಗ ಕುರಿತು ಪತ್ರಿಕೆಗಳಲ್ಲಿ ಯಾವುದೇ ಜಾಹಿರಾತು ಆಗಿರುವುದಿಲ್ಲ. ಆದರೆ, ಆ ರೀತಿ ಅವರು forgery ಮಾಡಿದ್ದಾರೆಂದು ನನಗೆ ಮಾಹಿತಿ ಬಂದ ತಕ್ಷಣ, ನಾನೇ Commissioner ರವರಿಗೆ ಕರೆ ಮಾಡಿ, ಅವರನ್ನು ಪೊಲೀಸ್ ಠಾಣೆಗೆ ಕಳುಹಿಸಿ ನಕಲಿ ಮಾಡಿರುವವನ ವಿರುದ್ಧ FIR ದಾಖಲು ಮಾಡಿಸಿದ್ದೇನೆ. ಈಗ ಆತನನ್ನು

arrest ಮಾಡಿದ್ದಾರೆ. ಆತ ಒಂದು ತಿಂಗಳಿನಿಂದ ಜೈಲಿನಲ್ಲಿ ಇದ್ದಾನೆ. ಇದರ ಬಗ್ಗೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈಗ ನ್ಯಾಯಾಲಯದಲ್ಲಿ ಪ್ರಕರಣ ಇದೆ. ಇದರ ಬಗ್ಗೆ ತನಿಖೆ ನಡೆಯುತ್ತಿದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನಕಲಿ ಮಾಡಿರುವಂತಹವರನ್ನು arrest ಮಾಡಿದ್ದಾರೆ. ಪೊಲೀಸ್ ಇಲಾಖೆ ಕೆಲಸ ಮಾಡಿದೆ ಮತ್ತು ಮಾಡುತ್ತಿದೆ. ಅದರ ಬಗ್ಗೆ ನನ್ನ ಎರಡು ಮಾತಿಲ್ಲ. ಆದರೆ, ನನ್ನ ಆರೋಪ ಏನೆಂದರೆ, ಮಾನ್ಯ ಸಚಿವರ ಆಪ್ತ ಸಹಾಯಕನೊಬ್ಬ, ಆತ ಅಧಿಕೃತ ಆಪ್ತ ಸಹಾಯಕ ಅಲ್ಲ, ಅನಧಿಕೃತ ಆಪ್ತ ಸಹಾಯಕನಾಗಿದ್ದ. ಇವರಿಗೆ ಮರಾಠಿ ಭಾಷೆ ಬರುತ್ತಿತ್ತು, ಕನ್ನಡ ಭಾಷೆ ಬರುತ್ತಿರಲಿಲ್ಲ. ಹಾಗಾಗಿ, ಅವರಿಗೆ ಕನ್ನಡ ಕಲಿಸುವುದಕ್ಕೆ ಆತನನ್ನು ತಂದು ಇಟ್ಟುಕೊಂಡಿದ್ದರು. ಆದರೆ, ಇದನ್ನು ಡಿ.ಪಿ.ಎ.ಆರ್.,ನವರು ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದಿಲ್ಲವೆಂದು ವಜಾ ಮಾಡಿದರು.

**ಸಭಾಪತಿಯವರು:-** ಮಾನ್ಯ ಅರವಿಂದ ಕುಮಾರ್ ಅರಳಿರವರೇ, ನಿಮ್ಮ ಬಳಿ ಅವರು ಸಚಿವರ ಆಪ್ತ ಸಹಾಯಕರಾಗಿದ್ದರು ಎಂದು ಹೇಳುವುದಕ್ಕೆ ಏನಾದರೂ ದಾಖಲೆಗಳು ಇವೆಯೇ? ಆ ರೀತಿ ದಾಖಲೆಗಳು ಇದ್ದರೆ ಕೊಡಿ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಇಲ್ಲ.

(ಗೊಂದಲ)

**ಶ್ರೀ ವಿ.ಸುನಿಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, ಪತ್ರಿಕೆಗಳಲ್ಲಿ ಬಂದಿದ್ದು ದಾಖಲೆಯಾಗುತ್ತದೆಯೇ?

**ಸಭಾಪತಿಯವರು:-** ಸಚಿವರೇ, ಪತ್ರಿಕೆಯಲ್ಲ, ಅವರು ಮಾನ್ಯ ಸಚಿವರ ಆಪ್ತ ಸಹಾಯಕರು ಎಂದು ಹೇಳುವುದಕ್ಕೆ ಏನಾದರೂ ತಮ್ಮ ಬಳಿ ದಾಖಲೆಗಳು ಇವೆಯೇ?

(ಗೊಂದಲ)

**ಶ್ರೀ ಅರವಿಂದ ಕುಮಾರ್ ಅರಳಿ:- XXX**

(ಗೊಂದಲ)

**ಸಭಾಪತಿಯವರು:-** ಮಾನ್ಯ ಅರವಿಂದ ಕುಮಾರ್ ಅರಳಿರವರೇ, **XXX**

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

(ಗೊಂದಲ)

**ಶ್ರೀ ವಿ.ಸುನಿಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು **XXX**

(ಗೊಂದಲ)

**ಸಭಾಪತಿಯವರು:–** ಮಾನ್ಯ ಅರವಿಂದ ಕುಮಾರ್ ಅರಳಿರವರೇ, ದಯವಿಟ್ಟು, ತಾವು ಪುರಾವೆ ಇದ್ದರೆ ಕೊಡಿ.

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪೀಠಕ್ಕೆ ಕ್ಷಮೆ ಕೇಳಬೇಕು.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ವಿರುದ್ಧ ಗಂಭೀರವಾದ ಆರೋಪ ಇದೆ. ಮಾನ್ಯ ಸಚಿವರ ಹೆಸರು "ಸುದ್ದಿ ಮೂಲ" ಪ್ರತಿಕೆಯಲ್ಲಿ ಬಂದಿದೆ.

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪೀಠಕ್ಕೆ ಕ್ಷಮೆ ಕೇಳಬೇಕು.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಅವರ Joint Director ರವರು ದೂರು ಕೊಟ್ಟಿದ್ದಾರೆ. ಒಂದು ವೇಳೆ, ಇದಕ್ಕೆ ಪುರಾವೆ ಇಲ್ಲದಿದ್ದರೆ ಪೋಲೀಸರು ಆ ವ್ಯಕ್ತಿಯ ವಿರುದ್ಧ complaint ಅನ್ನು ದಾಖಲು ಮಾಡಿ ಏಕೆ arrest ಮಾಡುತ್ತಾರೆ? ಮಾನ್ಯ ಸಚಿವರು ರಾಜೀನಾಮೆ ಕೊಡಬೇಕು. ನಾವು ಕ್ಷಮೆ ಕೇಳುತ್ತೇವೆ. ಮಾನ್ಯ ಸಚಿವರು ರಾಜೀನಾಮೆ ಕೊಡಲಿ. ನೇಮಕಾತಿಗಳಲ್ಲಿ ಅವ್ಯವಹಾರವಾಗಿದೆ ಎಂದು "ಸುದ್ದಿ ಮೂಲ" ಪತ್ರಿಕೆಯನ್ನು ಮಾನ್ಯ ಸದಸ್ಯರು ಸಭೆಗೆ ತೋರಿಸಿದರು.

(ಗೊಂದಲ)

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

**ಸಭಾಪತಿಯವರು:–** ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ನಾರಾಯಣಸ್ವಾಮಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಡಾ||ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರರು):–** ಮಾನ್ಯ ಸಭಾಪತಿಯವರೇ, ಅವರು ಪೀಠಕ್ಕೆ ಅವಮಾನ ಮಾಡಿದ್ದಾರೆ. ಅವರು ಮೊದಲು ಕ್ಷಮೆ ಕೇಳಲಿ. ಆನಂತರ ಚರ್ಚೆಗೆ ತೆಗೆದುಕೊಳ್ಳಿ.

(ಗೊಂದಲ)

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಶ್ರೀ ಅರವಿಂದ ಕುಮಾರ್ ಅರಳಿಯವರು ಒಂದು ಪತ್ರಿಕೆಯ ಹೇಳಿಕೆಯನ್ನು ನೋಡಿ ಆ ಬಗ್ಗೆ ಸದನದಲ್ಲಿ ಒಂದು ಪ್ರಶ್ನೆಯನ್ನು ಹಾಕಿದ್ದಾರೆ. ಅದು ಅವರ ಹಕ್ಕು. ಆ ವ್ಯಕ್ತಿಯ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ, ಆ ವ್ಯಕ್ತಿ ಮಾನ್ಯ ಸಚಿವರ ಆಪ್ತ ಸಹಾಯಕರಾಗಿ ಇದ್ದಾರೆಂದು ಹೇಳುವುದಕ್ಕೆ ಏನಾದರೂ ಪುರಾವೆ ಇದ್ದರೆ ಕೊಡಿ ಎಂದು ಕೇಳಿದ್ದೇನೆ. ಇದರಲ್ಲಿ ಏನು ತಪ್ಪಿದೆ? ದಯವಿಟ್ಟು ಪುರಾವೆ ಇದ್ದರೆ, ಕೊಡಿ.

(ಗೊಂದಲ)

**ಶ್ರೀ ವಿ.ಸುನೀಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ತಾವು ಅದನ್ನು ಆಮೇಲೆ ಚರ್ಚೆಗೆ ತೆಗೆದುಕೊಳ್ಳಿ. **XXX**

(ಗೊಂದಲ)

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪೀಠದ ಬಗ್ಗೆ ಆರೋಪವನ್ನು ಮಾಡಿದ್ದಾರೆ. ಹಾಗಾಗಿ, ಅವರು ಆ ಮಾತನ್ನು ವಾಪಸ್ ತೆಗೆದುಕೊಂಡ ಮೇಲೆ, ತಾವು ಚರ್ಚೆಯನ್ನು ಮುಂದುವರೆಸಬೇಕು.

(ಗೊಂದಲ)

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ನನ್ನಿಂದ ಯಾವ ಮಾತು ಹೋಗಿದೆ ಆ ಮಾತನ್ನು ವಾಪಸ್ಸು ಪಡೆಯುತ್ತೇನೆ. ಅದಕ್ಕೆ ಎರಡು ಮಾತಿಲ್ಲ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸದಸ್ಯರು ಹೇಳಿರುವಂತಹ ಪದವನ್ನು ಕಡತದಿಂದ ತೆಗೆಯಿರಿ.

---

**XXX ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆಯಲಾಗಿದೆ**

(ಗೊಂದಲ)

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ತಾವು ಪುರಾವೆಗಳನ್ನು ಕೇಳುತ್ತಿದ್ದೀರಿ. ಪುರಾವೆಗಳು ಇಲ್ಲ. ಜೂನ್, 7 ನೇ ತಾರೀಖಿನಂದು "ಮಾನ್ಯ ಸಚಿವರ ಆಪ್ತ ಸಹಾಯಕ ಮೋಸ ಮಾಡುತ್ತಿದ್ದಾನೆ. ಆತನ ಬಗ್ಗೆ ಯಾರು ತಲೆಕೆಡಿಸಿಕೊಳ್ಳಬೇಡಿ, ಆತನಿಗೆ ಹಣ ಕೊಡಬೇಡಿ" ಎಂದು ಪತ್ರಿಕೆಯಲ್ಲಿ ಬಂದಿದೆ. ಮಾನ್ಯ ಸಚಿವರು ಆ ವ್ಯಕ್ತಿಯನ್ನು ಅವರ ಆಪ್ತ ಸಹಾಯಕನೆಂದು ಹೇಳುತ್ತಾರೆ. ಆದರೆ, ಏಕೆ ಇವರಿಗೆ ಆತನ ವಿರುದ್ಧ ದೂರು ಕೊಡುವುದಕ್ಕೆ ಆಗಲಿಲ್ಲ? ಪೀಠ ಪುರಾವೆಗಳನ್ನು ಕೇಳುತ್ತಿದೆ. ಆ ಪುರಾವೆಗಳು ಇಲ್ಲ. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ. ನನಗೆ ಡಿ.ಪಿ.ಎ.ಆರ್.ನವರು ದಾಖಲೆಗಳನ್ನು ಕೊಡಲಿಲ್ಲ. ಇವರು ಪತ್ರ ಕೊಟ್ಟಿದ್ದು ಸರಿ ಇದೆ. ಅವರು ರಿಜೆಕ್ಟ್ ಮಾಡಿದ್ದು ಸರಿ ಇದೆ. ಆ ವ್ಯಕ್ತಿ ಸುಮಾರು ೨೩ ಜನರ ಬಳಿ ನೌಕರಿ ಕೊಡಿಸುತ್ತೇನೆಂದು ಹೇಳಿ ಹಣ ತೆಗೆದುಕೊಂಡಿದ್ದಾನೆ. ಈ ವ್ಯಕ್ತಿಯ ವಿರುದ್ಧ ಕೇಸ್ ದಾಖಲಾಗಿದೆ. ಆ ವ್ಯಕ್ತಿ ಮಾನ್ಯ ಸಚಿವರ ಮತ್ತು Commissioner ರವರ ಸಹಿಗಳನ್ನು ಮಾಡಿದ್ದಾನೆ. ಆದರೆ, ಇವರಿಬ್ಬರ ವಿರುದ್ಧ ಕೇಸ್ ದಾಖಲಾಗಿಲ್ಲ. ಮಾನ್ಯ ಸಚಿವರ ವಿರುದ್ಧ ಏಕೆ ಕೇಸ್ ದಾಖಲು ಮಾಡಲಿಲ್ಲ? ಮಾನ್ಯ ಸಚಿವರು ಅವರ ಆಪ್ತ ಸಹಾಯಕನನ್ನು ರಕ್ಷಣೆ ಮಾಡುವುದಕ್ಕಾಗಿ ಮಾಡಲಿಲ್ಲವೇ? ಏಕೆ ಮಾಡಲಿಲ್ಲ? ಇದರ ಬಗ್ಗೆ ಸಚಿವರು ಹೇಳಬೇಕು.

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುವಂತಹ ವ್ಯಕ್ತಿ ನನ್ನ ಆಪ್ತ ಸಹಾಯಕನಲ್ಲ. ನಾನು ಆತನನ್ನು ಆಪ್ತ ಸಹಾಯಕನನ್ನಾಗಿ ಮಾಡಿಕೊಂಡಿಲ್ಲ. ಮಾನ್ಯ ಸದಸ್ಯರು ಇಲಾಖೆ ಶಾಮೀಲಾಗಿದೆ, ಸಚಿವರು ಶಾಮೀಲಾಗಿದ್ದಾರೆಂದು ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ಅವರು ಮಾಡಿರುವಂತಹ ಆರೋಪಗಳು ಸತ್ಯಕ್ಕೆ ದೂರವಾಗಿವೆ. ಏಕೆಂದರೆ, ಆ ವ್ಯಕ್ತಿ ನಾನು ಸಚಿವನಾದ ಮೇಲೆ ನನ್ನ ಬಳಿ ಬಂದಿದ್ದ. ಆ ಮೇಲೆ ಆ ವ್ಯಕ್ತಿ ಮೂರು ವರ್ಷಗಳಿಂದ ಬಂದಿಲ್ಲ. ಆತನೇ forgery ಮಾಡಿದ್ದಾರೆ. ಆ ಸಂದರ್ಭದಲ್ಲಿ ನಾನು ಇರಲಿಲ್ಲ. ನಾನು ಔರಾದ್‌ನಲ್ಲಿದ್ದೆ. ನನಗೆ ಮಾಹಿತಿ ಬಂದ ತಕ್ಷಣ, ಆಯುಕ್ತರನ್ನು ಕಳುಹಿಸಿ ದೂರು ಕೊಡಿಸಿದ್ದೇನೆ. ಆ ಮೇಲೆ ಆ ವ್ಯಕ್ತಿ arrest ಆಗಿದ್ದಾನೆ. ನನಗೆ ಮಾಹಿತಿ ಬಂದ ಮೇಲೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆದರೂ ಸಹ, ಮಾನ್ಯ ಸದಸ್ಯರು ಬೇಕೆಂದು ಕೇಳುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಆ ವ್ಯಕ್ತಿ ಯಾವ ಇಲಾಖೆಯವರು?

**ಶ್ರೀ ಪ್ರಭು ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಆತ ಶಿಕ್ಷಣ ಇಲಾಖೆಯ ವ್ಯಕ್ತಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಶಿಕ್ಷಣ ಇಲಾಖೆಯವರನ್ನು deputation ಮೇಲೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಅಲ್ಲವೇ;

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಬರುವುದಿಲ್ಲ.

(ಗೊಂದಲ)

**ಶ್ರೀ ಟಿ.ಎ.ಶರವಣ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬರುವುದಿಲ್ಲ ಎಂದ ಮೇಲೆ, ಮಾನ್ಯ ಸಚಿವರು ಆತನಿಗೆ ಹೇಗೆ ಪತ್ರವನ್ನು ಕೊಟ್ಟರು?

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡಲಿ, ನಾವು ನಂತರ ಮಾತನಾಡುತ್ತೇವೆ.

(ಗೊಂದಲ)

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಯಾರು ಸಮರ್ಥರು, ಯಾರು ಅಸಮರ್ಥರು ಎಂದು ಜನರಿಗೆ ಗೊತ್ತಾಗುತ್ತಿದೆ.,

(ಮುಂದು)

(810) 14-09-2022 (11.50) ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನಾನು ಅವರ ಮೇಲೆ ಆರೋಪ ಮಾಡುತ್ತಿದ್ದೇನೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆಯಿತು, ನಾನು ಮಾನ್ಯ ಮಂತ್ರಿಗಳ ಮೇಲೆ ಆರೋಪ ಮಾಡುತ್ತಿದ್ದೇನೆಂದು ತಿಳಿದುಕೊಳ್ಳಲಿ. ಹಾಗಾದರೆ, ಮಾನ್ಯ ಮಂತ್ರಿಗಳು ಏಕೆ ನನ್ನ ಆಪ್ತಸಹಾಯಕ ಎಂದು statement ನೀಡಿದರು. ಆದರೆ, ಈಗ ಆಪ್ತಸಹಾಯಕ ಇಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ ಈ ಆಪ್ತಸಹಾಯಕ ಯಾರು?

**ಶ್ರೀ ಪ್ರಭು ಬಿ. ಚವ್ಹಾಣ್:-** ಮಾನ್ಯ ಸಭಾಪತಿಯವರೇ, ನಾನು statement ಕೊಟ್ಟಿಲ್ಲ.

(ಗೊಂದಲ)

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಇದು ಯಾರದ್ದು?

(ಗೊಂದಲ)

**ಶ್ರೀ ಪ್ರಭು ಬಿ. ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಅದು ನನಗೆ ಸಂಬಂಧವಿಲ್ಲ. ನಮ್ಮ ಹತ್ತಿರ ನೇಮಕಾತಿಯಾಗಿಲ್ಲ. ಮಾನ್ಯ ಸದಸ್ಯರು ಏಕೆ ಈ ರೀತಿ ಹೇಳುತ್ತಿದ್ದಾರೆಂದು ನನಗೆ ಗೊತ್ತಿದೆ.

(ಗೊಂದಲ)

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದು.... deny ಮಾಡಬೇಕಾಗಿತ್ತು.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಲಿ.

**ಸಭಾಪತಿಯವರು:-** ಮಾನ್ಯ ಶರವಣ ಟಿ.ಎ.ರವರೆ ತಾವು ಏತಕ್ಕೆ ಮಾತನಾಡುತ್ತಿದ್ದೀರಿ? ನೀವು ಮಾತನಾಡುವುದಕ್ಕೆ ನಾನು ಅವಕಾಶ ನೀಡಿಲ್ಲ. ಸದಸ್ಯರು ಮಾತನಾಡುವುದಕ್ಕೆ ಯೋಗ್ಯರಿದ್ದಾರೆ, ಅದಕ್ಕೆ ಅವರು ಮಾತನಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳೆ ಒಂದು ನಿಮಿಷ. ದಯವಿಟ್ಟು ಇದು ಪ್ರಶ್ನೋತ್ತರ ವೇಳೆ. ಪ್ರಶ್ನೋತ್ತರದಲ್ಲಿ ಪ್ರಶ್ನೆ ಮತ್ತು ಉತ್ತರಕ್ಕೆ ಒಂದು ಸಮಯವಿದೆ. ಈಗ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ನೀಡಿದ್ದಾರೆ. ನಾನು ಇದು ಒಂದೇ ಪ್ರಶ್ನೆಯನ್ನು prolong ಮಾಡುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಇನ್ನು detail ಆಗಿ ಮಾತನಾಡಬೇಕಾದರೆ ಒಂದು ಅರ್ಜಿ ನೀಡಿ ಅಥವಾ ಒಂದು ಸೂಚನೆ ನೀಡಿ. ಆಗ ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ, ಪ್ರಶ್ನೋತ್ತರವನ್ನು ಈ ರೀತಿ prolong ಮಾಡಿದರೆ, ಈಗ ಒಂದು ಗಂಟೆಯಲ್ಲಿ ಪ್ರಶ್ನೋತ್ತರವನ್ನು ಮುಗಿಸಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಆಗ ಇಡೀ treasury bench ನಿಂತುಕೊಂಡು ಬಿಟ್ಟರೆ ಹೇಗೆ? Treasury bench ಸ್ವಲ್ಪ patience ಇಟ್ಟುಕೊಳ್ಳಬೇಕು. ನಾವು ವಿರೋಧ ಪಕ್ಷದವರು ಬಂದಿರುವುದೇ ಆಡಳಿತ ಪಕ್ಷದವರನ್ನು ಪ್ರಶ್ನೆ ಮಾಡುವುದಕ್ಕೆ. ಈಗ ಪ್ರಶ್ನೆ ಮಾಡುವಾಗ ಮಾನ್ಯ ಮಂತ್ರಿಗಳು ಎದ್ದು ನಿಂತುಕೊಳ್ಳುತ್ತಾರೆ.

(ಗೊಂದಲ)

**ಶ್ರೀ ವಿ.ಸುನಿಲ್ ಕುಮಾರ್ (ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಯಾವುದೇ ದಾಖಲೆ ಇಲ್ಲದೆ ದಿಡೀರ್ ಎಂದು ಪೀಠದ ಬಗ್ಗೆ ಮಾತನಾಡಿದರು.

(ಗೊಂದಲ)

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಗೌರವಾನ್ವಿತ ಪೀಠಕ್ಕೆ ಈ ರೀತಿಯ ಪ್ರಶ್ನೆ ಮಾಡಲಿಲ್ಲ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪೀಠದ ಬಗ್ಗೆ ನಮಗೆ ಅಪಾರವಾದ ಗೌರವವಿದೆ.

**ಸಭಾಪತಿಯವರು:-** ಒಂದು ನಿಮಿಷ, ಮಾನ್ಯ ಕಂದಾಯ ಮಂತ್ರಿಗಳು ಮಾತನಾಡುತ್ತಿದ್ದಾರೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಇದು Question Hour. ನಾನು ಆ ವಿಷಯದ ಬಗ್ಗೆ debate ಮಾಡುವುದಕ್ಕೆ ಹೋಗುವುದಿಲ್ಲ. This is Question hour. ಅವರಿಗೂ ಕಾಲಮಿತಿ ಇದೆ, ನಮಗೂ ಕಾಲಮಿತಿ ಇದೆ. ನಾವು ಇಲ್ಲಿ ಉತ್ತರ ನೀಡಿ, ಮತ್ತೆ ವಿಧಾನ ಸಭೆಗೆ ಹೋಗಬೇಕು. ಅಲ್ಲೂ ಸಹ ಹಲವಾರು ಪ್ರಶ್ನೆಗಳಿವೆ. ಮಾನ್ಯ ಸಭಾಪತಿಯವರು ಅವಕಾಶ ನೀಡಿದ್ದಾರೆ. ಆ ಅವಕಾಶಕ್ಕೆ ತಕ್ಕಂತೆ ಅವರು ಉತ್ತರ ನೀಡಿದ್ದಾರೆ. ಅಂದರೆ ಅವರು arrest ಆಗಿರುವುದಕ್ಕೆ ಸಂಬಂಧಪಟ್ಟಂತೆ ಉತ್ತರ ನೀಡಿದ್ದಾರೆ. ಅದು ಅಲ್ಲಿಗೆ ಮುಗಿಯಿತು. ಅವರಿಗೆ ಇನ್ನೇನಾದರೂ ಹೆಚ್ಚು ಮಾಹಿತಿ ಬೇಕು ಎನ್ನುವುದಾದರೆ ಇದನ್ನು ಅವರು Calling Attention ನಲ್ಲಿ ತರಬಹುದು, ಅವರು ಇದರಲ್ಲಿ ಯಾವುದನ್ನಾದರೂ ಸಹ ತರಬಹುದು. Question hour ನಲ್ಲಿ ಇಷ್ಟೆಲ್ಲಾ ಚರ್ಚೆ ಮಾಡುವುದಕ್ಕಿಂತ, ಅವರು ವಿಸ್ತೃತವಾಗಿ ಚರ್ಚೆ ಮಾಡುವುದಾದರೆ ಅದನ್ನು ಬೇರೆ ರೂಪದಲ್ಲಿ ಚರ್ಚೆಗೆ ತರಲಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ಮಾನ್ಯ ಸದಸ್ಯರು ಒಂದು ಸೂಚನೆ ನೀಡಲಿ. ಆಗ ಅದರ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಪತ್ರಿಕೆಯಲ್ಲಿ ನಾನು ಹೇಳಿಯೇ ಇಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಸಂಯುಕ್ತ ಕರ್ನಾಟಕದಲ್ಲಿ ಬಂದಿರುವುದು ಸುಳ್ಳು ಎನ್ನುತ್ತಿದ್ದಾರೆ. ಸಂಯುಕ್ತ ಕರ್ನಾಟಕ ಪತ್ರಿಕೆ, ಖಾಲಿಪೋಲಿ ಪತ್ರಿಕೆಯಲ್ಲ. ಸಂಯುಕ್ತ ಕರ್ನಾಟಕ ನಮ್ಮ ಕರ್ನಾಟಕ ರಾಜ್ಯದ ಬಹಳ ಹಳೆಯ ಪತ್ರಿಕೆ. ಅದರಲ್ಲಿ ಬಂದಿರುವುದು ಸುಳ್ಳು ಎನ್ನುವುದಾದರೆ ಇನ್ಯಾವುದು ಸತ್ಯವಾಗಬಹುದು. ಮಾನ್ಯ ಮಂತ್ರಿಯವರೆ ಬಹಳ clear ಆಗಿ ಹೇಳಿದ್ದಾರೆ.

(ಗೊಂದಲ)

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೆ, ನಾವು ಸದನದಲ್ಲಿ ಎಲ್ಲವನ್ನು ಸಹ ಪತ್ರಿಕೆಯ ಹೇಳಿಕೆಯ ಆಧಾರದ ಮೇಲೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರಿಗೆ ಕನ್ನಡದಲ್ಲಿ ಓದುವುದಕ್ಕೆ ಬರುವುದಿಲ್ಲ. ಅದಕ್ಕೋಸ್ಕರ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದಕ್ಕೋಸ್ಕರ ತಾವು ಆ ರೀತಿ ಮಾಡುವುದಕ್ಕೆ ಹೋಗಬೇಡಿ. ಮಾನ್ಯ ಸದಸ್ಯರು ಪ್ರಶ್ನೆ ಕೇಳಿದಾಗ, ಅದಕ್ಕೆ ತಕ್ಕುದಾದ ಉತ್ತರ ಬಂದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ. ಅದನ್ನು ಮಾನ್ಯ ಮಂತ್ರಿಯವರೆ ಒಪ್ಪಿಕೊಂಡಿದ್ದಾರೆ. ಅವನು blackmail ಮಾಡುತ್ತಿದ್ದಾನೆಂದು ಪತ್ರಿಕೆಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಪ್ರಶ್ನೋತ್ತರ ವೇಳೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. If the member is not satisfied with the answer of the Minister concerned, ಮಾನ್ಯ ಸದಸ್ಯರು ಅರ್ಧ ಗಂಟೆ ಚರ್ಚೆಗೆ ನೀಡಲಿ. ತಾವು ಮತ್ಯಾವುದೋ ಬೇರೆ ಚರ್ಚೆಗೆ allow ಮಾಡಿ. ತಾವು Question hour ನಲ್ಲಿ ಕೊಡಿ. ಈಗ ಅವರು statement ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ, ಆದರೆ ಇವರು ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಈಗ ಸಮಯವನ್ನು ಹಾಳು ಮಾಡುವುದು ಬೇಡ, if the member is not satisfied with the answer of the Minister concerned, he (member) can give notice for half-an-hour discussion. ಚರ್ಚೆಗೆ ಅವಕಾಶ ಮಾಡಿಕೊಡಿ. ಆಗ ಅವರು ಅಲ್ಲಿ ಚರ್ಚೆ ಮಾಡಲಿ.

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಮಾಡುತ್ತೇನೆ.

**ಸಭಾಪತಿಯವರು:-** ಆಯಿತು, ತಾವು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದು ಸೂಚನಾ ಪತ್ರ ನೀಡಿ. ಈಗ ಪ್ರಾಣೇಶ್‌ರವರು ತಮ್ಮ ಪ್ರಶ್ನೆ ಕೇಳುವುದು.

**ಪ್ರಶ್ನೆ ಸಂಖ್ಯೆ: 237**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರಾಣೇಶ್ ಎಂ.ಕೆ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾವು ಈಗ 21ನೇ ಶತಮಾನದಲ್ಲಿ ಇದ್ದೇವೆ. ಆದರೆ, ಗುಳ್ಯ ಗ್ರಾಮ ಎನ್ನುವಂತಹ ಪ್ರದೇಶದಲ್ಲಿ ST (Scheduled Tribes) ಗಳು ವಾಸಿಸುವಂತಹ ಸ್ಥಳ. ಆ ಸ್ಥಳಕ್ಕೆ ಹೋಗುವುದಕ್ಕೆ ರಸ್ತೆ ಮತ್ತು ಯಾವುದೇ ರೀತಿಯ ಮೂಲಭೂತ ಸೌಕರ್ಯಗಳು ಇಲ್ಲ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಕೇಳಿದಾಗ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಅಲ್ಲಿಗೆ ಸುಮಾರು ಒಂದು ಕೋಟಿ ರೂಪಾಯಿಗಳ ಅನುದಾನ ನೀಡಿ, ಅಲ್ಲಿ ಸೇತುವೆ ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕೆ ನಾನು ಮಾನ್ಯ ಲೋಕೋಪಯೋಗಿ ಸಚಿವರನ್ನು ಅಭಿನಂದಿಸುತ್ತೇನೆ. ಆದರೆ, ನೀಡಿರುವ ಒಂದು ಕೋಟಿ ರೂಪಾಯಿ ಹಣ ಯಾವುದಕ್ಕೂ ಸಾಕಾಗುವುದಿಲ್ಲ. ಇವತ್ತಿನ ದಿವಸ ಒಂದು ಸೇತುವೆ ನಿರ್ಮಾಣವಾಗಬೇಕು ಎಂದರೆ, ಅದಕ್ಕೆ ಸಾಕಷ್ಟು ಹಣದ ಅವಶ್ಯಕತೆ ಇದೆ. ಎಲ್ಲದಕ್ಕಿಂತ ಹೆಚ್ಚಿನದಾಗಿ ಇವತ್ತು ಹೆಚ್ಚು ಕಡಿಮೆ South Canara ಮತ್ತು ನಮ್ಮ ಮಲೆನಾಡಿಗೆ ಸಂಬಂಧ ಇರುವಂತಹ ಜಾಗ. ಅಲ್ಲಿ ವಾಸಿಸುವಂತಹವರಿಗೆ ಹೊರಪ್ರಪಂಚದ ಅರಿವೇ ಇಲ್ಲ. ಅವರು ತುಂಬಾ ಮುಗ್ದರು. ಹಾಗಾಗಿ ಅಂತಹವುಗಳನ್ನು ಗುರುತು ಮಾಡಿ, ಏನು ಮಾನ್ಯ ಲೋಕೋಪಯೋಗಿ ಸಚಿವರು ಸೇತುವೆ ನಿರ್ಮಾಣಕ್ಕೆ ಒಂದು ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದಾರೆ, ಖಂಡಿತವಾಗಿ ಅಷ್ಟು ಹಣದಿಂದ ಸೇತುವೆಯನ್ನು ನಿರ್ಮಿಸುವುದಕ್ಕೆ ಆಗುವುದಿಲ್ಲ. ಕನಿಷ್ಠ ಐದು ಕೋಟಿ ರೂಪಾಯಿಗಳ ಹಣವನ್ನು ಮೀಸಲಾಗಿಡಬೇಕೆಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಲೋಕೋಪಯೋಗಿ ಸಚಿವರು ಅದು ನಮ್ಮ ಇಲಾಖೆಗೆ ಸಂಬಂಧಪಡುವುದಿಲ್ಲ, ಅದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಪಡುವಂತಹ ವಿಚಾರವೆಂದು ಹೇಳಿದ್ದಾರೆ. ಹಾಗಾಗಿ, ತಾವು ಕೂಡ ಈ ವಿಚಾರದಲ್ಲಿ ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೂಚನೆಯನ್ನು ನೀಡಿ, ಅಲ್ಲಿಗೆ ತುರ್ತಾಗಿ ಆ ಬಡ ಜನರ ನೋವಿಗೆ ಮತ್ತು ಬಡ ಜನರಿಗೆ ಸಂಪರ್ಕವನ್ನು ಕಲ್ಪಿಸಿ, ಅವರು ಹಳ್ಳಿಯಿಂದ ಪೇಟೆ ಕಡೆಗೆ ಬರುವಂತಹ ವ್ಯವಸ್ಥೆ ಮಾಡಿಕೊಡಬೇಕು. ಹಾಗೆಯೇ, ಮಾನ್ಯ ಲೋಕೋಪಯೋಗಿ ಸಚಿವರು ಆ ಜನರ ಪರವಾಗಿ ನಿಂತು, ಅವರಿಗೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಸಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಾಣೇಶ್‌ರವರ ಕಳಕಳಿಯನ್ನು ನಾನು ಲೋಕೋಪಯೋಗಿ ಸಚಿವನಾಗಿ ಮೆಚ್ಚಿಕೊಳ್ಳುತ್ತೇನೆ. ಆ ಪ್ರದೇಶದಲ್ಲಿ ಹಿಂದುಳಿದ

ವರ್ಗದ ಜನರು ವಾಸವಾಗಿದ್ದಾರೆ ಮತ್ತು ಅವರಿಗೆ ಹೊರ ಜಗತ್ತಿನ ಅರಿವೇ ಇಲ್ಲ. ಆದರೆ, ಲೋಕೋಪಯೋಗಿ ಇಲಾಖೆಯ ಕಾನೂನಿನ ಅಡಿಯಲ್ಲಿ, ಲೋಕೋಪಯೋಗಿ ಇಲಾಖೆಗೆ ಹೊರತುಪಡಿಸಿದಂತಹ ಬೇರೆ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ನಾವು ಲೋಕೋಪಯೋಗಿ ಇಲಾಖೆಯ ವತಿಯಿಂದ ಒಂದು ಕೋಟಿ ರೂಪಾಯಿ ಹಣ ನೀಡಿರುವುದು, ಕಾಲುಸಂಕ ಎನ್ನುವಂತಹ ಒಂದು ಸೇತುವೆಯನ್ನು ಮಾಡುವುದಕ್ಕೆ. ಅಂದರೆ, river ಅಥವಾ ಹಳ್ಳಕೊಳ್ಳ ಇರಲಿ, ಈ ದಂಡೆಯಿಂದ ಆ ದಂಡೆಗೆ ಹೋಗುವುದಕ್ಕೆ ಕಾಲುಸಂಕವೆಂದು ಒಬ್ಬ ಮನುಷ್ಯ ಅಥವಾ ಒಂದು motor vehicle ಅಡ್ಡಾಡುವಷ್ಟು ಒಂದು ಕಾಲುಸಂಕವನ್ನು ಮಾಡುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ನೀಡಿದ್ದೇವೆ. SCP/TSP (Special Component Plan/Tribal Sub Plan) ಯೋಜನೆಯಡಿಯಲ್ಲಿ ಈ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಈಗಾಗಲೇ SCP/TSP ಹಣವನ್ನು ಹಂಚಿದ್ದೇವೆ. ಈಗ ಎಲ್ಲಿಯಾದರೂ savings ಉಳಿದಿತ್ತು ಎಂದರೆ, ಖಂಡಿತವಾಗಿ savings ಉಳಿದಂತಹ ಹಣವನ್ನು ಮಾನ್ಯ ಸದಸ್ಯರಾದ ಶ್ರೀ ಪ್ರಾಣೇಶ್‌ರವರು ಹೇಳಿದಂತಹ ರಸ್ತೆಗೆ ಒದಗಿಸಿಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

**ಶ್ರೀ ಪ್ರಾಣೇಶ್ ಎಂ.ಕೆ.:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 286**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ. ನಮೋಶಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈಗ ತಾಂಡಾ, ಕುರುಬ ಹಟ್ಟಿ ಮತ್ತು ವಡ್ಡರ ಹಟ್ಟಿ ಎಂದು ಇದೆ. ಈ ಎಲ್ಲಾ ಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡುವಂತಹ ಒಂದು ಒಳ್ಳೆಯ ಕೆಲಸವನ್ನು ಸರ್ಕಾರ ಮತ್ತು ಮಾನ್ಯ ಸಚಿವರು ಮಾಡುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಹೇಳಬಯಸುವುದೇನೆಂದರೆ, ಇವುಗಳನ್ನೆಲ್ಲಾ ಪರಿವರ್ತನೆ ಮಾಡುವುದರಿಂದ, ಗೊಲ್ಲರಾಗಲಿ, ಭೋವಿಯಾಗಲಿ ಈ ಎಲ್ಲಾ ಜನಾಂಗದವರನ್ನು ಮುಖ್ಯವಾಹಿನಿಗೆ ತರುವುದಕ್ಕೆ ಇದು ಒಂದು ಒಳ್ಳೆಯ ಯೋಜನೆ ಎಂದು ಹೇಳಬಹುದು. ಏಕೆಂದರೆ, ಇದ್ದಂತಹ ಅವರ ಜಮೀನುಗಳು ಕಂದಾಯ ಗ್ರಾಮಗಳಾಗಿ ಪರಿವರ್ತನೆಯಾದರೆ, ಅವರಿಗೆ land records ಸಿಗುತ್ತದೆ. ಈ ಎಲ್ಲಾ ದಾಖಲೆಗಳ ಮುಖಾಂತರ ಅವರು ಮನೆಗಳನ್ನು ಕಟ್ಟಿಕೊಳ್ಳಬಹುದು ಮತ್ತೇನೋ ಮಾಡಬಹುದು. ಮಾನ್ಯ ಸಚಿವರು ಒಂದು ಒಳ್ಳೆಯ process ಮಾಡುತ್ತಿದ್ದಾರೆ. ಮೊನ್ನೆಯ ದಿವಸ ಮಾನ್ಯ ಸಚಿವರು ನಮ್ಮ ಗುಲ್ಬರ್ಗ ಜಿಲ್ಲೆಗೆ ಬಂದಿದ್ದರು. ನಮ್ಮ ಜಿಲ್ಲೆಯಲ್ಲಿ ಒಟ್ಟು 483 ತಾಂಡಾಗಳ ಪೈಕಿ, 453 ತಾಂಡಾಗಳನ್ನು ಈಗಾಗಲೇ ಪರಿವರ್ತನೆ ಮಾಡಿಸಿದ್ದಾರೆ. ಮಾನ್ಯ ಸಚಿವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ನಾನು ಮಾನ್ಯ ಕಂದಾಯ ಸಚಿವರಿಗೆ ಅಭಿನಂದನೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಕಲ್ಯಾಣ ಕರ್ನಾಟಕದ ಹಿಂದುಳಿದ ಭಾಗದ ಉಳಿದ ಜಿಲ್ಲೆಗಳಲ್ಲಿ ಎಷ್ಟು ತಾಂಡಾಗಳಿವೆ? ತಾಂಡಾಗಳನ್ನು ಪರಿವರ್ತನೆ ಮಾಡುವುದಕ್ಕೆ ಎಷ್ಟು ಯೋಜನೆಗಳನ್ನು ಮಾಡಿದ್ದಾರೆ? ಅವುಗಳ ಸರ್ವೇ ಕೆಲಸ ಎಲ್ಲಿಗೆ ಬಂದು ನಿಂತಿದೆ? ಅದು ಪೂರ್ತಿ ಮುಗಿಯಿತೆ ಅಥವಾ ಅದಕ್ಕೆ ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ? ಇದೇ ರೀತಿ ಇಡೀ ರಾಜ್ಯದಲ್ಲಿ ಇದನ್ನು ತಾವು ಪೂರ್ಣಗೊಳಿಸಬೇಕು. ಆದಷ್ಟು ಬೇಗ ಅವುಗಳನ್ನು convert ಮಾಡಬೇಕು. ಅದರ ಜೊತೆಗೆ ಅವರಿಗೆ ಹಕ್ಕುಪತ್ರಗಳನ್ನು ಸಹ ಕೊಡಬೇಕು. ಈ ಕಾರ್ಯಕ್ರಮ ಒಂದು ಒಳ್ಳೆಯ ಕಾರ್ಯಕ್ರಮವಾಗಿದೆ. ಮಾನ್ಯ ಸಚಿವರು ಇದನ್ನು ತಕ್ಷಣ ಬಹಳ ವೇಗವಾಗಿ ಮಾಡಬೇಕು. ಕೆಲವು ಕಡೆಗಳಲ್ಲಿ ಸರ್ವೇ ಕೆಲಸ ಮಂದಗತಿಯಲ್ಲಿ ನಡೆಯುತ್ತಿದೆ ಎಂದು ಕೇಳಲ್ಪಟ್ಟಿದ್ದೇನೆ. ಅದಕ್ಕೆ ದಯವಿಟ್ಟು ಈ ಕೆಲಸವನ್ನು ಬಹಳ ವೇಗವಾಗಿ ಮಾಡಬೇಕು. ಇದು ಒಂದು ಬಹಳ ಒಳ್ಳೆಯ ಯೋಜನೆಯಾಗಿದೆ. ಸರ್ಕಾರ ಇದನ್ನು ಜಾರಿಗೆ ತರಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

(ಮುಂದು)

(811) 14.09.2022 12.00 LL-GR (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟರೆ ನಾನು ಮಾತನಾಡುತ್ತೇನೆ.

**ಸಭಾಪತಿಯವರು:-** ಇಲ್ಲ. ಮೊದಲು ಮಾನ್ಯ ಮಂತ್ರಿಗಳು ಉತ್ತರ ನೀಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಇದು ಲಂಬಾಣಿ ತಾಂಡಾಕ್ಕೆ ಸಂಬಂಧಪಟ್ಟ ವಿಷಯವಾಗಿದೆ.

**ಸಭಾಪತಿಯವರು:-** ಇದು ಪ್ರಶ್ನೋತ್ತರ ಅವಧಿ. ಈಗ ಮಾನ್ಯ ಸಚಿವರು ಉತ್ತರ ನೀಡಲಿ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮೊದಲು ನಾನು ಉತ್ತರ ನೀಡುತ್ತೇನೆ. ಆ ನಂತರ ಮಾನ್ಯ ಸದಸ್ಯರು ಮಾತನಾಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಹೌದು. ಈ ವಿಷಯದ ಬಗ್ಗೆ ಈ ಹಿಂದೆ ನಾನು ಸಾಕಷ್ಟು ಪ್ರಶ್ನೆಗಳನ್ನು ಕೇಳಿರುತ್ತೇನೆ. ಜೊತೆಗೆ, ನಾನು ಸಹ ಅದೇ ಸಮುದಾಯದಿಂದ ಬಂದವನು. ನನಗೂ ಸಹ ಮಾತನಾಡುವುದಕ್ಕೆ ಅವಕಾಶ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಪ್ರಶ್ನೆ ಮಾನ್ಯ ಶಶೀಲ್ ಜಿ. ನಮೋಶಿಯವರದ್ದು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಹೌದು.

**ಸಭಾಪತಿಯವರು:-** ಹಾಗಾಗಿ, ಅವರ ಪ್ರಶ್ನೆಗೆ ಮಾನ್ಯ ಸಚಿವರು ಮೊದಲು ಉತ್ತರ ನೀಡಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ಮಾಡಿರುವ ಕೆಲಸಗಳು...

(ಗೊಂದಲ)

**ಶ್ರೀ ನಾಗರಾಜು ಎಂ:-** ಮಾನ್ಯ ಸಭಾಪತಿಯವರೇ,...

(ಗೊಂದಲ)

**ಸಭಾಪತಿಯವರು:-** ಇದು ಪ್ರಶ್ನೋತ್ತರ ಅವಧಿ.

(ಗೊಂದಲ)

**ಶ್ರೀ ಶಶೀಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮೊದಲು ಮಾನ್ಯ ಸಚಿವರು ಉತ್ತರ ನೀಡಲಿ.

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಈ ಜನಾಂಗದ ವಿಷಯಗಳ ಬಗ್ಗೆ ಸಾಕಷ್ಟು ಕಡಿಮೆ ಚರ್ಚೆ ಆಗುತ್ತದೆ. ಹಾಗಾಗಿ, ನನಗೆ ಮಾತನಾಡುವುದಕ್ಕೆ ಒಂದು ಅವಕಾಶ ನೀಡಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಚಿವರು ಮೊದಲು ಉತ್ತರ ನೀಡಲಿ.

(ಗೊಂದಲ)

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಿದ ನಂತರ ನಾನು ಮಾತನಾಡುತ್ತೇನೆ.

(ಗೊಂದಲ)

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ...ಅವರು ಮಾಡಿದ್ದರೆ ನಾನು ಏತಕ್ಕೆ ಕೇಳುತ್ತಿದ್ದೆನು.

(ಗೊಂದಲ)

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್ ಜಿ. ನಮೋಶಿಯವರು ಬಹಳ ತುಳತಕ್ಕೆ ಒಳಗಾದಂತಹ ಸಮುದಾಯದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ವಿಶೇಷವಾಗಿ ಲಂಬಾಣಿ ತಾಂಡಾಗಳು, ಗೊಲ್ಲರಹಟ್ಟಿ, ಸೋಲಿಗ, ಕಾಡುಕುರುಬ ಈ ರೀತಿ ಇನ್ನು ಅನೇಕ ಸಮುದಾಯಗಳು ಇವೆ, ಅವುಗಳು ಊರಿಂದ ಹೊರಗಡೆ ಇರುತ್ತವೆ. ಜೊತೆಗೆ, ಇವರು ಊರಿಂದ ಊರಿಗೆ ಅಲೆಮಾರಿಗಳ ರೀತಿ ಸುತ್ತುವಂತಹ ಒಂದು ವ್ಯವಸ್ಥೆಯನ್ನು ಈ ಸಮಾಜದಲ್ಲಿ ನಾವು ನೋಡಿದ್ದೇವೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಅದೇನೆಂದರೆ, ಕೆ.ಆರ್.ಎಸ್., ಡ್ಯಾಂ ಕಟ್ಟುವುದಕ್ಕಾಗಿ ಶ್ರೀರಂಗಪಟ್ಟಣ ಏನಿದೆ ಅಲ್ಲಿಗೆ ಸುಮಾರು 60 ವರ್ಷದ ಹಿಂದೆ ಈ ತಾಂಡಾಗಳ ಜನರು ಬಂದಿದ್ದು, ಸದರಿ ಡ್ಯಾಂ ಕಾಮಗಾರಿ ಪೂರ್ಣಗೊಂಡ ನಂತರ ಅವರು ವಾಪಸ್ಸು ಹೋಗದೇ ಅಲ್ಲಿಯೇ ಇರುತ್ತಾರೆ. ಸುಮಾರು 60 ವರ್ಷ ಆದರೂ ಸಹ, ಅವರು ಎಲ್ಲಿ ವಾಸವಾಗಿದ್ದರು ಅದನ್ನು ಗ್ರಾಮ ಎಂದು ಘೋಷಣೆ ಮಾಡಲಿಲ್ಲ ಮತ್ತು ಸರ್ಕಾರದ ಸವಲತ್ತುಗಳನ್ನು ಸಹ ಕೊಡಲಿಲ್ಲ. ಮೊಟ್ಟಮೊದಲನೆಯ ಬಾರಿಗೆ, ನಾವು ಆ ಗ್ರಾಮವನ್ನು ಗುರುತು ಮಾಡಿ, ಆ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಮಾಡಿ, ಅಲ್ಲಿದ್ದಂತಹ ಸುಮಾರು 744 ಜನರಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ. ಈಗಾಗಲೇ, ಕಲ್ಯಾಣ ಕರ್ನಾಟಕ ಭಾಗದಲ್ಲಿ ತಾಂಡಾಗಳ ಸಂಖ್ಯೆ 1061 ಇದೆ. ಅದರಲ್ಲಿ ಇವೆಲ್ಲವೂ ಸೇರಿವೆ. ಈ ತಾಂಡಾಗಳನ್ನು ಮಾಡಬೇಕಾದರೆ, ಮೊದಲು ನೋಟಿಫೈ ಮಾಡಬೇಕು. ಆ ನಂತರ ಅದು ಸರ್ಕಾರಕ್ಕೆ ಬರುತ್ತದೆ. ಅದಾದ ನಂತರ, ಪುನಃ ಗೆಜೆಟ್ ನೋಟಿಫಿಕೇಷನ್ ಮಾಡುವ ಮುಖಾಂತರ ಆ ಗ್ರಾಮ ಘೋಷಣೆ ಮಾಡಬೇಕು.

ಒಂದು ಕಂದಾಯ ಗ್ರಾಮ ಮಾಡಬೇಕಾದರೆ, ಸುಮಾರು 50 ಕುಟುಂಬಗಳು ಮತ್ತು ಸುಮಾರು 250 ಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರಬೇಕು, ಅದು ಸುಮಾರು 100 ಎಕರೆ ವಿಸ್ತೀರ್ಣ ಇರಬೇಕು ಹಾಗೂ ಇದು ಮೂಲ ಗ್ರಾಮದಿಂದ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿರಬೇಕೆಂಬ ಮಾನದಂಡವನ್ನು ನಾವು ಮಾಡಿದ್ದೇವೆ. ಈ ಮಾನದಂಡಗಳ ಆಧಾರದ ಮೇರೆಗೆ ಕಂದಾಯ ಗ್ರಾಮ ಘೋಷಣೆ ಮಾಡಬೇಕು. 2091 ಗ್ರಾಮಗಳನ್ನು ಘೋಷಣೆ ಮಾಡುವುದಕ್ಕೆ ಈಗಾಗಲೇ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿದ್ದೇವೆ. 1166 ಗ್ರಾಮಗಳಿಗೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಪ್ರಾಥಮಿಕ ಅಧಿಸೂಚನೆಗೆ ಸುಮಾರು 925 ಪ್ರಸ್ತಾವನೆಗಳು ಬಂದಿರುತ್ತವೆ. ಇಷ್ಟು ಕೂಡ ಈ ಸಮಾಜ ಏನು ತುಳಿತಕ್ಕೆ ಒಳಗಾಗಿದೆ, ಅದನ್ನು ಸಮಾಜದ ಮುಖ್ಯ ವಾಹಿನಿಗೆ ತರಬೇಕೆಂದು ಕಂದಾಯ ಗ್ರಾಮಗಳೆಂದು ಘೋಷಣೆ ಮಾಡುತ್ತಿದ್ದೇವೆ. ಇದು ಬರುವುದರಿಂದ ಏನಾಗುತ್ತಿದೆಯೆಂದರೆ, ಆ ಗ್ರಾಮದ ನಕ್ಷೆ ಇರಬಹುದು, ದಾಖಲೆಗಳು ಇರಬಹುದು, ಅವರಿಗೆ ಸಿಗಬೇಕಾದ ಸರ್ಕಾರದ ಸವಲತ್ತುಗಳು ಇರಬಹುದು, ಚುನಾವಣಾ ಆಯೋಗಕ್ಕೆ ಮಾಹಿತಿ ಇರಬಹುದು, ಇವೆಲ್ಲವೂ ಸಿಗುತ್ತದೆ. ಇಲ್ಲವಾದರೆ, ಅವರು ಹಾಗೆಯೇ ಇರಬೇಕು. ಇದರಿಂದಾಗಿ, ಅವರಿಗೆ ಅಂತಹ ಯಾವುದೇ ಸರ್ಕಾರದ ಸವಲತ್ತುಗಳು ಸಿಗುವುದಿಲ್ಲ.

ನಾನು ಕಂದಾಯ ಸಚಿವನಾಗಿ ಬಂದ ನಂತರ, ಈ ಬಗ್ಗೆ ಒಂದು ಡ್ರೈವ್ ಮಾಡಬೇಕು. ಇದಕ್ಕೆ ಒಂದು ರೂಪ ಕೊಡಬೇಕು. ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಲಂಬಾಣಿ ತಾಂಡಾ ಇರಬಹುದು, ಕುರುಬರ ಹಟ್ಟಿ ಅಥವಾ ಇತರೆ ಬೇರೆ ತಾಂಡಾಗಳು ಹೆಚ್ಚು ಇವೆ. ಹಾಗಾಗಿ, ನಾನು ಅದನ್ನು ಡ್ರೈವ್ ತೆಗೆದುಕೊಳ್ಳುತ್ತಿದ್ದೇನೆ. ಇನ್ನು ಮುಂದಿನ ಎರಡು ತಿಂಗಳೊಳಗಾಗಿ... ಈ ವಿಷಯದಲ್ಲಿ ನಾನು ಪ್ರಯತ್ನ ಮಾಡುತ್ತಿದ್ದು, ಅದರಲ್ಲಿ ಸಾಧ್ಯ ಎಷ್ಟು ಆಗುತ್ತದೋ ಅದು ನನಗೆ ಗೊತ್ತಿರುವುದಿಲ್ಲ. ಆದರೆ, ಪ್ರಯತ್ನ ಅಂತೂ ಮಾಡುತ್ತಿದ್ದೇನೆ. ಕನಿಷ್ಠ ಪಕ್ಷ ಸುಮಾರು 50 ಸಾವಿರ ಜನರಿಗಾದರೂ.... ಈಗಿರುವ ಲಂಬಾಣಿ ತಾಂಡಾಗಳಿಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಇತ್ತೀಚೆಗೆ ನಾನು ಸಹ ಈ ತಾಂಡಾಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು, ಆ ತಾಂಡಾದಲ್ಲಿಯೇ ಗ್ರಾಮ ವಾಸ್ತವ್ಯ ಸಹ ಮಾಡಿರುತ್ತೇನೆ. ಅಲ್ಲಿ ಅವರು ಕೇವಲ ಕಲ್ಲಿನಲ್ಲಿ ಮನೆ ನಿರ್ಮಿಸಿಕೊಂಡು, ಮೇಲ್ಛಾವಣಿಗೆ ಶೀಟು ಹಾಕಿಕೊಂಡಿರುತ್ತಾರೆ. ಅವರಿಗೆ ಯಾವುದೇ ದಾಖಲೆಗಳು ಇರುವುದಿಲ್ಲ. ಇದರಿಂದಾಗಿ, ಅವರಿಗೆ ಸರ್ಕಾರದ ಸವಲತ್ತುಗಳು ಸಿಗುವುದಿಲ್ಲ. ಆದುದರಿಂದ, ಏನಾದರೂ ಮಾಡಿ ಕನಿಷ್ಠ ಪಕ್ಷ ಸುಮಾರು 50 ಸಾವಿರ ಲಂಬಾಣಿ ತಾಂಡಾಗಳಿಗೆ ಒಂದು ಹಕ್ಕುಪತ್ರ ಕೊಡಬೇಕು. ಇದರಲ್ಲಿ ನನ್ನ ಉದ್ದೇಶ ಏನೆಂದರೆ, ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಒಂದು ಗಂಟೆಯ ಸಮಯ ಅವರಿಗೆ ಕೊಡಬೇಕು. ಅಂದರೆ, ಮಾನ್ಯ ಹರಿಪ್ರಸಾದ್‌ರವರೇ, ರೆಗ್ಯುಲರ್ ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಏನು ಪ್ರೊಸೆಸ್ ಮಾಡುತ್ತಾರೆ, ಅದನ್ನು ಬಿಟ್ಟು ಒಂದು ಗಂಟೆ ಸಮಯವನ್ನು ವಿಶೇಷವಾಗಿ ಲಂಬಾಣಿ ತಾಂಡಾ,

ಕುರುಬರ ಹಟ್ಟಿ, ಗೊಲ್ಲರ ಹಟ್ಟಿ ಹಾಗೂ ಇತರೆ ತಾಂಡಾಗಳಿಗೆ ಕೊಟ್ಟು, ದಾಖಲೆಗಳನ್ನು ರಿಜಿಸ್ಟ್ರೇಷನ್ ಮಾಡಬೇಕು. ಏಕೆಂದರೆ, ನಾವು ಕೇವಲ ಹಕ್ಕುಪತ್ರಗಳನ್ನು ಕೊಟ್ಟು, ಫೋಟೋ ತೆಗೆಸಿಕೊಂಡು ಬರುವುದರಿಂದ ಏನೂ ಉಪಯೋಗವಾಗುವುದಿಲ್ಲ. ಅವರಿಗೆ ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಆ ಜಮೀನನ್ನು ಅವರಿಗೆ ವರ್ಗಾವಣೆ ಮಾಡಿದರೆ, ಅವರಿಗೆ ಸರ್ಕಾರದ ಎಲ್ಲಾ ಸವಲತ್ತುಗಳು ಸಿಗುತ್ತದೆ. ಅಂದರೆ, ವಸತಿ ಇಲಾಖೆಯಿಂದ ಮನೆ ಕೊಡುವಂಥದ್ದು, ಈ ರೀತಿ ಇನ್ನು ಅನೇಕ ಸವಲತ್ತುಗಳು ಇವೆ, ಅವೆಲ್ಲವನ್ನೂ ಕೊಡುವುದಕ್ಕೆ ಅವಕಾಶವಾಗುತ್ತದೆ. ಅದನ್ನು ಮಾಡುವಂತಹ ಪ್ರಯತ್ನವನ್ನು ಈಗ ನಾನು ಶುರು ಮಾಡಿದ್ದೇನೆ. ಇನ್ನು ಮುಂದಿನ ಎರಡು ತಿಂಗಳಿನಲ್ಲಿ ಇದಕ್ಕೆ ಒಂದು ಅಂತಿಮ ರೂಪ ಕೊಟ್ಟು ಇವರೆಲ್ಲರಿಗೂ ದಾಖಲೆಗಳನ್ನು ಕೊಡುವಂತಹ ಕೆಲಸ ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ...

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿದ್ದಾರೆ. ಅವರು ಹೇಳುವ ಪ್ರಕಾರ ಆ ತಾಂಡಾಗಳಿಗೆ ದಾಖಲೆಗಳು ಇರುವುದಿಲ್ಲ ಎನ್ನುವುದಾಗಿದೆ. ಈ ತಾಂಡಾಗಳಿಗೆ ದಾಖಲೆಗಳು ಏತಕ್ಕೆ ಬರುವುದಿಲ್ಲವೆಂದರೆ, ಅದು ಕಂದಾಯ ಗ್ರಾಮದ ವ್ಯಾಪ್ತಿಗೆ ಬರುವುದಿಲ್ಲ. ಆದುದರಿಂದ, ಅದನ್ನು ಸಹ ಕಂದಾಯ ಗ್ರಾಮಗಳೆಂದು ಪರಿಗಣಿಸಿದರೆ, ಅವರಿಗೆ ದಾಖಲೆಗಳು ಸಿಗುತ್ತವೆ. ಉದಾಹರಣೆಗೆ, ಹಕ್ಕಿ-ಪಿಕ್ಕರಿಗೆ ದಾಖಲೆಗಳು ಇರುವುದಿಲ್ಲ. ಆ ವರ್ಗದ ಎಷ್ಟೋ ಕೋಟಿ ಜನರು ನಮ್ಮ ಜನಸಂಖ್ಯೆಯಲ್ಲಿ ಬರುವುದೇ ಇಲ್ಲ. ಅವರಿಗೆಲ್ಲಾ ದಾಖಲೆಗಳನ್ನು ನೀಡುವುದಕ್ಕೆ ಮಾನ್ಯ ಸಚಿವರು ಮೊದಲನೇ ಹೆಜ್ಜೆ ಇಟ್ಟಿದ್ದಾರೆ, ಅದನ್ನು ಕಂದಾಯ ಇಲಾಖೆಯಿಂದ ಗ್ರಾಮ ಎಂದು ಘೋಷಣೆ ಮಾಡಿದಾಗ ಅವರಿಗೆ ಅನುಕೂಲವಾಗುತ್ತದೆ.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಏನು ಸಲಹೆ ಕೊಟ್ಟಿದ್ದಾರೆ. ಅದನ್ನು ನಾವು ಸ್ವೀಕಾರ ಮಾಡಿದ್ದೇವೆ. ಅದರಂತೆ, ಅದನ್ನು ಕಂದಾಯ ಗ್ರಾಮಗಳೆಂದು ಘೋಷಣೆ ಮಾಡಿ, ನೋಟಿಫೈ ಮಾಡುತ್ತೇವೆ ಮತ್ತು ಆ ಗ್ರಾಮಗಳಿಗೆ ಯಾವ ಹೆಸರು ಸೂಚಿಸುತ್ತಾರೆ, ಆ ಹೆಸರಗಳನ್ನೇ ಆ ಗ್ರಾಮಗಳಿಗೆ ಇಡುತ್ತೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅದೇ ರೀತಿ ಬೇರೆ ಜಿಲ್ಲೆಗಳಲ್ಲಿಯೂ ಸಹ ಕಂದಾಯ ಗ್ರಾಮಗಳೆಂದು ಆದಷ್ಟು ಬೇಗ ಘೋಷಣೆ ಮಾಡಬೇಕೆಂದು ಹೇಳಿ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿಯಲ್ಲಿ ಇನ್ನು ಎಷ್ಟು ಚರ್ಚೆ ಮಾಡುತ್ತೀರಿ?

(ಗೊಂದಲ)

**ಪ್ರಶ್ನೆ ಸಂಖ್ಯೆ: 293**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು ಮಾನ್ಯ ಸಚಿವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲೇಬೇಕು. ಅವರು ಕಂದಾಯ ಸಚಿವರಾದ ನಂತರ, ಇಲಾಖೆಯಲ್ಲಿ ಹಲವಾರು ಜನಸ್ನೇಹಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ, ಸಾರ್ವಜನಿಕರಿಗೆ ವಿಶೇಷವಾಗಿ ರೈತಾಪಿ ಜನರಿಗೆ ಅನುಕೂಲವಾಗುವಂತಹ ಕೆಲಸ ಮಾಡಿದ್ದಾರೆ. ಸ್ವಾವಲಂಬಿ app ಇರಬಹುದು, ಆನ್‌ಲೈನ್‌ನಲ್ಲಿ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸುವಂತಹದ್ದು ಇರಬಹುದು, ಮನೆ ಬಾಗಿಲಿಗೆ ಕಂದಾಯ ದಾಖಲೆಗಳನ್ನು ಒದಗಿಸುವಂಥದ್ದು ಇರಬಹುದು. ಇವೆಲ್ಲವನ್ನೂ ಮಾಡಿದ್ದಾರೆ. ಇದರ ಜೊತೆಗೆ, ಮಾನ್ಯ ಸಚಿವರು ಗ್ರಾಮ ವಾಸ್ತವ್ಯವನ್ನು ಸಹ ಮಾಡಿದ್ದಾರೆ. ಒಂದು ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತ್ರ ಗ್ರಾಮ ವಾಸ್ತವ್ಯ ಮಾಡುತ್ತಾ ಇದ್ದರು ಎನ್ನುವಂತಹ ಮಾತನ್ನು ಹೊರತುಪಡಿಸಿ, ಕಂದಾಯ ಮಂತ್ರಿಗಳು ಸಹ ಗ್ರಾಮ ವಾಸ್ತವ್ಯವನ್ನು ಮಾಡಬಹುದು ಎಂದು ತೋರಿಸಿಕೊಟ್ಟಂತಹವರು ಅವರು. ಜೊತೆಗೆ, ಎಷ್ಟೋ ಜನ ಜಿಲ್ಲಾಧಿಕಾರಿಗಳಿಗೆ ಕೆಳಮಟ್ಟದಲ್ಲಿ ರೈತರ ಕಷ್ಟ-ಕಾರ್ಪಣ್ಯಗಳು ಗೊತ್ತಿಲ್ಲದೇ ಇರುವಂತಹ ಸಂದರ್ಭದಲ್ಲಿ, ಜಿಲ್ಲಾಧಿಕಾರಿಗಳು ಸಹ ಸಮಾಜದ ಕೆಳಮಟ್ಟಕ್ಕೆ ಹೋಗಿ, ರೈತರು ಯಾವ ರೀತಿ ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸಬಹುದು ಎನ್ನುವುದನ್ನು ಸ್ವತಃ ಪರಿಶೀಲಿಸಿ, ಮುಂದಿನ ದಿನಗಳಲ್ಲಿ ರೈತರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಸಹ ಮಾಡಿರುವುದನ್ನು ನಾವು ನೋಡಿದ್ದೇವೆ.

ಆದರೆ, ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವೊತ್ತಿನ ದಿವಸ ದೇವರು ವರ ಕೊಟ್ಟರೂ ಸಹ, ಪೂಜಾರಿ ವರ ಕೊಡುವಂತಹ ವ್ಯವಸ್ಥೆ ನಮ್ಮಲ್ಲಿ ಇರುವುದಿಲ್ಲ. ಇವೊತ್ತಿನ ದಿವಸ ಹಲವಾರು ರೈತರಿಗೆ ದರಖಾಸ್ತಿನ ಮುಖಾಂತರವಾಗಿ ಸಣ್ಣ-ಪುಟ್ಟ ಜಮೀನುಗಳನ್ನು ಸರ್ಕಾರ ಕೊಟ್ಟಿರುತ್ತದೆ. ಆದರೆ, ದರಖಾಸ್ತಿನ ಮುಖಾಂತರವಾಗಿ ಬಂದಿರುವಂತಹ ಜಮೀನುಗಳಲ್ಲಿ ಏನಿವೆ, ಅವುಗಳಲ್ಲಿ ವ್ಯವಸಾಯ ಮಾಡುತ್ತಿರುವಂತಹವರಿಗೆ ಪೋಡಿ ಮಾಡಿಕೊಡುವಂತಹ ಕೆಲಸಗಳನ್ನು ಮಾಡುತ್ತಿರುವುದಿಲ್ಲ. ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ಸುತ್ತ-ಮುತ್ತಲಿರುವ ಜಮೀನುಗಳನ್ನು ಒಮ್ಮೆ ತಾವು ಗಮನಿಸಲೇಬೇಕು. ಅಲ್ಲಿನ ರೈತಾಪಿ ವರ್ಗದ ಜನರು ತಮ್ಮ ಜಮೀನಿನಲ್ಲಿ ಇವೊತ್ತಿನ ದಿವಸ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ, ತಮ್ಮ ಅಕ್ಕ-ಪಕ್ಕದಲ್ಲಿ ಬಡಾವಣೆಗಳು ನಿರ್ಮಾಣವಾಗಿರುವುದರಿಂದ ರೈತರು ವ್ಯವಸಾಯ ಮಾಡುವುದಕ್ಕೆ ಆಗುತ್ತಿರುವುದಿಲ್ಲ ಹಾಗೂ ಆ ರೈತರ ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೂ ಸಹ ಆಗುತ್ತಿಲ್ಲ. ಇದರಿಂದಾಗಿ, ರೈತಾಪಿ ವರ್ಗದ ಮಕ್ಕಳು ಬೆಂಗಳೂರು ನಗರ ಪ್ರದೇಶಗಳಿಗೆ ಬಂದು, ಸೆಕ್ಯೂರಿಟಿ

ಗಾರ್ಡ್‌ಗಳಾಗಿ, ಡೆಲಿವರಿ ಬಾಯ್‌ಗಳಾಗಿ, ಟ್ಯಾಕ್ಸಿ ಡ್ರೈವರ್‌ಗಳಾಗಿ ಹಾಗೂ ಬೇರೆ ಬೇರೆ ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆ.

ನಾನು ಮಾನ್ಯ ಸಚಿವರಲ್ಲಿ ಕೇಳಕೊಳ್ಳುವುದೇನೆಂದರೆ, ಇವೊತ್ತಿನ ದಿವಸ ರೈತರು ಸಾಲ ಪಡೆಯುವುದಕ್ಕೂ ಸಹ ಯಾವುದೇ ರೀತಿಯ ವ್ಯವಸ್ಥೆ ಆಗುತ್ತಿಲ್ಲ. ಅವರ ಆಸ್ತಿಗಳನ್ನು ತಮ್ಮ ಮಕ್ಕಳಿಗೆ ವಿಭಾಗ ಮಾಡುವುದಕ್ಕೂ ಸಹ ಪೋಡಿಯಾಗದೇ ಯಾವುದೇ ಕೆಲಸಗಳು ಆಗುತ್ತಿಲ್ಲ ಅಥವಾ ತಮ್ಮ ಜಮೀನು ಮಾರಾಟ ಮಾಡುವುದಕ್ಕೆ ಆಗುತ್ತಿಲ್ಲ. ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಕೊಳ್ಳುವುದೇನೆಂದರೆ, ಕೂಡಲೇ, ದರಖಾಸ್ತು ಜಮೀನುಗಳನ್ನು... ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 5 ವರ್ಷಗಳ ಅವಧಿಯಲ್ಲಿ ಭೂ ಮಂಜೂರಾತಿ ಪಡೆದ ಭೂಮಿಯ ಪೋಡಿಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಕೇಳದ್ದು, ಅದಕ್ಕೆ 34 ಅರ್ಜಿಗಳು ಬಾಕಿ ಇದ್ದು, ಅದರಲ್ಲಿ 11 ಅರ್ಜಿಗಳು ಬಾಕಿ ಇವೆಯೆಂದು ಉತ್ತರ ನೀಡಿರುತ್ತಾರೆ. ಆದರೆ, ಎಷ್ಟು ಅರ್ಜಿಗಳು ಎಷ್ಟು ವರ್ಷಗಳಿಂದ ಬಾಕಿ ಇವೆಯೆಂಬ ಬಗ್ಗೆ ಲೆಕ್ಕ ಇರುವುದಿಲ್ಲ. ಇವೊತ್ತಿನ ದಿವಸ ಒಂದು ಬದಲಾವಣೆ ತರಬೇಕೆಂದು ಮಾನ್ಯ ಸಚಿವರು ಹೊರಟಿದ್ದಾರೆ. ಆದರೆ, ಎಷ್ಟೋ ವರ್ಷಗಳಿಂದ ಅಧಿಕಾರಿ ವರ್ಗದವರು ವಿಲೆ ಮಾಡದೇ ಬಾಕಿ ಇಟ್ಟುಕೊಂಡಿರುತ್ತಾರೆ.

ಇವೊತ್ತಿನ ದಿವಸ ಅಧಿಕಾರಿ ವರ್ಗದವರು ಯಾವ ರೀತಿ ಕೆಲಸ ಮಾಡುತ್ತಾರೆ ಎನ್ನುವುದನ್ನು ಗಮನಿಸಲಿಕ್ಕೆ ಹೋದರೆ, ಕಳೆದ ಒಂದು ವರ್ಷದ ಹಿಂದೆ ಒಂದು ದಿನಪತ್ರಿಕೆಯಲ್ಲಿ ಒಂದು ವಿಷಯವನ್ನು ನಾನು ಗಮನಿಸಿದ್ದೆನು. ಅದೇನೆಂದರೆ, "ಯಾವುದಾದರೂ ಜಮೀನನ್ನು ಪೋಡಿ ಮಾಡಿಸಿಕೊಳ್ಳುವುದಕ್ಕೆ ನಾವು ಹೋದರೆ, ಆ ಆಸ್ತಿಯ ಬೆಲೆ ಏನಿದೆ, ಅದರಲ್ಲಿ ಶೇಕಡ 25 ರಷ್ಟು ನಮಗೆ ಕೊಡಿ" ಎನ್ನುವಂತಹ ಮಟ್ಟದಲ್ಲಿ ಅಲ್ಲಿನ ಅಧಿಕಾರಿಗಳು ಕೇಳುತ್ತಿದ್ದಾರೆನ್ನುವ ಮಾಹಿತಿಯನ್ನು ರೈತಾಪಿ ವರ್ಗದವರು ಹೇಳುತ್ತಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಸುಮಾರು 2 ಸಾವಿರ ಜನ ಹೊಸ ಸರ್ವೇಯರ್‌ಗಳನ್ನು ನಿಯುಕ್ತಿ ಮಾಡಿಕೊಳ್ಳುವುದಕ್ಕೆ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದೆ ಎಂದು ಹೇಳದ್ದಾರೆ. ಎಷ್ಟೋ ಜನರಿಗೆ ಇವೊತ್ತಿನ ದಿವಸ ಉದ್ಯೋಗ ಸೃಷ್ಟಿ ಮಾಡುವಂತಹ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಸರ್ವೇಯರ್‌ಗಳನ್ನು ಸರ್ಕಾರದಲ್ಲಿ ನಿಯುಕ್ತಿ ಮಾಡಿಕೊಳ್ಳಬೇಕು. ನಾನು ಕೇವಲ ಬೆಂಗಳೂರಿನ ವಿಷಯ ಹೇಳುತ್ತಿಲ್ಲ. ಇಡೀ ರಾಜ್ಯದಲ್ಲಿ ಎಷ್ಟು ರೈತರ ಜಮೀನುಗಳು ಇದೆಯೋ ಅದೆಲ್ಲವನ್ನೂ ಪೋಡಿ ಮಾಡಿಕೊಡುವ ಮುಖಾಂತರವಾಗಿ...

**ಸಭಾಪತಿಯವರು:–** ಮಾನ್ಯ ಮುನಿರಾಜುಗೌಡರೇ, ದಯಮಾಡಿ ತಮ್ಮ ಪ್ರಶ್ನೆ ಏನೆಂದು ಕೇಳಿ. ತಾವು ಈ ರೀತಿ ಮಾತನಾಡಿದರೆ, ಮಾನ್ಯ ಮಂತ್ರಿಗಳು ಏನು ಉತ್ತರ ನೀಡಬೇಕು? (ಗೊಂದಲ) ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದೇ ಇನ್ನೂ ಮುಗಿದಿರುವುದಿಲ್ಲ.

(ಗೊಂದಲ)

**ಶ್ರೀ ಮುನಿರಾಜು ಗೌಡ ಪಿ.ಎಂ.:–** ಮಾನ್ಯ ಸಭಾಪತಿಯವರೇ, ನಾನು ಆಗಲೇ ಹೇಳಿದಂತೆ, ರೈತರ ಜಮೀನನ್ನು ಆದಷ್ಟು ಬೇಗ ಪೋಡಿ ಮಾಡಿಕೊಟ್ಟು ಅವರಿಗೆ ಅನುಕೂಲ ಮಾಡಿಕೊಡುವಂತಹ ವ್ಯವಸ್ಥೆ ಮಾಡಬೇಕು. ದರಖಾಸ್ತು ಜಮೀನಿನಲ್ಲಿ ಏನಿದೆ, ಇವೊತ್ತಿನ ದಿವಸ ಅಧಿಕಾರಿ ವರ್ಗದವರು ಏನು ತೊಂದರೆ ಕೊಡುತ್ತಿದ್ದಾರೆ.

(ಗೊಂದಲ)

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ,...

(ಗೊಂದಲ)

**ಸಭಾಪತಿಯವರು:–** ಮಾನ್ಯ ಭೋಜೇಗೌಡರೇ, Hon'ble Member Sri Munirajugowda is capable of asking his question.

(ಮುಂದು)

(812) 14.09.2022 12.10 ವೈಎಲ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು "ದರಖಾಸ್ತು ಜಮೀನನ್ನು ಲ್ಯಾಂಡ್ ಗ್ರಾಂಟ್ ಮಾಡಲಾಗುತ್ತಿದ್ದು, ಅದಕ್ಕೆ ಪೋಡಿ ಆಗಬೇಕು, ಬಹಳ ಪೇಡಿಂಗ್ ಇದೆ" ಎನ್ನುವಂಥ ಪ್ರಶ್ನೆಯನ್ನು ಕೇಳಿದ್ದಾರೆ. ಈ ಸಮಸ್ಯೆ ಇವತ್ತಿನದಾಗಿಲ್ಲ. ಕಳೆದ ಸುಮಾರು 40, 50 ವರ್ಷಗಳಿಂದ ನಿರಂತರವಾಗಿರುವಂಥ ಸಮಸ್ಯೆಯಾಗಿದೆ. ಅದರಲ್ಲಿಯೂ ವಿಶೇಷವಾಗಿ ಎಲ್ಲರಿಗೂ ತಿಳಿದಿರುವಂತೆ ಜಮೀನಿನ ಬೆಲೆ ಜಾಸ್ತಿ ಇರುವುದರಿಂದ ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಸಮಸ್ಯೆಯಾಗಿದ್ದು, ಬೇರೆ ಕಡೆ ಅಷ್ಟು ಸಮಸ್ಯೆ ಇಲ್ಲ. ಆದ್ದರಿಂದ ಜಮೀನನ್ನು ಗ್ರಾಂಟ್ ಮಾಡುವಾಗ ದರಖಾಸ್ತು ಜಮೀನನ್ನು ಏನು ನೀಡಲಾಗಿದೆ, ಅದು ಸುಮಾರು 200 ಎಕರೆ ಜಮೀನಿದ್ದರೆ, ಸುಮಾರು 400 ಎಕರೆ ಜಮೀನು ಇದೆ ಎನ್ನುವಂತಹ ದಾಖಲೆ ಇದೆ. ಕೆಲವೊಂದು ಕಡೆಗಳಲ್ಲಿ ಸುಮಾರು 500, 600 ಎಕರೆಗಳಷ್ಟು ಜಮೀನಿನ ದಾಖಲೆ ಇವೆ. ಜಮೀನು ಇರುವುದು ಕೇವಲ ಸುಮಾರು 200 ಎಕರೆಯಾಗಿದ್ದು, ಸುಮಾರು 400, 500 ಎಕರೆ ಜಮೀನು ಇರುವಷ್ಟು ದಾಖಲೆಗಳಿವೆ. ಇದೊಂದು ದೊಡ್ಡ

ಸಮಸ್ಯೆಯಾಗಿರುವುದರಿಂದ ವಿಳಂಬವಾಗುತ್ತಿದ್ದು, ಅದಕ್ಕಾಗಿಯೇ ನಮೂನೆ 1 ರಿಂದ 5 ಮಾಡಲಾಗುತ್ತಿದೆ. ನಮೂನೆ 1 ರಿಂದ 5 ನಲ್ಲಿ ದಾಖಲೆಗಳನ್ನು ಸಲ್ಲಿಸಿದ ಮೇಲೆ ಆ ಜಮೀನುಗಳನ್ನು ಸರ್ವೇ ಮಾಡಿ, ಪೋಡಿ ಮಾಡಬೇಕಾಗಿದೆ. ಹಾಗೆಯೇ ಮೊನ್ನೆ ದಿವಸ ದೊಡ್ಡಬಳ್ಳಾಪುರಕ್ಕೆ ಸಂಬಂಧಿಸಿದಂತೆ ಒಂದು ಅರ್ಜಿ ಬಂದಿದ್ದು, 1992ನೇ ಸಾಲಿನಲ್ಲಿಯೇ ಆ ಜಮೀನಿನ ದಾಖಲೆಯನ್ನು ನೀಡಲಾಗಿದೆ. ಆದರೆ, ಹೊಸದಾಗಿ ಬಂದಿರುವ ದಾಖಲೆಯಲ್ಲಿ possession ನಲ್ಲಿ ಬೇರೆಯವರಿದ್ದು, ಅವರು ಕಾಂಪೌಂಡ್ ಸಹ ಹಾಕಿಕೊಂಡಿದ್ದಾರೆ. ಈ ರೀತಿ ಇರುವಾಗ ಆ ಜಮೀನನ್ನು ಯಾರಿಗೆ ನೀಡಬೇಕು? ಇಬ್ಬರ ಹತ್ತಿರವು ದಾಖಲೆ ಇದೆ. ಇದರಲ್ಲಿ ಏನಾಗಿದೆ ಎಂದರೆ, ಬಹಳ ವರ್ಷಗಳ ಹಿಂದೆ ಅಂದರೆ 1980 ಅಥವಾ 1990ನೇ ಸಾಲಿನಲ್ಲಿ ಯಾರೋ ಅಧಿಕಾರದಲ್ಲಿದ್ದವರು ನಿವೃತ್ತಿ ಹೊಂದಿದ ಮೇಲೆ ಸೀಲ್ ಅವರ ಹತ್ತಿರವೇ ಇದ್ದು, ಆ ಸೀಲನ್ನು ಒತ್ತಿ ಸಹಿ ಮಾಡಿಕೊಟ್ಟಿದ್ದಾರೆ ಎಂದು ಅನಿಸುತ್ತಿದೆ. ಹಾಗಾಗಿ ತಕ್ಷಣಕ್ಕೆ ಪೋಡಿ ಮಾಡಲು ಹೋದರೆ ದೊಡ್ಡ ಸಮಸ್ಯೆಯಾಗುತ್ತದೆ. ಅದಕ್ಕಾಗಿ ಸರ್ವೇ ಸಹ ವಿಳಂಬವಾಗುತ್ತಿದ್ದು, ಗೊಂದಲ ಇರುವುದರಿಂದ ನ್ಯಾಯಾಲಯದ ಮೆಟ್ಟಿಲು ಸಹ ಹತ್ತಿದ್ದಾರೆ. ಹಾಗಾಗಿ ಸರ್ಕಾರದಲ್ಲಿ ಸಹ ಇಂತಹ ಜಮೀನುಗಳಿಗೆ ನಮೂನೆ 1 ರಿಂದ 5 ಅನ್ನು ಮಾಡಿ, ಜಮೀನು ಕೊಡಬೇಕೆಂದು ತೀರ್ಮಾನವಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಸರ್ವೇ ಮಾಡುವುದು ವಿಳಂಬವಾಗುತ್ತಿದೆ. ಹೊಸದಾಗಿ 3 ಸಾವಿರ ಲೈಸೆನ್ಸ್ಡ್ ಸರ್ವೇಯರ್‌ಗಳನ್ನು ನೇಮಕ ಮಾಡಲು ಆದೇಶ ಹೊರಡಿಸಲಾಗಿದ್ದು, ಅವರು ನೇಮಕಗೊಂಡ ಮೇಲೆ ಈ ಜಿಲ್ಲೆಗೆ ಸಂಬಂಧಿಸಿದಂತೆ, ಯಾವ ಜಿಲ್ಲೆಗಳಲ್ಲಿ ಹೆಚ್ಚು ಸಮಸ್ಯೆ ಇದೆ, ಅಂತಹ ಜಿಲ್ಲೆಗಳಿಗೆ ಹೆಚ್ಚು ಸರ್ವೇಯರ್ಸ್ ಕಳುಹಿಸಿ, ಒತ್ತು ನೀಡಲಾಗುವುದು ಮತ್ತು ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸುವಂಥ ಕೆಲಸ ಮಾಡಲಾಗುತ್ತದೆ. ಅದರೊಂದಿಗೆ ನ್ಯಾಯ ಸಿಗುವಂಥ ಕೆಲಸವಾಗಬೇಕಾಗಿದೆ. ಯಾರೋ unauthorized ವ್ಯಕ್ತಿಗೆ ಜಮೀನು ಸಿಗಬಾರದು ಎಂಬುದು ನಮ್ಮ ದೃಷ್ಟಿಯಾಗಿರುವುದರಿಂದ ವಿಳಂಬವಾಗುತ್ತಿದ್ದು, ಆದಷ್ಟು ಬೇಗ ಇದನ್ನು ಮಾಡುತ್ತೇವೆ.

**ಶ್ರೀ ಮುನಿರಾಜುಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, 200 ಎಕರೆ ಇರುವ ಜಮೀನು 400 ಎಕರೆ ಜಮೀನು ಹೊಂದಿರುವಂಥ ದಾಖಲೆ ಇದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ, ಅಂತಹ ಅಧಿಕಾರಿಗಳು ಯಾರು ಇದ್ದಾರೆ ಅವರನ್ನು ಗುರುತಿಸುವಂಥ ಕೆಲಸ ಮಾಡಿ, ಶಿಕ್ಷೆ ಕೊಡಿಸುವಂಥ ಕೆಲಸವಾಗಬೇಕು.

**ಸಭಾಪತಿಯವರು:-** ಈಗಾಗಲೇ ಮಾನ್ಯ ಸಚಿವರು ಸಂಕ್ಷಿಪ್ತವಾಗಿ ಉತ್ತರ ನೀಡಿದ್ದಾರೆ. ತಾವು ವಿವರವಾಗಿ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ವಿವರವಾಗಿ ಉತ್ತರ ನೀಡಿದ್ದಾರೆ. ದಯವಿಟ್ಟು ತಾವು ಪ್ರಶ್ನೆ ಕೇಳುವುದನ್ನು ನಿಲ್ಲಿಸಬೇಕು. ಏಕೆಂದರೆ, ತಾವೇ ಆಡಳಿತ ಪಕ್ಷದವರಾಗಿದ್ದು, ಈ ರೀತಿ

ಮಾತನಾಡಿದರೆ ನಮಗೆ ಸದನ ನಡೆಸುವುದು ಕಷ್ಟವಾಗುತ್ತದೆ. ಮಾನ್ಯ ಮಂಜೇಗೌಡರು ಪ್ರಶ್ನೆಯನ್ನು ಕೇಳಬೇಕು.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಆಡಳಿತ ಪಕ್ಷದ ಸದಸ್ಯರೇ ಇರಬಹುದು. ಅವರು ನೇರವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಪೀಠದ ಮೂಲಕ ತಮ್ಮಲ್ಲಿ ಪ್ರಾರ್ಥಿಸುವುದೇನೆಂದರೆ, ತಾವು ದಯವಿಟ್ಟು ಮಾನ್ಯ ಸದಸ್ಯರು ಉತ್ತರವನ್ನು ಪಡೆದುಕೊಳ್ಳಲು ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಮಾನ್ಯ ಭೋಜೇಗೌಡರೆ, ಮಂಜೇಗೌಡರ ಪ್ರಶ್ನೆ ಮುಗಿದ ನಂತರ ತಮ್ಮ ಪ್ರಶ್ನೆಯೇ ಇರುವುದು.

**ಶ್ರೀ ಟಿ.ಎ.ಶರವಣ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರು ಕೇಳುತ್ತಿರುವುದು ಈಗ ತಾನೇ ನಡೆದಂತಹ ಪ್ರಶ್ನೆ ಏನಿದೆ, ಆ ಪ್ರಶ್ನೆಯನ್ನು ಆಡಳಿತ ಪಕ್ಷದ ಸದಸ್ಯರೆ ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ಸರಿಯಾಗಿ ಉತ್ತರ ಕೊಟ್ಟಿಲ್ಲ ಎನ್ನುವಂಥದ್ದಾಗಿದೆ.

**ಸಭಾಪತಿಯವರು:–** ಒಂದು ನಿಮಿಷ. ಶ್ರೀ ಅಡಗೂರ್ ಹೆಚ್.ವಿಶ್ವನಾಥ್‌ರವರು ಮಾತನಾಡುತ್ತಾರೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಾನು ಯಾವುದೇ ಪ್ರಶ್ನೆಯನ್ನು ಕೇಳುವುದಕ್ಕೆ ಎದ್ದು ನಿಂತುಕೊಳ್ಳಲಿಲ್ಲ. ತಮ್ಮ ಮೂಲಕ ಸದನಕ್ಕೆ ಪ್ರಶ್ನೋತ್ತರಕ್ಕೆ ಸಂಬಂಧಿಸಿದಂತೆ, ಬಹಳ ಮುಖ್ಯವಾದಂಥ ವಿಚಾರವನ್ನು ತಿಳಿಸಬೇಕಾಗಿದೆ. 1980ನೇ ಸಾಲಿನಲ್ಲಿ ದಿವಂಗತ ಆರ್.ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದು, ಶ್ರೀ ಕೆ.ಹೆಚ್.ರಂಗನಾಥ್‌ರವರು ಸ್ಪೀಕರ್ ಆಗಿದ್ದರು. 1981ನೇ ಸಾಲಿನಲ್ಲಿ ದೆಹಲಿಯಲ್ಲಿ CommonWealth Countries' Conference ಕಾರ್ಯಕ್ರಮ ನಡೆಯಿತು. ನಾನು ಆ ಕಾನ್ಫರೆನ್ಸ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲು ನನಗೆ ಶ್ರೀ ಕೆ.ಹೆಚ್.ರಂಗನಾಥ್‌ರವರು ಅವಕಾಶ ಕಲ್ಪಿಸಿದ್ದರು. ಆಗ ಒಂದೇ ವಿಷಯದ ಮೇಲೆ 3 ದಿನಗಳ ಕಾಲ ಚರ್ಚೆ ನಡೆಯಿತು. ವಿಷಯವೇನೆಂದರೆ, "How to make the Question Hour an effective one" ಹೇಗೆ ಪ್ರಶ್ನೋತ್ತರ ವೇಳೆಯನ್ನು ಬಹಳ ಚೆನ್ನಾಗಿ ಬಳಸಿಕೊಳ್ಳಬಹುದು ಎನ್ನುವುದರ ಕುರಿತು 3 ದಿವಸಗಳ ಕಾಲ ಚರ್ಚೆ ನಡೆಯಿತು. ತಮ್ಮ ಮೂಲಕ ನಮ್ಮ ಸಚಿವಾಲಯದ ಮಾನ್ಯ ಕಾರ್ಯದರ್ಶಿಯವರಲ್ಲಿ ವಿನಂತಿ ಮಾಡುವುದೇನೆಂದರೆ, 1981 ರಲ್ಲಿ ಇಂಡಿಯಾ ದೇಶದ ಪ್ರತಿನಿಧಿಗಳಿಗೆ ಶ್ರೀ ಶಂಕರ್ ದಯಾಳ್ ಶರ್ಮಾರವರು ಲೀಡರ್ ಆಗಿದ್ದರು. ಹಾಗಾಗಿ ಅದರ ಪ್ರತಿಯನ್ನು ತರಿಸಿಕೊಂಡು, ಎಲ್ಲರಿಗೂ ಒಂದೊಂದು ಪ್ರತಿಯನ್ನು ನೀಡುವುದು ಒಳ್ಳೆಯದು. ಅದರ ಸಲುವಾಗಿ ಎರಡೂ ಸದನಗಳಲ್ಲಿ ಒಂದು ದಿನದ ಅಧಿವೇಶನ ಆಗಬೇಕು.

ಏಕೆಂದರೆ, ಪ್ರಶ್ನೋತ್ತರ ವೇಳೆಯು ಎಲ್ಲರಿಗೂ ತಿಳಿದಿರುವಂತೆ ತುಂಬಾ ಮುಖ್ಯವಾದ hour ಆಗಿದೆ. ಆದರೆ, hour ಹೋಗಿ hours ಆಗುತ್ತಿದೆ. ನಾನು ಪಾರ್ಲಿಮೆಂಟ್‌ನ ಸದಸ್ಯನಾಗಿ ಕೆಲಸ ಮಾಡಿದವನಾಗಿದ್ದು, ಒಂದು ಗಂಟೆ ಮೇಲೆ ಪ್ರಶ್ನೋತ್ತರವು ನಡೆಯುವುದಿಲ್ಲ. ಅಲ್ಲಿ ಒಂದು ಗಂಟೆಗೆ ಎಷ್ಟು ಪ್ರಶ್ನೆಗಳು ರೀಚ್ ಆಗುತ್ತವೆ, ಅಷ್ಟೇ ಪ್ರಶ್ನೆಗಳು ರೀಚ್ ಆಗುತ್ತವೆ. ಅದಕ್ಕಾಗಿ ದಯವಿಟ್ಟು ಪ್ರಶ್ನೋತ್ತರ ವೇಳೆಗೆ ಇರುವ ಗೌರವವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ತಮ್ಮ ಸಲಹೆ ತುಂಬಾ ಸೂಕ್ತವಾಗಿದೆ, ದನ್ಯವಾದಗಳು. ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರು ಏನು ಹೇಳಿದ್ದಾರೆ, ಅದನ್ನು ಎಲ್ಲಾ ಮಾನ್ಯ ಸದಸ್ಯರು ಮನಸ್ಸಿನಲ್ಲಿಟ್ಟುಕೊಂಡು ಆ ಸಲಹೆಯನ್ನು ಪಾಲನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 250**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಸಲ್ಲಿಸಿದ್ದು, ಎಲ್ಲದರಲ್ಲಿಯೂ ಶೂನ್ಯವಾಗಿದೆ. ಯಾವ ಜಿಲ್ಲೆಗಳಲ್ಲಿ ಪ್ರಕರಣ ಬಾಕಿ ಇರುವುದಿಲ್ಲ ಎಂದು ಉತ್ತರ ನೀಡಿದ್ದಾರೆ. ನಾನು ಬೇಕಾದರೆ ಮೈಸೂರು ಜಿಲ್ಲೆಯಲ್ಲಿ ಎಷ್ಟು ಪ್ರಕರಣ ಬಾಕಿ ಇವೆ ಎಂಬುದರ ಬಗ್ಗೆ ಮಾಹಿತಿ ನೀಡುತ್ತೇನೆ. ಇವತ್ತು ಸದನದಲ್ಲಿ ಈ ರಾಜ್ಯದ ಅನ್ನದಾತನ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗುವಂಥ ವಿಚಾರವಾಗಿದೆ. ಈ ರಾಜ್ಯದ ಬೆನ್ನೆಲುಬು, ಈ ರಾಷ್ಟ್ರದ ಬೆನ್ನೆಲುಬು ರೈತ ಎನ್ನುವಂಥ ಮಾತನ್ನು ನಾವು ಹೇಳುತ್ತೇವೆ. ಆದರೆ, ಈ ರೈತರಿಗೆ ಆಗುತ್ತಿರುವಂಥ ಅನ್ಯಾಯ ಬೇರೆ ಎಲ್ಲಿಯೂ ಆಗುತ್ತಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಪ್ರಶ್ನೆ ಏನೆಂಬುದನ್ನು ಹೇಳಿ. ಈಗಾಗಲೇ ಮಾನ್ಯ ಅಡಗೂರ್ ಹೆಚ್.ವಿಶ್ವನಾಥ್‌ರವರು ಯಾವ ರೀತಿ ಪ್ರಶ್ನೋತ್ತರ ವೇಳೆ ನಡೆಯಬೇಕು ಎನ್ನುವುದರ ಬಗ್ಗೆ ತಿಳಿಸಿದ್ದಾರೆ. ಆದಾಗ್ಯೂ ಪದೇ ಪದೇ ಹಾಗೆಯೇ ಮಾತನಾಡಿದರೆ ಹೇಗೆ? ದಯವಿಟ್ಟು ಪ್ರಶ್ನೆಗೆ ಬನ್ನಿ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಇವತ್ತು ಕರ್ನಾಟಕ ರಾಜ್ಯದಲ್ಲಿ ಒಬ್ಬ ರೈತ ಆತನ ಜಮೀನಿನ ಒಡೆತನಕ್ಕೆ ಸಂಬಂಧಿಸಿದಂತೆ ಕೆಲವು ಪ್ರಕರಣವನ್ನು ಹೂಡುತ್ತಾನೆ. ಒಂದೊಂದು ಪ್ರಕರಣವನ್ನು ಇಷ್ಟು ತಿಂಗಳಲ್ಲಿ ಇತ್ಯರ್ಥಪಡಿಸಬೇಕೆಂದು ಸರ್ಕಾರದಿಂದ ಸುತ್ತೋಲೆ ಮತ್ತು ನ್ಯಾಯಾಲಯದಿಂದ ಆದೇಶ ಸಹ ಹೊರಡಿಸಲಾಗಿದೆ. ಆದರೆ, ಇವತ್ತಿನವರೆಗೂ ಅಧಿಕಾರಿಗಳ ಧೋರಣೆ ಏನಿದೆ, ಅವರು ಕೆಲಸ ಮಾಡದ ಪ್ರಯುಕ್ತ ಸಾಕಷ್ಟು ಪ್ರಕರಣಗಳು ತಾಲ್ಲೂಕು ಕಛೇರಿ, ನಾಡ ಕಛೇರಿ, ಎ.ಸಿ., ಕಛೇರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳಲ್ಲಿ ಬಾಕಿ ಉಳಿದುಕೊಂಡಿವೆ. ಇದರ ಕಡೆ ಹೆಚ್ಚು ಗಮನಹರಿಸಬೇಕೆಂದು ಸರ್ಕಾರವನ್ನು ಕೇಳಿದರೆ, ಎಲ್ಲಾ ಪ್ರಶ್ನೆಗೆ ಸೂಚನೆ ನೀಡಲಾಗಿದೆ ಎನ್ನುವಂಥ ಉತ್ತರವನ್ನು ಮಾನ್ಯ ಸಚಿವರು ನೀಡಿದ್ದಾರೆ. ಸೂಚನೆ ನೀಡುವುದರ ಜೊತೆಗೆ ಆಗಿರುವಂಥ ಅಭಿವೃದ್ಧಿ ಬಗ್ಗೆ ಕೇಳಿದಾಗ ಮೈಸೂರು ಜಿಲ್ಲೆಯಲ್ಲಿ ಯಾವುದೇ ಪ್ರಕರಣ ಬಾಕಿಯಿರುವುದಿಲ್ಲ, ಕೆಲವು ಜಿಲ್ಲೆಗಳಲ್ಲಿ ಮಾತ್ರ ಪ್ರಕರಣ ಬಾಕಿ ಇದೆ ಎನ್ನುವಂಥ ಉತ್ತರ ನೀಡಿದ್ದಾರೆ. ಅದರಿಂದಾಗಿ ದಯವಿಟ್ಟು ಈ ಕುರಿತು ಮಾನ್ಯ ಸಚಿವರು ತಮ್ಮ ಮೂಲಕ ಸರಿಯಾದ ಉತ್ತರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ತಹಸೀಲ್ದಾರ್ ಕಛೇರಿ, ಎ.ಸಿ., ಮತ್ತು ಡಿ.ಸಿ., ಕಛೇರಿ ಹಾಗೂ ನ್ಯಾಯಾಲಯಗಳಲ್ಲಿ ಇರುವಂಥ ಪ್ರಕರಣಗಳ ಕುರಿತು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ತಮಗೂ ಗೊತ್ತಿರುವ ಹಾಗೆ ನ್ಯಾಯಾಲಯವೆಂದರೆ, ಎದುರಾಳಿಗಳಿಗೆ ನೋಟಿಸ್

ನೀಡಬೇಕು, ಎರಡು ಕಕ್ಷಿದಾರರ ವಕೀಲರು ಅಟೆಂಡ್ ಆಗಬೇಕಾಗುತ್ತದೆ. ಹಾಗೆಯೇ ವಕೀಲರು ಏನು ಮಾಡುತ್ತಾರೆ ಹಾಗೂ ಎರಡು ಕಡೆಯ ವಕೀಲರು ಎಷ್ಟು ದಿವಸ ಸಮಯ ತೆಗೆದುಕೊಳ್ಳುತ್ತಾರೆ, ಅವರುಗಳ convenience ಏನೆಂಬುದು ಸಹ ತಮಗೆ ಗೊತ್ತಿದೆ. ಅದರಿಂದಾಗಿ ಸ್ವಲ್ಪ delay process ಆಗುತ್ತಿದೆ. ಆದಾದ ಮೇಲೆ ಪ್ರತಿಯೊಂದು, mutation ವಿವಾದ ಇದ್ದರೆ ಅದಕ್ಕೆ ೩೦ ದಿವಸ ಸಮಯ ನೀಡಿದ್ದಾರೆ. ತಹಸೀಲ್ದಾರ್‌ರವರ ಬಳಿ ಇರುವಂತಹ ವಿವಾದದ ಪ್ರಕರಣವಾಗಿದ್ದರೆ ೩ ತಿಂಗಳಷ್ಟು ಸಮಯ ಹಾಗೂ ಎ.ಸಿ., ಮತ್ತು ಡಿ.ಸಿ., ನ್ಯಾಯಾಲಯಕ್ಕೆ 6 ತಿಂಗಳಷ್ಟು ಸಮಯವನ್ನು ನೀಡಿದ್ದು, ಆ ಸಮಯದೊಳಗೆ ಪ್ರಕರಣವನ್ನು ಇತ್ಯರ್ಥಪಡಿಸಬೇಕೆಂದು ಆದೇಶ ಹೊರಡಿಸಲಾಗಿದೆ. ಇಷ್ಟೆಲ್ಲಾ ಆದರೂ ಸಹ ವಾದ, ವಿವಾದದ ಮಧ್ಯೆ ಸುಮಾರು ಒಂದರಿಂದ ಎರಡು ವರ್ಷ ವಿಳಂಬವಾಗುತ್ತಿದೆ. ಇದು ಇವತ್ತಿನ ಸಮಸ್ಯೆಯಾಗಿಲ್ಲ, ಮೊದಲಿನಿಂದಲೂ ನಡೆಯುತ್ತಿದೆ. ರೆವಿನ್ಯೂ ಮ್ಯಾಟರ್ ಎಂದರೆ, ಹಾಗೆಯೇ ನಡೆಯುವುದು. ಅದನ್ನು ಬದಲಾವಣೆ ಮಾಡಬೇಕೆಂದು ಹೇಳಲಾಗಿತ್ತು. ಈ ಮೊದಲು ಡಿ.ಸಿ., ಮಾತ್ರ ನ್ಯಾಯಾಲಯದ ಪ್ರಕರಣವನ್ನು ನಡೆಸಬೇಕಾಗಿದ್ದು, ಹೆಚ್ಚಿನ ಪ್ರಕರಣಗಳು ಡಿ.ಸಿ., ಗಳಿಗೆ ಬರುತ್ತಿತ್ತು. ಡಿ.ಸಿ., ಎಂದರೆ ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಏನೇ ಪ್ರಕರಣ ಬಂದರೂ ಅವರೇ ಆ ಜಿಲ್ಲೆಗಳಿಗೆ ಸಂಬಂಧಿಸಿದಂತೆ ನೋಡಿಕೊಳ್ಳಬೇಕು. ಅದರಿಂದ ಡಿ.ಸಿ., ಯವರಿಗೆ ಕೆಲಸದ ಒತ್ತಡ ಜಾಸ್ತಿಯಾಗಿತ್ತು ಎಂದು ಅದಕ್ಕೆ ತಿದ್ದುಪಡಿ ತಂದು ಅಪರ ಜಿಲ್ಲಾಧಿಕಾರಿಗಳಿಗೂ ಅಧಿಕಾರ ನೀಡಲಾಗಿದ್ದು, ಡಿ.ಸಿ., ಪರವಾಗಿ ಎ.ಸಿ., ರವರು ಸಹ ಕೇಸ್ ನಡೆಸಿ, ಯಾವ ತಾಲ್ಲೂಕಿನಲ್ಲಿ ಹೆಚ್ಚು ಕೇಸ್ ಇದೆ ಅದನ್ನು ಇತ್ಯರ್ಥಪಡಿಸಲು ಅವಕಾಶ ಕಲ್ಪಿಸಲಾಗಿದೆ. ವಾರಕ್ಕೆ ಎರಡು ಬಾರಿ ಕಡ್ಡಾಯವಾಗಿ ನ್ಯಾಯಾಲಯದ ಪ್ರಕರಣವನ್ನು ನಡೆಸುವಂಥ ಸೂಚನೆಯನ್ನು ನೀಡಲಾಗಿದೆ. ತಹಸೀಲ್ದಾರ್ ಕೋರ್ಟ್ ಏನಿದೆ, ಅಲ್ಲಿಯೂ ಸಹ ಕಸಬಾ ಹೋಬಳಿಯನ್ನು ಹೊರತುಪಡಿಸಿ, ಉಳಿದ ಹೋಬಳಿಗಳಿಗೆ ಶಿರಸ್ತೇದಾರರಿಗೆ ಪ್ರಕರಣವನ್ನು ಇತ್ಯರ್ಥಪಡಿಸುವಂಥ ಅಧಿಕಾರ ನೀಡಲಾಗಿದೆ. ಹೆಚ್ಚು ಪ್ರಕರಣಗಳು ವಿಲೇವಾರಿ ಆಗಲಿ ಎಂಬ ದೃಷ್ಟಿಯಿಂದ ಶಿರಸ್ತೇದಾರರಿಗೂ ಅವಕಾಶ ಕಲ್ಪಿಸಿದ್ದೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ವೇಗವಾಗಿ ಮಾಡಬೇಕೆಂಬ ದೃಷ್ಟಿಯಿಂದ ಪ್ರತಿ ತಿಂಗಳು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಎಲ್ಲಾ ಜಿಲ್ಲಾಧಿಕಾರಿಗಳ ಪ್ರಗತಿ ಪರಿಶೀಲನೆ ಮಾಡಬೇಕು, ಜಿಲ್ಲಾಧಿಕಾರಿಗಳಿಗೆ 75 ಪ್ರಕರಣವನ್ನು ಫಿಕ್ಸ್ ಮಾಡಿದ್ದು, ಪ್ರತಿ ತಿಂಗಳೂ 75 ಪ್ರಕರಣಗಳನ್ನು ಇತ್ಯರ್ಥಪಡಿಸಲೇಬೇಕೆಂಬ ಸೂಚನೆಯನ್ನು ನೀಡಲಾಗಿದೆ. ಇವೆಲ್ಲವೂ ಈಗ ಮಾಡಿರುವುದು, ಈ ಹಿಂದೆ ಇರಲಿಲ್ಲ. ಹಾಗೆಯೇ ಎ.ಸಿ. ಮತ್ತು ತಹಸೀಲ್ದಾರರಿಗೆ ತಿಂಗಳಿಗೆ 100 ಪ್ರಕರಣವನ್ನು ವಿಲೇವಾರಿ ಮಾಡಲೇಬೇಕೆಂಬ ಸೂಚನೆಯನ್ನು ನೀಡಿದ್ದೇವೆ. ಇವೆಲ್ಲದರಿಂದ ನ್ಯಾಯಾಲಯದ ಪ್ರಕರಣಗಳೇನಿವೆ, ಅವು ತ್ವರಿತವಾಗಿ ತೀರ್ಮಾನವಾಗಲು ಇಷ್ಟೊಂದು ಬದಲಾವಣೆ ತಂದಿದ್ದೇವೆ. ಹಿಂದೆಯೇ ಈ ಬದಲಾವಣೆ ಮಾಡಿದ್ದರೆ, ಇನ್ನಷ್ಟು ಪ್ರಕರಣಗಳು ತೀರ್ಮಾನವಾಗುತ್ತಿದ್ದವು.

(813) 14.09.2022/12.20/ಎಸ್‌ಕೆ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಮೇಲೆ ಜಿಲ್ಲಾಧಿಕಾರಿಗಳು ಗ್ರಾಮ ವಾಸ್ತವ್ಯ ಮಾಡುತ್ತಿಲ್ಲ ಎಂದು ಅವರಿಗೆ ನೋಟಿಸ್‌ಗಳನ್ನು ಕೊಟ್ಟಿದ್ದಾರೆ. ಇದೊಂದು ಒಳ್ಳೆಯ ಬೆಳವಣಿಗೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುವುದೇನೆಂದರೆ, ಕೆಲವು ಆರ್.ಟಿ.ಸಿ. (ಪಹಣಿ) ಪತ್ರದಲ್ಲಿ ಮಂಜೇಗೌಡ ಎನ್ನುವ ಬದಲು ಮಂಜುನಾಥ ಗೌಡ ಎಂದು ಆಗಿಬಿಡುತ್ತದೆ. ಆ ತಿದ್ದುಪಡಿ ಮಾಡುವುದಕ್ಕೆ ನಾಲ್ಕರಿಂದ ಐದು ತಿಂಗಳಲ್ಲ, ಐದು ವರ್ಷಗಳಾದರೂ ಆಗುವುದಿಲ್ಲ. ಇದೊಂದು ಸಣ್ಣ ತಪ್ಪು. 0.12 ಗುಂಟೆ ಬದಲು 1.2.0 ಎಂದು ಆದರೆ ಅದನ್ನು ತಿದ್ದುಪಡಿ ಮಾಡುವುದಕ್ಕೆ ನಾಲ್ಕು ವರ್ಷಗಳು ಬೇಕಾಗುತ್ತದೆ. ಇದನ್ನು ತಿದ್ದುಪಡಿ ಮಾಡಿಸಲು ಒಬ್ಬ ರೈತ ಸುಮಾರು 25 ರಿಂದ 30 ಕಿಲೋ ಮೀಟರ್ ದೂರದಿಂದ ತಾಲ್ಲೂಕು ಕಛೇರಿಗೆ ಬರುತ್ತಾನೆ. ಈ ಕೆಲಸಕ್ಕಾಗಿ ಎಷ್ಟು ಬಾರಿ ಓಡಾಡಬೇಕು? ಇವತ್ತು ಸಣ್ಣ-ಪುಟ್ಟ ಅಕ್ಷರ ದೋಷವಾಗುತ್ತಿದೆ. ಜನ ಸ್ಪಂದನ ಇದೆ, ಹಾಗೆಯೇ ಗ್ರಾಮ ವಾಸ್ತವ್ಯವಿದೆ. ಇವೆಲ್ಲವನ್ನು ಮಾಡಿದರೂ ಕೂಡ ಇದರಲ್ಲಿ ಇವತ್ತು ಲೋಪವಾಗುತ್ತಿದೆ. ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೇ ಇರುವ ಕಾರಣ ಜನ ಪ್ರತಿನಿಧಿಗಳಿಗೆ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ ಎಂಬ ಮಾತನ್ನು ನಾನು ಹೇಳುತ್ತೇನೆ. ಬಹಳ ಬೇಗ ಕೇಸ್‌ಗಳು ರೈತರಿಗೆ ವಿಲೇವಾರಿಯಾಗಬೇಕೆಂಬ ಬಗ್ಗೆ ಮಾನ್ಯ ಸಚಿವರು ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಕೆಲಸ ಆಗುತ್ತಿಲ್ಲ. ಕೆಲಸಗಳು ಬೇಗ ಸುಗಮವಾಗಿ ನಡೆಯಲಿ ಎಂದು ಹೇಳುತ್ತಾ, ಮಾನ್ಯ ಸಚಿವರಿಂದ ಅಧಿಕಾರಿಗಳಿಗೆ ಆದೇಶ ಹೋಗುತ್ತದೆಯೇ ಎಂಬ ಬಗ್ಗೆ ಕೇಳುತ್ತಿದ್ದೇನೆ. ಧನ್ಯವಾದಗಳು.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಮಂಜೇಗೌಡರವರು ಹೇಳರುವಂತಹದ್ದು ಸರಿಯಿದೆ. ನಾನು ಎಲ್ಲಾ ಕಡೆ ಗ್ರಾಮ ವಾಸ್ತವ್ಯ ಮಾಡಿದಾಗ, ಒಂದು ಸಣ್ಣ-ಪುಟ್ಟ ವ್ಯತ್ಯಾಸಕ್ಕೂ ಅಯ್ಯಾ, ಅಪ್ಪ ಎನ್ನುವ ಈ ತರಹ ವಿಚಾರಕ್ಕೂ ಕೂಡ ಬಹಳ ದೊಡ್ಡ ಕಾನೂನು ದಾಖಲೆಗಳು, ಕೋರ್ಟ್ ಇವೆಲ್ಲವೂ ಇವೆ. ಕೆಳ ಹಂತದ ಅಧಿಕಾರಿಗಳಿಗೆ ಅದನ್ನು ತಿದ್ದುಪಡಿ ಮಾಡಲು ಅವಕಾಶ ಕೊಡುವಂತಹದ್ದಕ್ಕೆ ನಾವು ಯೋಚನೆ ಮಾಡುತ್ತಿದ್ದೇವೆ. ತಿದ್ದುಪಡಿ ಮಾಡುವುದಕ್ಕೆ ಕೊಟ್ಟರೆ ಏನೇನು ತಪ್ಪುಗಳಾಗುತ್ತವೆ ಎಂಬುದರ ಬಗ್ಗೆ ನಮಗೆ ಭಯವಿದೆ. ತಿದ್ದುಪಡಿ ಮಾಡುವುದಕ್ಕೆ ಏನಾದರೂ ಕೊಟ್ಟರೆ, ಯರ್‍ಯಾರ ಹೆಸರು ಏನೇನು ಬರೆದುಬಿಡುತ್ತಾರೆಯೋ ಎಂಬ ಬಗ್ಗೆ ನಮಗೆ ಭಯವಿದೆ.

**ಡಾ. ಕೆ. ಗೋವಿಂದರಾಜು:-** ಇದಕ್ಕೆ time bound ಮಾಡಿ.

**ಶ್ರೀ ಆರ್. ಅಶೋಕ:–** ಈಗ ಅದನ್ನು ಬದಲಾವಣೆ ಮಾಡಲು, ನಾನು ತಹಶೀಲ್ದಾರ್‌ರವರಿಗೆ ಅಧಿಕಾರವನ್ನು ಕೊಡಬೇಕೆಂದು ಮಾಡುತ್ತಿದ್ದೇನೆ. ಅವರಿಗೆ ಅಧಿಕಾರ ಕೊಟ್ಟರೆ, ಅದು ಅವರ ಮಟ್ಟದಲ್ಲಿಯೇ ತೀರ್ಮಾನವಾಗಲಿ ಎಂಬ ಉದ್ದೇಶವನ್ನಿಟ್ಟುಕೊಂಡು, ನಾನು ತಹಶೀಲ್ದಾರ್‌ರವರಿಗೆ ಅಧಿಕಾರ ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ ೩೦೬**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಸಚಿವರು ಬಹಳಷ್ಟು ಸಭೆಗಳನ್ನು ಮಾಡಿದ್ದಾರೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಮಾತ್ರ ಪ್ರಶ್ನೆಯನ್ನು ಕೇಳಿದ್ದೇನೆ. ನನ್ನ ಪ್ರಶ್ನೆ ಏನೆಂದರೆ, ಭಾರಿ ಮಳೆಯಿಂದ ಉಂಟಾದ ಮನೆಗಳ ಕುಸಿತ ಹಾಗೂ ರೈತರು ಜಮೀನಿನಲ್ಲಿ ಬೆಳೆದ ಬೆಳೆಗಳು ಹಾನಿಯಾಗಿರುವುದರಿಂದ ಸರ್ಕಾರ ಪರಿಹಾರ ನೀಡಲು ಯಾವ ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಕೇಳಿದ್ದೇನೆ. ಮಳೆಯಿಂದ ಮನೆ ಶೇಕಡ 75 ಕ್ಕಿಂತ ಹೆಚ್ಚು ಹಾನಿಗೊಳಗಾದರೆ, ರೂ.೯೫,೧೦೦/- SDRF (State Disaster Response Fund) and NDRF (National Disaster Response Fund) ಎರಡೂ ಸೇರಿಸಿ 1,00,000/- ಒಟ್ಟು ರಾಜ್ಯ ಸರ್ಕಾರದ ಪರಿಷ್ಕೃತ ಹೆಚ್ಚುವರಿಯಾಗಿ ದರ ರೂ. ರೂ.4,04,900/- ಅಂದರೆ, ಒಟ್ಟು ರೂ.5,00,000/- ಸರ್ಕಾರದಿಂದ ಕೊಡುತ್ತೀರಿ. ನನ್ನ ಪ್ರಶ್ನೆ ಏನೆಂದರೆ, ಮೊನ್ನೆ ಕೊಡಗಿನಲ್ಲಿ calamity ಆದಂತಹ ಸಂದರ್ಭದಲ್ಲಿ ಸುಮಾರು ಸಾವಿರಾರು ಮನೆಗಳನ್ನು ಸರ್ಕಾರದಿಂದಲೇ ಕಟ್ಟಿಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ವಸತಿ ಸಚಿವರಾದ ಶ್ರೀ ವಿ. ಸೋಮಣ್ಣನವರಿಗೂ ಗೊತ್ತಿದೆ. ಅವರು ಮನೆಗಳನ್ನು ಉದ್ಘಾಟನೆ ಮಾಡುವುದಕ್ಕೆ ಹೋಗಿದ್ದರು. ಸುಮಾರು ರೂ. 12 ರಿಂದ 13 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ ಮನೆಯನ್ನು ಕಟ್ಟಿದ್ದಾರೆ. ಆ ಮನೆಗಳು ತುಂಬಾ ಸುಂದರವಾಗಿದೆ. ಅದರ ಜೊತೆಗೆ ಅವರಿಗೊಂದು permanent rehabilitation ಆಯಿತು. ಮಳೆಯಿಂದಾಗಿ ಮನೆ ಹಾನಿಗೊಳಗಾದವರಿಗೆ ಸರ್ಕಾರ ರೂ.5,00,000/- ಕೊಡುತ್ತಾ ಬಂದಿದೆ. ನಮ್ಮಲ್ಲಿ ಹದಿನೆಂಟರಿಂದಲೂ continuous calamity ಇದೆ. ಈ ರೂ.5,00,000/- ಕೊಟ್ಟಂತಹ ಕೆಲವರ ಮನೆಗಳು ಇನ್ನೂ ಕೂಡ incomplete ಆಗಿದೆ. ಕೊಟ್ಟಿಲ್ಲ, ಆ ಹಣವನ್ನು ಬೇರೆ ರೂಪದಲ್ಲಿ ಬಳಸಿಕೊಂಡಿದ್ದಾರೆ. ಶೇಕಡ 75 ರಷ್ಟು ಮನೆ ಹಾನಿಯಾಗಿದ್ದು, ಯಾವುದೋ ಒಂದು ಗೋಡೆಯನ್ನು ರಿಪೇರಿ ಮಾಡಿಕೊಂಡು, ರೂ.5,00,000/- ಗಳನ್ನು ಬಳಸಿಕೊಂಡಿದ್ದಾರೆ. ಮನೆ ಹಾನಿಯಾಗಿದೆ. ಅವರ ಹಣವನ್ನು ಏತಕ್ಕೆ ಇಟ್ಟುಕೊಂಡಿದ್ದೀರಾ, ಪೂರ್ತಿ ಹಣವನ್ನು ಕೊಟ್ಟುಬಿಡಿ ಎಂದು ನಾವು ಅಧಿಕಾರಿಗಳಿಗೆ ಶಿಫಾರಸ್ಸು ಮಾಡುತ್ತೇವೆ. ಇದರಲ್ಲಿ ನಮ್ಮದೂ ಕೂಡ ತಪ್ಪು ಇದೆ. ನಾವು ಇಲ್ಲವೆಂದು ಹೇಳುವುದಿಲ್ಲ. ಸರ್ಕಾರ ರೂ.5,00,000/- ಗಳು ಕೊಡುವುದರಿಂದ ಮನೆಗಳು ಸಂಪೂರ್ಣವಾಗಿ ರಿಪೇರಿ ಆಗುವುದಿಲ್ಲ. ಮತ್ತೆ ಹಿಂದಿನ ಮಳೆ ಬಂದರೆ, ಅವನು ಮತ್ತೆ ವಾಪಸ್ಸು ಫಲಾನುಭವಿಯಾಗುತ್ತಾನೆ. ಇದು routine, You have to put an end to this. ದಯವಿಟ್ಟು, ಇದಕ್ಕೆ ಪರಿಹಾರ ಕೊಡುವ ವಿಚಾರದಲ್ಲಿ ಸರ್ಕಾರ ರೂ.5,00,000/- ದೊಡ್ಡ ಮೊತ್ತವನ್ನು ಕೊಟ್ಟಿದೆ. ಇದು

ಕೊಡುವುದರಿಂದ, ಯಾವುದೇ ರೀತಿಯ ಪ್ರಯೋಜನವಾಗದೇ ಇರುವಂತಹದ್ದು, ಈ calamity ನೊಳಗೆ ಏನು ಪದೇ ಪದೇ ಸಿಕ್ಕಿ ಹಾಕಿಕೊಳ್ಳುತ್ತಾರೆ. ಅದೊಂದು ಬಹಳ ಗಂಭೀರವಾಗಿರುವಂತಹದ್ದು. ತೀವ್ರ ಹಾನಿ ದುರಸ್ತಿ ಶೇಕಡ 25 ರಿಂದ ಶೇಕಡ 75 ಎಂದು ಹೇಳಿ, ರೂ.3,00,000/- ಕೊಡುತ್ತೀರಾ. ದಯವಿಟ್ಟು, ಅದಕ್ಕೆ ರೂ.3,00,000/- ಕೊಟ್ಟರೆ, ಆ ಹಣ ಕೂಡ ವ್ಯರ್ಥ. ಅವನ ಸರಿಯಾದ ಸಮಯಕ್ಕೆ ಹಣ ಬಂತು ಎಂದು ಹೇಳಿ, ಅವನು ಆ ಸಮಯದಲ್ಲಿ ಹಣವನ್ನು ಉಪಯೋಗ ಮಾಡುವುದರಿಂದ, ಈ ರೂ.3,00,000/- ಗಳನ್ನು ನೀಡಿದರೆ, ಇದರಿಂದ ಏನು ಪ್ರಯೋಜನವಾಗುತ್ತದೆ ಎಂಬುದರ ಬಗ್ಗೆ ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಪ್ರತಿ ವರ್ಷ ನೂರಾರು ಮನೆಗಳು ಹಾನಿಯಾಗುವುದರಿಂದ, ಇದೇ ಪರಿಸ್ಥಿತಿ ಬರುತ್ತದೆ. ಅವನಿಗೆ permanent shelter ಆಗಬೇಕಲ್ಲವೆ. ಸರ್ಕಾರ ಮನೆ ಕಟ್ಟಿ ಕೊಟ್ಟಮೇಲೆ ಅವನಿಗೆ permanent ಮನೆ ಆಗುವುದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕಾಗಿದೆ. ಇದಕ್ಕೆ ಇನ್ನೂ ಐದು ಲಕ್ಷ ರೂಪಾಯಿ ಕೊಟ್ಟರೂ ಪರವಾಗಿಲ್ಲ. ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಮನೆ ಕಟ್ಟಿಕೊಟ್ಟಿದ್ದಾರೆ. ಸದನದಲ್ಲಿ ವಸತಿ ಸಚಿವರು ಕೂಡ ಇದ್ದಾರೆ. ಮಾನ್ಯ ವಸತಿ ಸಚಿವರೇ, ಐದು ಲಕ್ಷ ರೂಪಾಯಿಗಳಲ್ಲಿ ಮನೆ ನಿರ್ಮಾಣವಾಗುತ್ತಾ, ಹೇಳಿ. ಇದಕ್ಕೆ ಶಾಶ್ವತ ಪರಿಹಾರವಾಗಬೇಕು. ಇದಕ್ಕೆ ಶಾಶ್ವತ ಪರಿಹಾರ ನೀಡದಿದ್ದರೆ, ಪ್ರತಿ ಸಾರಿ ಮಳೆಯಿಂದಾಗಿ ಮನೆಗಳು ಹಾನಿಯಾಗುತ್ತದೆ, ಒಂದು ಕಡೆ ಗೋಡೆ ಕುಸಿಯುತ್ತದೆ. ಕೊಟ್ಟಿಗೆ ಕುಸಿದಿರುವ ಬಗ್ಗೆ ಫೋಟೋ ತೆಗೆಯುತ್ತಾನೆ. ನಮ್ಮ ಮನೆ ಕುಸಿದಿದೆ ಎಂದು ನಮ್ಮ ಹತ್ತಿರ ಬಂದು ಹೇಳುತ್ತಾರೆ. ಇದರ ಬಗ್ಗೆ ನಮಗೂ ಕೂಡ ಗೊತ್ತಾಗುತ್ತದೆ. ಜಿಲ್ಲಾಧಿಕಾರಿಗಳೇ ಅವನ ಕೊಟ್ಟಿಗೆ ಕುಸಿದಿದೆ ನೋಡಿರಿ. ಅವನಿಗೆ ಸಂಪೂರ್ಣವಾಗಿ ರೂ.5,00,000/- ಗಳ ಪರಿಹಾರದ ಹಣ ಕೊಡಿಸಿರುವಂತಹದ್ದು ಇದೆ. ನಾವು ಪರಿಹಾರದ ಹಣ ಕೊಡಿಸಿಲ್ಲವೆಂದು ಹೇಳುವುದಿಲ್ಲ. ಮನೆ ರಿಪೇರಿಗಾಗಿ ರೂ.50,000/- ಸರ್ಕಾರ ಪರಿಹಾರ ಹಣ ಕೊಡುತ್ತದೆಯೆಲ್ಲಾ, ಅದು ಕೂಡ waste of money. ಅದಕ್ಕೆ ಏನಾದರೊಂದು ಶಾಶ್ವತ ಪರಿಹಾರ ಮಾಡಿಕೊಡಬೇಕಾಗುತ್ತದೆ. ನಾನು ಕೇಳಿರುವುದೇನೆಂದರೆ, ಈ ಸಾರಿ calamity ಆಗಿದೆಯೆಲ್ಲಾ, ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, entire ಕರಾವಳಿ ಪ್ರದೇಶದದಲ್ಲಿ ಒಂದು ರಸ್ತೆ -ಸೇತುವೆಗಳು, ಕಾಲ್ಸೇತುವೆಗಳು ಉಳಿದಿಲ್ಲ. ಇದರ ಬಗ್ಗೆ ಮಾನ್ಯ ಪ್ರಾಣೇಶ್‌ರವರು ಸದನದಲ್ಲಿ ಕುಳಿತಿದ್ದಾರೆ, ಅವರನ್ನು ಕೇಳಿ. ಹೆಚ್ಚು ಮಳೆಯಿಂದಾಗಿ ಯಾವ ಬೆಳೆಗಳು ಕೂಡ ಉಳಿದಿಲ್ಲ. ತೋಟಗಾರಿಕೆ ಬೆಳೆಗಳು ಒಂದು ಪೈಸೆ ಭಾಗ ಉಳಿದಿಲ್ಲ. ಟೊಮ್ಯಾಟೋ ಬೆಳೆ ಮತ್ತು ತರಕಾರಿ ಬೆಳೆಗಳು ಸಹ ಉಳಿದಿಲ್ಲ. ಮಳೆಯಿಂದಾಗಿ ಅಡಕೆ ತೋಟಗಳು ಮುಳುಗಿ ಹೋಗಿವೆ. ಕೃಷಿ ಬೆಳೆಗಳು ಒಟ್ಟು ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಇದರಲ್ಲಿ ತಿಳಿಸಿಲ್ಲ. ತೋಟಗಾರಿಕಾ ಬೆಳೆಗಳು ಎಷ್ಟು ನಷ್ಟವಾಗಿದೆ ಎಂಬ ಬಗ್ಗೆ ಹೇಳಿಲ್ಲ. Food grains and agriculture ಬಗ್ಗೆ ಹೇಳುವುದಾದರೆ, ಮೊನ್ನೆ ಜಿಲ್ಲಾಡಳಿತದ ಕಮಿಟಿ ಮೀಟಿಂಗ್‌ನಲ್ಲಿ ಮಾನ್ಯ ಬೈರತಿ ಬಸವರಾಜುರವರು ಇದ್ದರು. ಅಲ್ಲ ರೀ, ನೀವು ಹೋದ ವರ್ಷ ಇದೇ ರಸ್ತೆ ಕುಸಿದಿದೆ ಎಂದು ತೋರಿಸಿದ್ದಿರಿ. ಈ

ವರ್ಷ ಅದೇ ಜಾಗ ಕುಸಿದಿದೆ ಎಂದು ಹೇಳಿದಿರಿ. ನೀವೂ ಕೂಡ ಅದರಲ್ಲಿ expert ಇದ್ದೀರಿ. Expert ಇರುವಂತಹದ್ದಕ್ಕೆ, ಹಿಂದೆ ಯಾವುದೇ ಮಳೆ ಬಂದರೂ ಕೂಡ, ಅದನ್ನು ಶಾಶ್ವತವಾಗಿ ಪರಿಹಾರ ಮಾಡುವುದಕ್ಕೆ ನೀವು ಹೇಳಬೇಕಾ ಅಥವಾ ನಾವು ಹೇಳಬೇಕಾ. ಅಂದಿನ ಸಭೆಯಲ್ಲಿ ಮಾನ್ಯ ಪ್ರಾಣೇಶ್‌ರವರು ಕೂಡ ಇದ್ದರು. ನಾವು ಅದರ ಬಗ್ಗೆ ಮಾತನಾಡಿದ್ದು ಇದೆ. ಅದಕ್ಕೆ ಶಾಶ್ವತ ಪರಿಹಾರಕ್ಕೆ engineer ಗಳನ್ನು ಕೊಡದೇ ಇದ್ದರೆ, ಪ್ರತಿ ವರ್ಷ ಬಿದ್ದು ಹೋಗುವ ಮನೆಗಳು, ಸೇತುವೆಗಳಿಗೆ ಹಣ ಕೊಡುತ್ತಾ ಹೋಗುವುದೇ? ದಯವಿಟ್ಟು, ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಲಿ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಪಟ್ಟಂತೆ, ಮನೆಗಳಿಗೆ ಅನುದಾನ ಬಿಡುಗಡೆ ಮಾಡಿರುವ ಬಗ್ಗೆ ವಿವರವಾಗಿ ಹೇಳಿದ್ದಾರೆ. ಚಿಕ್ಕಮಗಳೂರಿನಲ್ಲಿ ಅರ್ಹ ಪ್ರಕರಣಗಳ ಸಂಖ್ಯೆ 218 ಇವೆ. ಮೂಡಿಗೆರೆಯಲ್ಲಿ ಅರ್ಹ ಪ್ರಕರಣಗಳ ಸಂಖ್ಯೆ 170 ಇವೆ. ಅದೇ ರೀತಿ ಕಡೂರಿನಲ್ಲಿ ಅರ್ಹ ಪ್ರಕರಣಗಳ ಸಂಖ್ಯೆ 205 ಇವೆ. ತರೀಕೆರೆಯಲ್ಲಿ ಅರ್ಹ ಪ್ರಕರಣಗಳ ಸಂಖ್ಯೆ 118 ಇವೆ. ಒಟ್ಟು ಅರ್ಹ ಪ್ರಕರಣಗಳ ಸಂಖ್ಯೆ 953 ಇವೆ. ಅನುದಾನವನ್ನು ಬಿಡುಗಡೆ ಮಾಡಲಾದ ಮನೆಗಳ ಸಂಖ್ಯೆ 860 ಇವೆ. ಮಾನ್ಯ ಸದಸ್ಯರು ಮನೆ ಕಟ್ಟುವುದರ ಬಗ್ಗೆ ಕೇಳಿದ್ದಾರೆ. ಕೇಂದ್ರ ಸರ್ಕಾರ NDRF ಅನುದಾನ ರೂ. 95,100/- ಕೊಡುವುದಕ್ಕೆ ಮಾತ್ರ ಅವಕಾಶವಿದೆ. ಎಲ್ಲಾ ರಾಜ್ಯಗಳು ರೂ.95,100/- ಮಾತ್ರ ಅನುದಾನ ಕೊಡುತ್ತಿರುವಂತಹದ್ದು. ನಾವು ಅದಕ್ಕೆ ಹೆಚ್ಚುವರಿಯಾಗಿ ರೂ.4,04,900/- ಅನುದಾನವನ್ನು ಕೊಡುತ್ತಿದ್ದೇವೆ. ಬೇರೆ ಯಾವುದೇ ರಾಜ್ಯ ಹೆಚ್ಚುವರಿಯಾಗಿ ಅನುದಾನವನ್ನು ಕೊಟ್ಟಿಲ್ಲ. ನಮ್ಮ ರಾಜ್ಯ ಮಾತ್ರ ಹೆಚ್ಚುವರಿಯಾಗಿ ಅನುದಾನ ಕೊಡುತ್ತಿದೆ. ಈ ಹಿಂದೆ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಇದ್ದಾಗ, ಇದು ಪ್ರಾರಂಭವಾಯಿತು. ಈಗಿನ ಮುಖ್ಯಮಂತ್ರಿಯಾದ ಶ್ರೀ ಬಸವರಾಜ ಬೊಮ್ಮಾಯಿಯವರಿದ್ದಾಗಲೂ ಹೆಚ್ಚುವರಿ ಹಣವನ್ನು ಕೊಡುತ್ತಿದ್ದೇವೆ. ಮನೆ ಕಟ್ಟಿ ಕೊಡುವುದರ ಬಗ್ಗೆ ನಾವೇ ಕಟ್ಟಿಕೊಡಬೇಕೆಂದು ನಮ್ಮಲ್ಲಿ ಬಹಳಷ್ಟು ಚರ್ಚೆಯಾಯಿತು. ಇದಕ್ಕೆ ಬಹಳ ಜಾಗ ನೋಡಬೇಕು. ನಾವು ನೋಡುವಂತಹ ಜಾಗ ಅವರಿಗೆ ಇಷ್ಟವಾಗುವುದಿಲ್ಲ. 2009-10ರಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರವಾಹ ಬಂದಾಗ, Infosys Foundation ನಿಂದ ಮನೆಗಳನ್ನು ಕಟ್ಟಿದ್ದೇವೆ. ಇದುವರೆಗೂ ಒಬ್ಬರೂ ಕೂಡ ಹೋಗಿಯೇ ಇಲ್ಲ. ಮೊದಲು ಕೇಳಿದರೆ, ನಾವು ಹೋಗುತ್ತೇವೆಂದು ಹೇಳಿದ್ದರು. ಈಗ ಹೋಗಲ್ಲ, ನಾವು ಇಲ್ಲಿಯೇ ಇರುತ್ತೇವೆ ಎಂದು ಹೇಳುತ್ತಿದ್ದಾರೆ. ಅಷ್ಟೊಂದು ಮನೆಗಳು ಖಾಲಿ ಬಿದ್ದಿವೆ. ಎಲ್ಲಾ ಸಚಿವರು ಇದರ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ, ನಾವು ಕಟ್ಟಿಕೊಟ್ಟರೆ, ಅವರು ಹೋಗುವುದಿಲ್ಲ. ನಾವು ಗುರುತು ಮಾಡಿರುವ ಜಾಗ ಅವರಿಗೆ ಇಷ್ಟವಾಗುವುದಿಲ್ಲ. ಈ ತರಹ ಕಟ್ಟುವ ಗುಣಮಟ್ಟವನ್ನು ನಾವು ನೋಡಿಬಿಟ್ಟು, ಮನೆಗಳನ್ನು ಕಟ್ಟಿಕೊಡುವುದು ಬೇಡ ಎಂದು ನಾವು ಅವರಿಗೆ ಹಣವನ್ನು ಕೊಟ್ಟುಬಿಡೋಣ ಎಂಬ

ತೀರ್ಮಾನಕ್ಕೆ ಬಂದೆವು. ಅವರದು ಮನೆ ತಾನೇ, ಅವರೇ ಆರಾಮವಾಗಿ ಮನೆಯನ್ನು ಕಟ್ಟಿಕೊಳ್ಳುತ್ತಾರೆ ಎನ್ನುವ ದೃಷ್ಟಿಯಿಂದ ಈ ಒಂದು ಯೋಜನೆಯನ್ನು ಮಾಡಿದ್ದೇವೆ. ಇದು ಅವರದೇ ಹಣ. ಅವರನ್ನು ನೇರವಾಗಿ ಕರೆದು ಚೆಕ್‌ನ್ನು ಕೊಡುವುದಿಲ್ಲ. ಅವರ ಅಕೌಂಟ್‌ಗೆ ನೇರವಾಗಿ ಹಣ ಹೋಗುವಂತಹದ್ದನ್ನು ಮಾಡಿದ್ದೇವೆ. DBT (Direct Benefit Transfer) ಅಂದರೆ, ನೇರವಾಗಿ RTGS ಮುಖಾಂತರ ಅವರ ಅಕೌಂಟ್‌ಗೆ ಹಣ ಹೋಗುವಂತಹದ್ದನ್ನು ಮಾಡಿದ್ದೇವೆ. ಇದರಲ್ಲಿ ಮಧ್ಯವರ್ತಿಗಳ ಹಾವಳಿ ಇಲ್ಲ. ಇದು ಒಳ್ಳೆಯ ರೀತಿಯಲ್ಲಿ ನಡೆಯುತ್ತಿದೆ. ಇದನ್ನು ಇನ್ನಷ್ಟು ವೇಗ ಮಾಡುವಂತಹದ್ದಕ್ಕೆ ನಾನು ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆಯನ್ನು ಕೊಡುತ್ತೇನೆ. ಕರ್ನಾಟಕ ರಾಜ್ಯದಲ್ಲಿ 2020 ನೇ ಸಾಲಿನಲ್ಲಿ ಒಟ್ಟು 41,550 ಮನೆಗಳು ಹಾನಿಯಾಗಿವೆ. ಈವರೆಗೆ ರೂ. 175.22 ಕೋಟಿ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ಒಟ್ಟು 5,80,074 ಹೆಕ್ಟೇರ್ ಪ್ರದೇಶ ಬೆಳೆ ಹಾನಿಯಾಗಿದೆ. ಮೊದಲನೇ ಕಂತಿನಲ್ಲಿ ಸುಮಾರು 1,04,600 ರೈತರಿಗೆ ರೂ. 116.38 ಕೋಟಿ ಹಣವನ್ನು ನೇರ ಪರಿಹಾರ ಪಾವತಿಸಿದ್ದೇವೆ.

(ಮುಂದು)

(814) 14-09-2022, 12.30, ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಅಶೋಕ್ (ಮುಂದು):-**

ಅದೇ ರೀತಿ ತುರ್ತು ಪರಿಹಾರ ರೂ.34.99 ಕೋಟಿ ಹಣವನ್ನು ಕೊಟ್ಟಿದ್ದೇವೆ. ಮಳೆ ಬಂದು, ಮನೆ ಬಿದ್ದುಹೋದಾಗ ಯಾರು ಬಾಡಿಗೆ ಮನೆಯಲ್ಲಿ ಹೋಗಿ ವಾಸವಾಗಿದ್ದಾರೋ ಅವರಿಗೆ ಇದುವರೆಗೆ ತಿಂಗಳಿಗೆ ರೂ.5,000/-ಗಳಂತೆ 10 ತಿಂಗಳು ಸುಮಾರು ರೂ.141 ಕೋಟಿ ಹಣವನ್ನು ಇಡೀ ರಾಜ್ಯಕ್ಕೆ ಕೊಟ್ಟಿದ್ದೇವೆ. ಒಟ್ಟು ಜುಲೈ ನಿಂದ ಇಲ್ಲಿಯವರೆಗೂ ಬೆಳೆಗೆ ಏನು ಪಾವತಿಸಿದ್ದೇವೆಂದರೆ, ಆಗಸ್ಟ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಮತ್ತು ಮಾರ್ಚ್‌ನಲ್ಲಿ ಮಳೆ ಬಿದ್ದಂತಹ ಸಂದರ್ಭದಲ್ಲಿ ಒಟ್ಟು ರೂ.2435.57 ಕೋಟಿ ಹಣವನ್ನು ಇದುವರೆಗೂ ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಕೊಟ್ಟಿದ್ದೇವೆ. ಮೊದಲೆಲ್ಲಾ ಚೆಕ್ ಮೂಲಕ ಪಾವತಿ ಮಾಡಲಾಗುತ್ತಿತ್ತು, ಆ ಚೆಕ್ ಕೊಟ್ಟಾಗ ಅವರು ಯಾವುದೋ ಒಂದು ಮಾರ್ವಾಡಿ ಅಂಗಡಿಗೆ ಹೋಗಿ ಡಿಸ್ಕೌಂಟ್ ಮಾಡಿ ಶೇ.5 ರಷ್ಟು ಹೋಗುತ್ತಿತ್ತು. ಅದನ್ನೆಲ್ಲಾ ತೆಗೆದುಹಾಕಿ ಈಗ ನೇರವಾಗಿ ಅವರ ಅಕೌಂಟ್‌ಗೆ ಕೊಡುತ್ತಿದ್ದೇವೆ. ಇದರಿಂದ ಬಹಳಷ್ಟು ರೈತರಿಗೆ ಅನುಕೂಲವಾಗುತ್ತಿದೆ. ಮೊದಲು ಪರಿಹಾರ ರೂ.6,800 ಗಳು ಇದ್ದುದನ್ನು double ಮಾಡಿದ್ದೇವೆ. ಈ ರೀತಿ ಬಹುಬೆಳೆ ಏನಿದೆ, ಅದಕ್ಕೂ ಕೂಡ double ಕೊಟ್ಟಿದ್ದೇವೆ. ಅಂದರೆ ಪ್ರವಾಹ ಬಂದಾಗ ರೈತರ ಜೊತೆ ನಾವು ಇರಬೇಕು ಎನ್ನತಕ್ಕಂಥ ದೃಷ್ಟಿಯಿಂದ ಕೊಟ್ಟಿದ್ದೇವೆ. ನಿಮ್ಮ ಕೊಡಗು ಮತ್ತು ಚಿಕ್ಕಮಗಳೂರಿನಲ್ಲೂ ಕೂಡ ನಾನು ಪ್ರವಾಸ ಮಾಡಿದ್ದೇನೆ. ಮಾನ್ಯ ಸದಸ್ಯರೇ, ತಾವು ಆ ಸಭೆಗೆ ಬಂದು ಭಾಷಣ ಮಾಡಿದ್ದೀರಿ. ನಿಮ್ಮ ಕೊಡಗಿನಲ್ಲಿ ಯಾರ್ಯಾರು ಒತ್ತುವರಿ ಮಾಡಿಕೊಂಡು ಕಾಫಿ ಬೆಳೆಯನ್ನೆಲ್ಲಾ ಬೆಳೆದಿದ್ದೀರಿ, ಅದನ್ನು ನಿಮಗೆ lease ಮೇಲೆ ಕೊಡುವುದಕ್ಕೆ ಬಿಲ್ ಕೂಡ ತರುತ್ತಿದ್ದೇವೆ.

ಏಕೆಂದರೆ, ಸುಮಾರು 60-70 ವರ್ಷಗಳಿಂದ ಆ ಜಮೀನನ್ನು ನೀವು ಬಿಟ್ಟುಕೊಟ್ಟಿಲ್ಲ. ಆ ಜಮೀನಿಗೆ ಟ್ಯಾಕ್ಸ್ ಕೂಡ ಕಟ್ಟುತ್ತಿಲ್ಲ. ಆದ್ದರಿಂದ ಅವರಿಗೇನೆ ಆ ಜಮೀನನ್ನು lease ಗೆ ಕೊಡಬೇಕು ಎನ್ನುವ ಕಾನೂನನ್ನು ಕೂಡ ತರುತ್ತಿದ್ದೇನೆ. ಅದಕ್ಕೆ ನಾವು ರೈತರ ಪರವಾಗಿ ಇದ್ದೇವೆ ಮತ್ತು ನಾವು ನಿಮ್ಮ ಕಾಫಿ ಬೆಳೆಗಾರರ ಪರವಾಗಿಯೂ ಕೂಡ ಇರುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಒಂದು ವಿಚಾರದ ಬಗ್ಗೆ ಹೇಳುವುದಾದರೆ, ಇಷ್ಟು calamity ಆಗಿರತಕ್ಕಂಥ ಸಂದರ್ಭದಲ್ಲಿ ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಅದನ್ನು fulfil ಮಾಡುವುದಕ್ಕೆ ಆಗುವುದಿಲ್ಲ. ಅದು ನಮಗೂ ಕೂಡ ಗೊತ್ತಿದೆ. Practically, it is very difficult. ಸರ್ಕಾರ ಮಳೆಯಾಶ್ರಿತ ಬೆಳೆಗೆ ಪ್ರತಿ ಹೆಕ್ಟೇರ್‌ಗೆ ರೂ.6,800- 13,600 ಗಳಿಗೆ, ಅದೇ ರೀತಿ ನೀರಾವರಿ ಬೆಳೆಗೆ ರೂ.11,500- 25,000 ಗಳಿಗೆ, ಬಹುವಾರ್ಷಿಕ ಬೆಳೆಗೆ ರೂ.10,000- 28,000 ಗಳನ್ನು ಕೊಡುತ್ತಿದ್ದೀರಿ. ಇದು ಒಳ್ಳೆಯ amount. ಅದಕ್ಕೆ ಬಹಳ ಸಂತೋಷ. ನಾನು ಸರ್ಕಾರವನ್ನು ಶ್ಲಾಘನೆ ಮಾಡುತ್ತಿದ್ದೇನೆ. ಯಾವ ಸರ್ಕಾರಗಳು ಕೂಡ ಇಂತಹ calamity ಯನ್ನು ಎದುರಿಸಿಲ್ಲ.

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ನಿನ್ನೆ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನಿಮ್ಮ ಪಕ್ಷದ ಸದಸ್ಯರಾದ ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಕೂಡ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಅದನ್ನು ನಿಯಮ 68ಕ್ಕೆ convert ಮಾಡಿದ್ದೇವೆ. ಇವತ್ತು ಇಡೀ ದಿವಸ ಚರ್ಚೆ ಮಾಡುತ್ತೀರಿ. ಆಗ ಅದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡೋಣ. ನೀವು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಸೂಕ್ತವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ದಯವಿಟ್ಟು ನಾವು ಈಗ ಮುಂದೆ ಹೋಗೋಣ. ಈಗ ಎಸ್.ರವಿಯವರ ಪರವಾಗಿ ಶ್ರೀ ಯು.ಬಿ.ವೆಂಕಟೇಶ್‌ರವರೇ ತಾವು ಪ್ರಶ್ನೆ ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಚಾರದ ಬಗ್ಗೆ ಏಕೆ ಹೇಳುತ್ತಿದ್ದೇನೆಂದರೆ, ಸರ್ಕಾರದಲ್ಲಿ ಜನ ಪ್ರತಿನಿಧಿಗಳಿಗೆ ಕೆಟ್ಟ ಹೆಸರು ಬರಬಾರದು. ಇಷ್ಟೊಂದು ಕಾಳಜಿ ಇರತಕ್ಕಂಥ ಮಾನ್ಯ ಕಂದಾಯ ಸಚಿವರು ಇರತಕ್ಕಂಥ ಸಂದರ್ಭದಲ್ಲಿ ಅಧಿಕಾರಿಗಳು estimate ಮಾಡಲು ಏನು ಗಂಟು ಹೋಗಿದೆ. ಇವತ್ತಿನ ದಿವಸ horticultural crop, agricultural crop ಎಷ್ಟಾಗಿದೆ, ಏನಾಗಿದೆ? ಅದನ್ನು estimate ಮಾಡಲು ಯಾವೊಬ್ಬ ಅಧಿಕಾರಿಗಳು ಕೂಡ ಬಂದಿಲ್ಲ.

**ಸಭಾಪತಿಯವರು:-** ಶ್ರೀ ಯು.ಬಿ.ವೆಂಕಟೇಶ್ ರವರೇ, ತಾವು ದಯವಿಟ್ಟು ಪ್ರಶ್ನೆ ಕೇಳಿ. ಮಾನ್ಯ ಭೋಜೇಗೌಡ ರವರು ಮಾತನಾಡುತ್ತಲೇ ಇರುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಯಾವ ಒತ್ತುವರಿ ಕೂಡ ಆಗಿಲ್ಲ.

**ಪ್ರಶ್ನೆ ಸಂಖ್ಯೆ.245**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು) (ಶ್ರೀ ಎಸ್.ರವಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲು ಜಮೀನುಗಳನ್ನು ಗುರುತಿಸಲಾಗಿದೆಯೇ; ಎಷ್ಟು ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲಾಗಿದೆ ಹಾಗೂ ರಾಜ್ಯದಲ್ಲಿ ಎಷ್ಟು ಬಿಡಾಡಿ ಗೋವುಗಳವೆಯೆಂದು ಪ್ರಶ್ನೆ ಕೇಳಿದ್ದೆನು. ಮಾನ್ಯ ಸಭಾಪತಿಯವರೇ, 2021-22ನೇ ಸಾಲಿನ ಆಯವ್ಯಯದಲ್ಲಿ ಐಟಂ ನಂಬರ್ 64ರಲ್ಲಿ "ರಾಜ್ಯದಲ್ಲಿ ಗೋಸಂಪತ್ತಿನ ರಕ್ಷಣೆಗಾಗಿ ಗೋಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಇದಕ್ಕೆ ಪೂರಕವಾಗಿ ಗೋಹತ್ಯೆ ತಡೆಯಲು ಜಾನುವಾರುಗಳನ್ನು ಸಂರಕ್ಷಿಸಲು ಪ್ರತಿ ಜಿಲ್ಲೆಗೆ ಒಂದರಂತೆ ಗೋಶಾಲೆ ಸ್ಥಾಪಿಸಲಾಗುವುದು" ಎಂದು ಹೇಳಲಾಗಿದೆ. 2022-23ನೇ ಸಾಲಿನ ಆಯವ್ಯಯದಲ್ಲಿ ಐಟಂ ನಂಬರ್ 54 ರಲ್ಲಿ "ಗೋಶಾಲೆಗಳಲ್ಲಿನ ಗೋವುಗಳನ್ನು ಸಾರ್ವಜನಿಕರು ಮತ್ತು ಖಾಸಗಿ ಸಂಸ್ಥೆಗಳು ವಾರ್ಷಿಕ ರೂ.11,000/-ಗಳ ಮೊತ್ತಕ್ಕೆ ದತ್ತು ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸಲು ನಮ್ಮ ಸರ್ಕಾರವು ರಾಜ್ಯದಲ್ಲಿಯೇ ಮೊದಲ ಬಾರಿಗೆ ಪುಣ್ಯಕೋಟಿ ದತ್ತು ಯೋಜನೆಯನ್ನು ಪ್ರಾರಂಭಿಸಲಿದೆ" ಎಂದು ಹೇಳಿದ್ದಾರೆ. ಅಂದರೆ ನಮ್ಮ ಬೆನ್ನು ನಾವೇ ತಟ್ಟಿಕೊಳ್ಳುವುದು, ಬೇರೆಯವರೇನು ತಟ್ಟಬೇಕಾಗಿಲ್ಲ. ಹೈಕೋರ್ಟ್‌ನಲ್ಲಿ ಒಂದು PIL (Public Interest Litigation) ನ್ನು ಹಾಕುತ್ತಾರೆ. ಅದು ಜೂನ್ 8 ತಾರೀಖಿಗೆ ಬರುತ್ತದೆ. ಆಗ ಸರ್ಕಾರ ನಾವು ಎಲ್ಲಾ ಜಿಲ್ಲೆಗಳ ಮಾಹಿತಿಯನ್ನು ಕೊಡುತ್ತೇವೆ, ನಮಗೆ ಒಂದು ವಾರ ಸಮಯ ಕೊಡುವಂತೆ ಕೇಳುತ್ತಾರೆ. ಆಗ ಒಂದು ಜಿಲ್ಲೆಯಲ್ಲೂ ಆಗಿರುವುದಿಲ್ಲ. ಅದೇ ಕೇಸ್ ಜೂನ್ 18ನೇ ತಾರೀಖಿಗೆ ಬರುತ್ತದೆ. ಚಿಕ್ಕಮಗಳೂರು, ವಿಜಯಪುರ, ಮೈಸೂರು, ಹಾಸನ ಮತ್ತು ತುಮಕೂರು ಜಿಲ್ಲೆಗಳಿಗೆ ಜೂನ್ 15ರೊಳಗೆ ಗೋಶಾಲೆಗಳನ್ನು ಪ್ರಾರಂಭ ಮಾಡಲಿದ್ದು, ಬೀದರ್, ಕೊಪ್ಪಳ, ಚಿತ್ರದುರ್ಗ, ಹಾವೇರಿ, ಉತ್ತರ ಕನ್ನಡ, ದಾವಣಗೆರೆ, ಕೊಡಗು, ಚಾಮರಾಜನಗರ, ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಆಗಸ್ಟ್ ಒಂದರೊಳಗೆ ಗೋಶಾಲೆಗಳನ್ನು ಪ್ರಾರಂಭಿಸಲಾಗುವುದು. ರಾಯಚೂರು, ಧಾರವಾಡ, ಮಂಡ್ಯ ಮತ್ತು ಯಾದಗಿರಿ ಜಿಲ್ಲೆಗಳಿಗೆ ಸೆಪ್ಟೆಂಬರ್ ಒಂದರೊಳಗೆ ಮಾಡಲಾಗುವುದು ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ಇವತ್ತು ನನಗೆ ಉತ್ತರ ಕೊಟ್ಟಿರತಕ್ಕಂಥದ್ದರಲ್ಲಿ '6 ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲಾಗಿದೆ' ಎಂದು ಹೇಳಿದ್ದಾರೆ. ಸರ್ಕಾರ ಕೋರ್ಟ್‌ಗೆ ಸಲ್ಲಿಸಿರುವ affidavit ಪ್ರಕಾರ, ಇಷ್ಟೊತ್ತಿಗೆ ಸುಮಾರು 25 ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ಪ್ರಾರಂಭ ಮಾಡಬೇಕಾಗಿತ್ತು. ಈ ಸ್ಕೀಂ ಬಹಳ ಒಳ್ಳೆಯದು. ನಾವೆಲ್ಲರೂ ಇದನ್ನು ಸ್ವಾಗತ ಮಾಡುತ್ತೇವೆ. ಆದರೆ ಇದಕ್ಕೆ ಏನಾದರೂ ಪೂರ್ವ ಚಿಂತನೆ

ಮಾಡಿ, ಮೊದಲು ಇದನ್ನು ಸರಿಪಡಿಸಿಕೊಂಡು ನಾವು ಇಂತಹ ಸ್ಕೀಂ ತರಬೇಕು. 30 ಜಿಲ್ಲೆಗಳಲ್ಲೂ ಇಷ್ಟು ಜಾಗ ಇರಬೇಕು. ಜಿಲ್ಲೆಗೊಂದು ಗೋಶಾಲೆಯನ್ನು ರೆಡಿ ಮಾಡಿಕೊಂಡು ಮಾಡಬೇಕಾಗಿತ್ತು ಅಲ್ಲವೇ? ಇವರಷ್ಟಕ್ಕೆ ಇವರೇ announce ಮಾಡಿಬಿಟ್ಟರು. ಆಯಿತು ಮಾಡಿದ ಮೇಲೆ ಏನಾಗಿದೆ? ಸರ್ಕಾರ ಅನುಬಂಧ-1ರಲ್ಲಿ 2019ನೇ ಸಾಲಿಗೆ ಒಟ್ಟು 77,075 ಬೀಡಾಡಿ ಹಸುಗಳಿವೆಯೆಂದು ಒಂದು statement ಕೊಟ್ಟಿದ್ದಾರೆ. ಇವತ್ತಿನ ಡೇಟ್‌ಗೆ ಏಕೆ statement ಕೊಡಲಿಲ್ಲ ಸ್ವಾಮಿ. ಅವರು ಈಗ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಇವತ್ತಿನ ಡೇಟ್‌ಗೆ statement ಕೊಡುವುದಕ್ಕೆ ಏನು ಸಮಸ್ಯೆ ಇದೆ. ನಿನ್ನೆ ದಿವಸ ಮಾನ್ಯ ಸದಸ್ಯರಾದ ಎಸ್.ರವಿಯವರು ಮಾತನಾಡುವಾಗ ಹಾಲು ಒಕ್ಕೂಟದ ಬಗ್ಗೆ ಹೇಳಿದರು. ರಾಜ್ಯದಲ್ಲಿ ಸುಮಾರು 13-14 ಒಕ್ಕೂಟಗಳಿದ್ದು, ಪ್ರತಿದಿನ ಒಂದು ಒಕ್ಕೂಟದಲ್ಲಿ 20 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತದೆಂದು ಹೇಳಿದರು. ಈಗ ಒಂದು ಹಸು ಒಂದು ದಿನಕ್ಕೆ 8 ಲೀಟರ್ ಹಾಲು ಕೊಡುತ್ತದೆ. ನನಗಿರುವ ಮಾಹಿತಿ ಪ್ರಕಾರ ಶೇ.65 ರಷ್ಟು . . .

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್ ರವರೇ, ವಿಷಯ ಬೇರೆ ಕಡೆಗೆ ಹೋಗುತ್ತಿದೆ. ತಾವು ದಯವಿಟ್ಟು ಮಾನ್ಯ ಸಚಿವರಿಗೆ ನೇರವಾಗಿ ಪ್ರಶ್ನೆ ಕೇಳಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇದೇ ವಿಷಯಕ್ಕೆ ಸಂಬಂಧಿಸಿದ್ದು. ಶೇ.65 ಗೋವುಗಳು ಗಂಡು ಹಸುಗಳಿಗೆ ಜನ್ಮ ನೀಡುತ್ತದೆ. ಹಾಗಾಗಿ, ಒಂದು ಹೋಬಳಿಗೆ ಒಂದೊಂದು ಗೋಶಾಲೆಗಳನ್ನು ಮಾಡಿದರೂ ಕೂಡ ಸಾಕಾಗುವುದಿಲ್ಲ. ಸರ್ಕಾರ ಏನು ಅನುಷ್ಠಾನವೇ ಮಾಡದೇ ಏಕೆ ಈ ರೀತಿ ಜನರಿಗೆ ಭಾವನಾತ್ಮಕವಾಗಿ ಸುಳ್ಳು ಹೇಳುತ್ತಿದ್ದಾರೆ ಎಂದು ನಾನು ಸರ್ಕಾರಕ್ಕೆ ಕೇಳಬಯಸುತ್ತಿದ್ದೇನೆ. ನಾನು ಈಗ ಒಂದು example ಹೇಳುತ್ತೇನೆ. . .

**ಸಭಾಪತಿಯವರು:-** ಮಾನ್ಯ ಯು.ಬಿ.ವೆಂಕಟೇಶ್‌ರವರೇ, ಮಾನ್ಯ ಸಚಿವರು ಹೇಳಲಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಮಾನ್ಯ ಎಸ್.ರವಿಯವರ ಪರವಾಗಿ ಪ್ರಶ್ನೆ ಕೇಳಿದ್ದಾರೆ. ಪ್ರತಿ ಜಿಲ್ಲೆಗೂ ಗೋಮಾಳ ಜಮೀನು ಆಯ್ಕೆಯಾಗಿದೆ. ಸಂಪೂರ್ಣ ಜಿಲ್ಲೆಗೆ 10 ಎಕರೆ, 15 ಎಕರೆ ಮತ್ತು 20 ಎಕರೆ ಗೋಮಾಳ ಜಮೀನು ಆಯ್ಕೆಯಾಗಿದೆ. ಚಿಕ್ಕಮಗಳೂರು, ವಿಜಯಪುರ, ಮೈಸೂರು, ಹಾಸನ ಮತ್ತು ತುಮಕೂರು ಮತ್ತು ಕೋಲಾರದಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಬೇಕಾಗಿತ್ತು. ರಾಜ್ಯದಲ್ಲಿ ಜೂನ್‌ನಿಂದ ಧಾರಾಕಾರವಾಗಿ ಮಳೆ ಬರುತ್ತಿದೆ. ಅದಕ್ಕಾಗಿ ನಮ್ಮ ಇಲಾಖೆಯ DD (Deputy Director)

ಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಮಳೆ ನಿಂತ ತಕ್ಷಣವೇ ಎಲ್ಲೆಲ್ಲಿ ಗೋಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇನೆ. ಆಮೇಲೆ ಮಾನ್ಯ ಸದಸ್ಯರು ಬಿಡಾಡಿ ದನಗಳ ಬಗ್ಗೆ ಕೂಡ ಹೇಳಿದರು. ಈ ಬಿಡಾಡಿ ದನಗಳನ್ನು ಕೂಡ ಗೋಶಾಲೆಗೆ shift ಮಾಡಬೇಕು. ಎಲ್ಲಾ ನಮ್ಮ ಪ್ರಾಣಿ ಸಹಾಯವಾಣಿ ಕೇಂದ್ರದಿಂದ, university ಯಿಂದ ಇವೆಲ್ಲದರಿಂದಲೂ ಈಗಾಗಲೇ awareness ಮಾಡುತ್ತಿದ್ದೇವೆ. ನಮ್ಮ ಗೋಶಾಲೆಗೆ ಬಿಡಾಡಿ ದನಗಳನ್ನು shift ಮಾಡುತ್ತಿದ್ದೇವೆ. ಈ ರೀತಿ ಕೆಲಸ ಆಗುತ್ತಿದೆ. ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದ ಮೇಲೆ ಕನಿಷ್ಟ 25,000 ಜಾನುವಾರುಗಳನ್ನು ರಕ್ಷಣೆ ಮಾಡಿದ್ದೇವೆ. ಸರ್ಕಾರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆ ಸೇರಿ ಕೆಲಸ ಮಾಡುತ್ತಿದ್ದೇನೆ. ಇದಕ್ಕಾಗಿ ಪ್ರತಿ ಜಿಲ್ಲೆಗೂ ರೂ.1 ಕೋಟಿಗಳನ್ನು ಖರ್ಚು ಮಾಡಿದ್ದೇವೆ. ನಮಗೆ ಇರುವ ಮಾಹಿತಿ ಪ್ರಕಾರ ಪ್ರತಿ ಜಿಲ್ಲೆಗೆ ರೂ. 1 ಕೋಟಿ ಹಣವನ್ನು ಕೊಟ್ಟಿದ್ದೇನೆ. ಈ ಗೋಶಾಲೆಗಳಲ್ಲಿ ಮೇವು, ನೀರು, ವಿದ್ಯುಚ್ಛಕ್ತಿ ವ್ಯವಸ್ಥೆ ಮತ್ತು ಶೆಡ್ ಮತ್ತು ಚಿಕಿತ್ಸೆ ಸೌಲಭ್ಯ ಇವೆಲ್ಲಾ ವ್ಯವಸ್ಥೆಯನ್ನು ನಾವು ಈಗಾಗಲೇ ಮಾಡಿದ್ದೇವೆ. ಶೀಘ್ರದಲ್ಲಿ ಏನು ಬಾಕಿ ಇದೆ ಅದನ್ನು ಕೂಡ ಪೂರ್ತಿ ಮಾಡುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆ ಕೇಳಿರುವುದು ಒಂದು ಅವರು ಹೇಳುತ್ತಿರುವುದು ಒಂದು.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಅದೇ ರೀತಿ ಇದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗ ನಾನು ಹೇಳುತ್ತಿರುವುದು ಏನೆಂದರೆ, ಶೇ.65 ಹಸುಗಳು ಗಂಡುಕರುಗಳನ್ನು ಹಾಕುತ್ತವೆ. ಸರ್ಕಾರ ಅವುಗಳಿಗೆ ಎಲ್ಲಿ ಜಾಗ ಕೊಡುತ್ತದೆ. ಈಗ ಮಾನ್ಯ ಸಚಿವರು ಚಿಕ್ಕಮಗಳೂರಿನಲ್ಲಿ ಎಮ್ಮೆದೊಡ್ಡಿಯಲ್ಲಿ ಗೋಶಾಲೆಯನ್ನು ಪ್ರಾರಂಭ ಮಾಡಿದ್ದೀರಿ. ಶೃಂಗೇರಿಯಿಂದ-ಕೊಪ್ಪಗೆ ಬರಬೇಕಾದರೆ ಸುಮಾರು 220 ಕಿ.ಮೀ ಆಗುತ್ತದೆ. ಮೂಡಿಗೆರೆ border ಗೆ ಬರಬೇಕಾದರೆ ಸುಮಾರು 150 ಕಿ.ಮೀ ಆಗುತ್ತದೆ. ಆದರೆ ಅವರು ಅಲ್ಲಿಗೆ ಹೇಗೆ ಸಾಗಿಸುತ್ತಾರೆ. ಅದಕ್ಕೆ ತಾವು ಏನು ಸಲಕರಣೆ ಮಾಡುತ್ತೀರಿ?

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮೊದಲು 30 ಗೋಶಾಲೆಗಳು ಆನಂತರ 70 ಗೋಶಾಲೆಗಳನ್ನು ಆರಂಭಿಸಲಾಗುವುದು. ಅದಕ್ಕೆ ಎಲ್ಲೆಲ್ಲಿ ಜಾಗ ಇದೆಯೋ ಅಲ್ಲಲ್ಲಿ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಗೋಶಾಲೆ ಇದೆಯೋ, ಅಲ್ಲಿಗೆ ಗೋವುಗಳನ್ನು ತಂದು ಬಿಡಲು ರೈತರಿಗೆ ಮನವಿ ಮಾಡುತ್ತಿದ್ದೇನೆ.

(ಮುಂದು)

(815)14.9.2022/12.40/ಎಂ.ಎಂ-ಎ.ಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಯು.ಬಿ. ವೆಂಕಟೇಶ್:-** ಗಂಡು ಕರು ಹುಟ್ಟಿದ ತಕ್ಷಣ ಶಿಫ್ಟ್ ಮಾಡುತ್ತಾರೆ. ಹೇಗೆ ಶಿಫ್ಟ್ ಮಾಡುವುದು? 220 ಕಿ.ಮೀ ನೀವು ಶಿಫ್ಟ್ ಮಾಡಬೇಕಾದರೆ . . .

**ಶ್ರೀ ಪ್ರಭು ಬಿ. ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಗಂಡು ಕರುಗಳು ಎಲ್ಲೆಲ್ಲಿ ಇರುತ್ತವೆ ಅವುಗಳನ್ನು ಗೋಶಾಲೆಗೆ ಶಿಫ್ಟ್ ಮಾಡುತ್ತಿದ್ದೇವೆ.

**ಸಭಾಪತಿಯವರು:-** ಈಗ ಶ್ರೀ ಎನ್. ರವಿಕುಮಾರ್‌ರವರ ಪ್ರಶ್ನೆ.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, 200 ಕಿ.ಮೀ ದೂರದಿಂದ ರೈತರು ಗಂಡು ಕರುಗಳನ್ನು ಸಾಗಣೆ ಮಾಡುವುದು ಹೇಗೆ? ಅದರ ಬಗ್ಗೆ ಸರ್ಕಾರ ಹೇಳಲಿ.

**ಸಭಾಪತಿಯವರು:-** ಇದು ಪ್ರಶ್ನೋತ್ತರ ವೇಳೆ ಎಷ್ಟು ಚರ್ಚೆ ಮಾಡುತ್ತೀರಿ?

**ಶ್ರೀ ಯು.ಬಿ. ವೆಂಕಟೇಶ್:-** ಪ್ರಶ್ನೋತ್ತರದಲ್ಲಿ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡದಿದ್ದರೆ ಹೇಗೆ? 200 ಕಿ.ಮೀ ದೂರದಿಂದ ಗಂಡು ಕರುಗಳನ್ನು ಸಾಗಿಸುವುದು ಹೇಗೆ ಎಂಬುದನ್ನು ತಿಳಿಸಲಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಗೋಶಾಲೆಯು ಸರ್ಕಾರದ ಒಂದು ದೊಡ್ಡ ಕಾರ್ಯಕ್ರಮವಾಗಿದೆ.

(ಗೊಂದಲ)

**ಸಭಾಪತಿಯವರು:-** ಪ್ರಶ್ನೋತ್ತರ ವೇಳೆಯಲ್ಲಿ ಎಷ್ಟು ಚರ್ಚೆ ಮಾಡುತ್ತೀರಿ? ಈಗ ಮಾನ್ಯ ಎನ್. ರವಿಕುಮಾರ್‌ರವರು ಪ್ರಶ್ನೆ ಕೇಳಲಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಸರ್ಕಾರದಿಂದ ಇನ್ನೂ ಸಮಂಜಸವಾದ ಉತ್ತರ ಬಂದಿಲ್ಲ.

**ಡಾ: ತೇಜಸ್ವಿನಿಗೌಡ:-** ಸಾಗಾಣಿಕೆ ಮಾಡುತ್ತೇವೆಂದು ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ.

**ಶ್ರೀ ಯು.ಬಿ. ವೆಂಕಟೇಶ್:-** ಸಾಗಿಸುವುದು ಹೇಗೆಂದು ಹೇಳಲಿ. ಎಮ್ಮೆದೊಡ್ಡಿಯಿಂದ ಆಸ್ಪತ್ರೆಗೆ 200 ಕಿ.ಮೀ ಆಗುತ್ತದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ ನಿಮಗೇನು ಸಂಬಂಧ? ದಯಮಾಡಿ ಕುಳಿತುಕೊಳ್ಳಿ. ಮಾನ್ಯ ರವಿಕುಮಾರ್‌ರವರೇ ಪ್ರಶ್ನೆ ಕೇಳಿ.

**ಚುಕ್ಕೆ ಪ್ರಶ್ನೆ ಸಂಖ್ಯೆ: 230**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಆದರೆ ಅದರಿಂದ ನಾನು ಅತ್ಯಂತ ಅಸಮಾಧಾನಿತನಾಗಿದ್ದೇನೆ. ಏಕೆಂದರೆ ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿದಂತಹ 15 ಎಕರೆ 12 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದಾರೆ. ಹೊಂಗಸಂದ್ರ ಗ್ರಾಮದ ಸರ್ವೆ ನಂ. 33ರಲ್ಲಿ; ಮಾನ್ಯ ಸದಸ್ಯರಾದ ಪಿ.ಆರ್. ರಮೇಶ್‌ರವರು ಇಲ್ಲಿಯೇ ಇದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಎರಡು ಸಲ ಚರ್ಚೆ ಮಾಡಿದ್ದೇವೆ. ಒತ್ತುವರಿ ಮಾಡಿದ್ದಾರಾ ಎಂದು ಕೇಳಿದರೆ ಹೌದು ಒತ್ತುವರಿ ಮಾಡಿದ್ದಾರೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ನಾನು ಅಭಿನಂದಿಸುತ್ತೇನೆ. ಎಷ್ಟು ಜನರು ಒತ್ತುವರಿ ಮಾಡಿದ್ದಾರೆ ಎಂದರೆ 229, ಆದರೆ ಕೇಸ್ ಹಾಕಿರುವುದು ಎಷ್ಟು ಜನರ ಮೇಲೆ ಎಂದರೆ 13 ಜನ ಒತ್ತುವರಿದಾರರ ಮೇಲೆ ಹಾಗೂ 5 ಜನ ಅನಧಿಕೃತ ಒತ್ತುವರಿದಾರರರ ಮೇಲೆ ಕೇಸ್ ಹಾಕಿದ್ದಾರೆ. ಇನ್ನು ಉಳಿದವರ ಮೇಲೆ ಏತಕ್ಕೆ ಕೇಸ್ ಹಾಕಿಲ್ಲ? ಇದು ಮೊದಲನೆಯದು. ಎರಡನೆಯ ಉಪ ಪ್ರಶ್ನೆಯೇನೆಂದರೆ, ನೀವು 229 ಜನರ ಮೇಲೂ ಕೇಸ್ ಹಾಕಬೇಕಾಗಿತ್ತು. ಏತಕ್ಕೆ 15-20 ಜನರ ಮೇಲೆ ಮಾತ್ರ ಕೇಸ್ ಹಾಕಿದ್ದಾರೆ? ಎರಡನೇ ಉಪ ಪ್ರಶ್ನೆ ಏನೆಂದರೆ, ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಜಾಗದ ಬಗ್ಗೆ ಕೋರ್ಟ್‌ಗೆ ಹೋಗುವುದಕ್ಕೆ ಒತ್ತುವರಿದಾರರಿಗೆ ಕಾಗದ ಪತ್ರಗಳು ಹೇಗೆ ಸಿಕ್ಕಿತು? ಅದನ್ನು ಅಧಿಕಾರಿಗಳು ಕೊಟ್ಟಿರಬೇಕು. ಒತ್ತುವರಿ ಮಾಡಿಕೊಂಡು ಮನೆಗಳನ್ನು ಕಟ್ಟಿದ್ದಾರೆ. ಆ ಮನೆಗಳಿಗೆ ಕರೆಂಟ್ ಸೌಲಭ್ಯ, ಒಳಚರಂಡಿ ವ್ಯವಸ್ಥೆಯ ಸೌಲಭ್ಯ ಕೊಟ್ಟಿದ್ದಾರೆ, ಎಲ್ಲಾ ಪರ್ಮಿಷನ್‌ಗಳನ್ನು ಕೊಟ್ಟಿದ್ದಾರೆಯೇ? ಏತಕ್ಕೆ ಪರ್ಮಿಷನ್ ಕೊಟ್ಟಿರಿ? ಅವರು ಅಧಿಕೃತ ಅಲ್ಲ, ಅನಧಿಕೃತ ಎಂದು ಆದ ಮೇಲೆ ಸರ್ಕಾರ ಏತಕ್ಕೆ ಅವರಿಗೆ ಪರ್ಮಿಷನ್ ಕೊಟ್ಟಿತು? ಪರ್ಮಿಷನ್ ಅನ್ನು ತೆರವು ಮಾಡುವುದಕ್ಕೋಸ್ಕರ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಈ ರೀತಿಯ ಪ್ರಶ್ನೆಗಳನ್ನು ನಾನು ಕೇಳುತ್ತಿದ್ದೇನೆ. ಇನ್ನೊಂದು ಬಹಳ ಅಭಿನಂದನೆಯ ವಿಷಯ ಏನೆಂದರೆ, 9 ಎಕರೆ ಜಮೀನನ್ನು ಸರ್ಕಾರ ವಶಪಡಿಸಿಕೊಂಡು ಕಾಂಪೌಂಡ್ ಕಟ್ಟುವುದಕ್ಕೋಸ್ಕರವಾಗಿ 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಆ ಕಾಂಪೌಂಡ್ ಎಲ್ಲಿಗೆ ಬಂತು? ಅದನ್ನು ಸಂಪೂರ್ಣ ಕಟ್ಟಾಗಿದೆಯೇ ಅಥವಾ ಅರ್ಧಂಬರ್ಧ ಆಗಿದೆಯೇ? ಈ ಪ್ರಶ್ನೆಗಳಿಗೆ ಉತ್ತರ ಕೊಟ್ಟ ನಂತರ ಇನ್ನೊಂದಿಷ್ಟು ಪ್ರಶ್ನೆಗಳನ್ನು ಕೇಳುತ್ತೇನೆ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:-** ಮಾನ್ಯ ಸಭಾಪತಿಯವರೇ, ದೇವಸ್ಥಾನಗಳು ಎಂದಾಗ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳಿಗೆ ಮತ್ತು ಭಕ್ತರಿಗೆ ಒಂದು ಅವಿನಾಭಾವ ಸಂಬಂಧ ಇದೆ.

ಮಾನ್ಯ ಸದಸ್ಯರಾದ ಎನ್. ರವಿಕುಮಾರ್‌ರವರ ಕಳಕಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಉತ್ತರದ ಬಗ್ಗೆ ಅವರು ಅಸಮಾಧಾನವನ್ನು ವ್ಯಕ್ತಪಡಿಸಿದರು. ತಿಗಳರಪೇಟೆಯಲ್ಲಿರುವಂತಹ ಶ್ರೀ ಧರ್ಮರಾಯಸ್ವಾಮಿ ದೇವಾಲಯದಲ್ಲಿ ಸುಮಾರು 15 ಎಕರೆ 12 ಗುಂಟೆ ಮತ್ತು ಹೊಂಗಸಂದ್ರದಲ್ಲಿರುವಂತಹ 16 ಎಕರೆ 25 ಗುಂಟೆ ಜಮೀನು ನಮ್ಮ ದೇವಾಲಯಕ್ಕೆ ಸೇರಿರುವುದಾಗಿದೆ. ಈಗ ಅವರಿಗೆ ಉತ್ತರ ಕೊಟ್ಟಿರುವ ರೀತಿಯಲ್ಲಿ ಅದನ್ನು ಬಹಳಷ್ಟು ಜನರು ಒತ್ತುವರಿ ಮಾಡಿದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಅದು ಇಂದಿನದಲ್ಲ, ಸುಮಾರು ವರ್ಷಗಳ ಹಿಂದೆ ಆಗಿರುವಂತಹ ಒತ್ತುವರಿಯಾಗಿದೆ. ಇದರಲ್ಲಿ 229 ಜನ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ 229 ಜನರಲ್ಲ 229 ಕಟ್ಟಡಗಳು ಆಗಿವೆ. ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಆ 229 ಕಟ್ಟಡಗಳು ಯಾವ ಸ್ಥಿತಿಯಲ್ಲಿವೆ ಎಂದು ಫೋಟೋಗಳನ್ನು ತೆಗೆದುಕೊಂಡು ನೋಡಿದೆ. ಅಲ್ಲಿರುವ 229 ಕಟ್ಟಡಗಳು ಜಿ+1, ಜಿ+2, ಜಿ+3 ಎಂದು ಈ ರೀತಿ ಕಟ್ಟಡಗಳನ್ನು ಕಟ್ಟಿಕೊಂಡಿದ್ದಾರೆ. ಸುಮಾರು 500-600 ಜನರು ಅಲ್ಲಿ ವಾಸ ಮಾಡುತ್ತಿದ್ದಾರೆ ಎಂಬುದು ನಮ್ಮ ಗಮನಕ್ಕೂ ಕೂಡ ಬಂದಿದೆ. ಅದರ ನಂತರ ಅನೇಕ ಜನರು ಕೋರ್ಟ್‌ಗೆ ಹೋದರು, ಕೋರ್ಟ್‌ನಲ್ಲಿ ಕೇಸ್ ವಜಾ ಆಯಿತು. ಈಗ ಅದು ನಮ್ಮ ಜಮೀನು ಎಂದು ಆಗಿದೆ. 13 ಜನರು ಮತ್ತು 5 ಜನರ ಮೇಲಷ್ಟೇ ಏತಕ್ಕೆ ಕೇಸ್ ಹಾಕಿ ಹಾಕಿದಿರಿ ಅಥವಾ ಪೋಲೀಸ್‌ಗೆ ಮಾಹಿತಿ ಕೊಟ್ಟಿದ್ದೀರಿ ಎಂದು ಬಹಳ ಒಳ್ಳೆಯ ರೀತಿಯ ಪ್ರಶ್ನೆ ಕೇಳಿದ್ದಾರೆ. ಇತ್ತೀಚಿನ ದಿನಗಳಲ್ಲಿ 13+5 ಜನರು ಒತ್ತುವರಿ ಮಾಡಿದಾಗ ತಕ್ಷಣವೇ ನಾವು ನಮ್ಮ ಇಲಾಖೆಯಿಂದ ಅದರ ಕಾರ್ಯಾಚರಣೆ ಮಾಡಿದ್ದೇವೆ. ಇನ್ನುಳಿದ ಜನರೇನಿದ್ದಾರೆ ಅವರನ್ನು ನಿರ್ದಾಕ್ಷಿಣ್ಯವಾಗಿ; ನಾನು ಈಗಾಗಲೇ ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಂಡ ಮೇಲೆ ನಮ್ಮ ಕರ್ನಾಟಕ ರಾಜ್ಯದಲ್ಲಿರುವ ದೇವಾಲಯಗಳ ಆಸ್ತಿ ಸರ್ವೆಯನ್ನು ಈಗಾಗಲೇ ಮಾಡುತ್ತಿದ್ದಾರೆ. ಕಂದಾಯ ಇಲಾಖೆ ಸಚಿವರು ಕೂಡ ನಮಗೆ ಸಹಕಾರ ಕೊಟ್ಟಿರುವುದರಿಂದ ಸಾವಿರಾರು ಎಕರೆ ಜಮೀನುಗಳ ಸರ್ವೆ ಈಗ ನಡೆಯುತ್ತಿದೆ. ಇದು ಕೂಡ ನಮ್ಮ ಗಮನಕ್ಕೆ ಬಂದಿದೆ. ಯಾವುದೇ ದಾಕ್ಷಿಣ್ಯವಿಲ್ಲದೇ; ನಾನು ಕಳೆದ ಬಾರಿಯ ಅಧಿವೇಶನದಲ್ಲಿ ಇರಲಿಲ್ಲ. ಮಾನ್ಯ ಸಚಿವರಾದ ಶ್ರೀ ವಿ. ಸೋಮಣ್ಣನವರು ಇದಕ್ಕೆ ಉತ್ತರ ಕೊಟ್ಟಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಐದು ಜನರ ಒಂದು ಸಮಿತಿಯನ್ನು ಮಾಡುತ್ತೇವೆ, ನಂತರ ಇಡೀ ಕರ್ನಾಟಕದಲ್ಲಿರುವಂತಹ ದೇವಾಲಯಗಳ ಮಾಹಿತಿಯನ್ನು ತೆಗೆದುಕೊಂಡು, 3-4 ತಿಂಗಳುಗಳಲ್ಲಿಯೇ ಆ ಮಾಹಿತಿಗಳನ್ನು ಒದಗಿಸುವ ರೀತಿಯಲ್ಲಿ ಈಗಾಗಲೇ ಸಭೆಗಳನ್ನು ಮಾಡಿದ್ದೇವೆ. ಆ ಕಾರ್ಯವನ್ನು ಕೂಡ ಈ ಅಧಿವೇಶನ ಆದ ತಕ್ಷಣವೇ ನಾವು ಪ್ರಾರಂಭ ಮಾಡುತ್ತೇವೆ. ಇದನ್ನೂ ಕೂಡ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವಂತಹ ಕಾರ್ಯವನ್ನು ನಾವು ಮಾಡುತ್ತೇವೆ ಎಂಬ ಮಾತನ್ನು ಮಾನ್ಯ ಸದಸ್ಯರಾದ ಎನ್. ರವಿಕುಮಾರ್‌ರವರಿಗೆ ಹೇಳಬಯಸುತ್ತೇನೆ. ಅದೇ ರೀತಿ ಅಧಿಕಾರಿಗಳ ಮೇಲೆ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬ ಪ್ರಶ್ನೆಗೆ ಸಂಬಂಧಪಟ್ಟಂತೆ ಆಯಾ ಸಂದರ್ಭದಲ್ಲಿ ಯಾರ್ಯಾರು ಅಧಿಕಾರಿಗಳು

ಇದ್ದರು ಅವರೆಲ್ಲರಿಗೂ ಈಗ ನೋಟಿಸನ್ನು ಕಳುಹಿಸಿದ್ದೇವೆ. ಅವರು ಈಗ ನಮಗೆ ಉತ್ತರವನ್ನು ಕಳುಹಿಸುತ್ತಿದ್ದಾರೆ. ಆ ಉತ್ತರಗಳನ್ನು ನೋಡಿಕೊಂಡು ಅವರಿಗೂ ಕೂಡ ಯಾರು ತಪ್ಪು ಮಾಡಿದ್ದಾರೆ, ಆ ಸಮಯದಲ್ಲಿ ಯಾವ ಅಧಿಕಾರಿಗಳಿದ್ದರು ಅವರ ಮೇಲೆಯೂ ಕೂಡ ಅಗತ್ಯವಾದಂತಹ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಕೆಲಸ ಮಾಡುತ್ತೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆಗಳನ್ನು ತುಂಬಾ ಕೇಳಬಹುದು. ಇದಕ್ಕೆ ಸಮಯದ ಮಿತಿ ಇರುವುದರಿಂದ ನಾನು ಇದನ್ನು ನಿಯಮ 72ರಡಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ಪತ್ರವನ್ನು ಕೊಡುತ್ತೇನೆ. ಇದರಲ್ಲಿ ಉತ್ತರವನ್ನು ಕೊಟ್ಟಿರುವುದರಲ್ಲಿ ಇನ್ನು ಮುಂದೆ ಯಾವುದೇ ಖಾತೆ ಮಾಡುವುದಿಲ್ಲವೆಂದು ಸಹಾಯಕ ಕಂದಾಯ ಅಧಿಕಾರಿಯವರು ತಿಳಿಸಿರುತ್ತಾರೆ ಎಂದು ಇದೆ. ಅಂದರೆ ಈ ಹಿಂದೆ ನೀವು ಮಾಡಿದ್ದೀರಲ್ಲವೇ? ಅದಕ್ಕೆ ಏನು ಕ್ರಮವಾಗಿದೆ? ಇದು ಮೊದಲನೆಯದು. ಎರಡನೆಯದಾಗಿ ಇಲಾಖಾ ಅನುಮತಿ ಪಡೆಯದೇ ಯಾವುದೇ ಮನೆ ಮತ್ತು ಮಳಿಗೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಸಂಪರ್ಕ ನೀಡದಂತೆ ತಿಳಿಸಲಾಗಿರುತ್ತದೆ ಎಂದು ಉತ್ತರದಲ್ಲಿದೆ. ಅಂದರೆ ಈ ಹಿಂದೆ ಕೊಟ್ಟಿದ್ದೀರಿ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಅನಧಿಕೃತದಾರರ ಹೆಸರಿಗೆ ಖಾತಾಗಳನ್ನು ಮಾಡದಂತೆ ಬಿ.ಬಿ.ಎಂ.ಪಿ, ಆಯುಕ್ತರಿಗೆ ಹಾಗೂ ವಿದ್ಯುತ್ ಸರಬರಾಜು ಮತ್ತು ಕುಡಿಯುವ ನೀರು ಮತ್ತು ಒಳಚರಂಡಿ ಸೌಲಭ್ಯ ಕಲ್ಪಿಸದಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ. ಇಲ್ಲಿ ಎಷ್ಟು ಜನ ಅಧಿಕಾರಿಗಳಾಗುತ್ತಾರೆ? 229 ಮನೆಗಳೆಂದರೆ ಸುಮಾರು ಒಂದು ಸಣ್ಣ ಊರಿನಷ್ಟಾಗುತ್ತದೆ. ಇದು ದೇವಸ್ಥಾನದ ಜಾಗ. ದೇವರ ಜಮೀನು ದೇವರ ಹೆಸರಿನಲ್ಲಿರಲಿ ಎಂದು ಸುಪ್ರೀಂ ಕೋರ್ಟ್ ತೀರ್ಪು ಇದೆ. ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಏನಿದೆ ಅದು ಪೂರ್ತಿಯಾಗಿ ಆ ದೇವರ ಹೆಸರಿಗೆ ಖಾತೆ ಆಗಬೇಕು. ಇದು ಮೊದಲನೆಯದು. ಎರಡನೆಯದಾಗಿ ನನಗೆ ಮಂತ್ರಿಗಳು ಬರಬೇಕು, ಅದಕ್ಕೆ ಒಂದು ದಿನಾಂಕವನ್ನು ನಿಶ್ಚಯ ಮಾಡಿ. ಆ ದೇವಸ್ಥಾನಕ್ಕೆ ನಾವು ಭೇಟಿ ಕೊಡಬೇಕು. ಈ ಅಧಿವೇಶನ ಮುಗಿಯುವುದರೊಳಗೆ ದಿನಾಂಕವೊಂದನ್ನು ನಿಶ್ಚಯ ಮಾಡಿ, ನಾವು ಆ ಸ್ಥಳವನ್ನು ನೋಡಬೇಕು. ಕಾಂಪೌಂಡನ್ನು ಎಷ್ಟು ಕಟ್ಟಿದ್ದಾರೆ, ಎಷ್ಟು ಜಮೀನನ್ನು ಒತ್ತುವರಿ ಮಾಡಿದ್ದಾರೆ, ಅಲ್ಲಿ ಎಷ್ಟು ಮನೆಗಳಿವೆ? ಅದಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಕರೆಯಿರಿ. ಆ ದಿನಾಂಕವನ್ನು ದಯವಿಟ್ಟು ನನಗೆ ಕೊಡಿ. ಮಾನ್ಯ ಸಚಿವರಾದ ವಿ. ಸೋಮಣ್ಣನವರು ಇದರ ಬಗ್ಗೆ ಎಸ್.ಐ.ಟಿ., ತನಿಖೆ ಮಾಡಬೇಕೆಂದು ಹೇಳಿದರು. ಸರ್ಕಾರ S.I.T (Special Investigation Team) ತನಿಖೆ ಮಾಡಿಸಿದೆಯೇ? ಮಾಡಿಸಲಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ಈ ರೀತಿ ದೇವಸ್ಥಾನದ ಜಾಗವನ್ನು ಹೊಡೆದಿರುವಂತಹ ಭೂಗಳ್ಳರು ಬೆಂಗಳೂರಿನಲ್ಲಿ ಬಹಳ ಜನರಿದ್ದಾರೆ.

**ಶ್ರೀ ವಿ. ಸೋಮಣ್ಣ(ವಸತಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎನ್. ರವಿಕುಮಾರ್‌ರವರು ಏನು ಹೇಳಿದ್ದಾರೆ ಅದಕ್ಕೆ ಸಂಬಂಧಿಸಿದಂತೆ ಅವತ್ತು ಸಹೋದರಿಯಾದ ಮಾನ್ಯ ಸಚಿವರು ಸದನದಲ್ಲಿ ಇರಲಿಲ್ಲ. ಅದಕ್ಕೆ ನಾನೇ ಉತ್ತರ ಕೊಟ್ಟಿದ್ದೆ. ಸಮರ್ಪಕವಾಗಿ ವಿವರಣೆ ಕೊಟ್ಟಿದ್ದೇನೆ.

(ಮುಂದು)

(816) 14-09-2022 KH-AK 12-50 (ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ. ಸೋಮಣ್ಣ (ಮುಂದು):-**

ಇದರಲ್ಲಿ ಎಲ್ಲರೂ ಭಾಗಿಯಾಗಿರುವುದರಿಂದ, ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕೆಂದು ಇದನ್ನು S.I.T (Special Investigation Team) ತನಿಖೆಗೆ ಕೊಡುತ್ತೇವೆ ಎಂದು ಈಗಾಗಲೇ ನಾನು ಮಾನ್ಯ ಕಂದಾಯ ಸಚಿವರಿಗೆ ತಿಳಿಸಿದ್ದೇನೆ. ಈಗ ಕಂದಾಯ ಸಚಿವರ ಹತ್ತಿರ ಮಾತನಾಡುತ್ತೇನೆ. ಇದನ್ನು ತಕ್ಷಣವೇ ಎಸ್.ಐ.ಟಿ., ತನಿಖೆಗೆ ಕೊಡುವುದಕ್ಕೆ ಯಾವ್ಯಾವ ರೀತಿಯಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಬೇಕೋ, ಆ ರೀತಿ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಹೋದರರಾದಂತಹ ಮಾನ್ಯ ವಿ.ಸೋಮಣ್ಣನವರು ಏನು ಹೇಳಿದ್ದಾರೆ. ಅದಕ್ಕೆ ನಾವಿಬ್ಬರು ಸೇರಿ ಇವತ್ತು ಮಾನ್ಯ ಕಂದಾಯ ಸಚಿವರ ಹತ್ತಿರ ಮಾತನಾಡಿ ಮಾಡುತ್ತೇವೆ. 9 ಎಕರೆ ಜಮೀನಿಗೆ ಕಾಂಪೌಂಡ್ ಹಾಕುವುದಕ್ಕೆ 80 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಡಿ.ಸಿ. ಅಕೌಂಟ್‌ಗೆ ಹಾಕಿದ್ದೇವೆ. ಆ ಕೆಲಸ ನಡೆಯುವುದಕ್ಕೆ ಕೆಲವೊಂದು ತೊಂದರೆಗಳು ಇವೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರ ಹತ್ತಿರ ವೈಯಕ್ತಿಕವಾಗಿ ಮಾತನಾಡಿ, ಮುಂದೆ ಏನು ಮಾಡಬೇಕೆಂಬ ಬಗ್ಗೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ ಮನೆಗಳಿಗೆ ಲೈಟ್ ವ್ಯವಸ್ಥೆ, ಚರಂಡಿ ವ್ಯವಸ್ಥೆ ಇದೆಲ್ಲವನ್ನೂ ಮಾಡಿರುವಂತಹದ್ದು ಇದೆ. ಎಲ್ಲರಿಗೂ ಪತ್ರವನ್ನು ಬರೆದಿದ್ದೇವೆ. ಇನ್ನು ಮುಂದೆ ಮಾಡಬೇಕಾಗಿರುವಂತಹದ್ದು ಈ ಉತ್ತರದಲ್ಲಿ ಬಂದಿದೆಯೋ, ಹಾಗೆಯೇ ಈ ಹಿಂದೆಯೂ ಆಗಿರುವಂತಹದ್ದು ತಪ್ಪಾಗಿದೆ. ಇದಕ್ಕೆ ಬಹಳ ಗಂಭೀರವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಇವತ್ತು ಅವರನ್ನು ಕರೆಸಿ ಅವರ ಜೊತೆ ಮಾತನಾಡಿ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ನಮ್ಮ ದೇವಾಲಯಗಳ ಜಮೀನುಗಳು ಒತ್ತುವರಿಯಾಗಿದ್ದರೆ, ನಿರ್ದಾಕ್ಷಿಣ್ಯವಾದಂತಹ ಕಠಿಣ ಕ್ರಮದೊಂದಿಗೆ ತೆರವು ಮಾಡುವಂತಹ ಕಾರ್ಯವನ್ನು ನಾವು ಪ್ರಾಮಾಣಿಕವಾಗಿ ಮಾಡುತ್ತೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮೊದಲನೆಯದು ಸ್ಥಳ ಪರಿವೀಕ್ಷಣೆ ಮಾಡಬೇಕು. ಎರಡನೆಯದು, 2017 ರಲ್ಲಿ ೮೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಕಾಂಪೌಂಡ್ ನಿರ್ಮಾಣ ಕಾಮಗಾರಿ ಎಲ್ಲಿಗೆ ಬಂದಿದೆ?

**ಸಭಾಪತಿಯವರು:-** ಮಾನ್ಯ ಸಚಿವರೇ, ಕಾಂಪೌಂಡ್ ಬಗ್ಗೆ ಹೇಳಿ.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:-** ಮಾನ್ಯ ಸಭಾಪತಿಯವರೇ, ನಾವು ೮೦ ಲಕ್ಷ ರೂಪಾಯಿಗಳನ್ನು ಡಿ.ಸಿ. ಅಕೌಂಟ್‌ಗೆ ಹಾಕಿದ್ದೇವೆ. ಕಾಂಪೌಂಡ್‌ಗೆ ದುಡ್ಡು ಬಿಡುಗಡೆ ಮಾಡಿದ್ದೇವೆ. ಇವತ್ತು ಯಾವ ಪರಿಸ್ಥಿತಿಯಲ್ಲಿದೆ ಎಂದು ತಿಳಿದುಕೊಂಡು ಅವರ ಹತ್ತಿರ ಮಾತನಾಡುತ್ತೇನೆ.

**ಶ್ರೀ ಪಿ.ಆರ್. ರಮೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನೆನ್ನೆಯ ದಿವಸ ಶೂನ್ಯವೇಳೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಸದನದಲ್ಲಿ ನಾನು 4 ವರ್ಷಗಳಿಂದ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇದರ ಬಗ್ಗೆ ತಮಗೂ ಚೆನ್ನಾಗಿ ಗೊತ್ತಿದೆ. ಈ ವಿಚಾರದಲ್ಲಿ ಮಾನ್ಯ ಸಚಿವರಾದ ವಿ.ಸೋಮಣ್ಣನವರು ಉತ್ತರ ಕೊಟ್ಟಿದ್ದಾರೆ. 2015 ರಲ್ಲಿ ೮೦ ಲಕ್ಷ ರೂಪಾಯಿಗಳು ಮಂಜೂರಾತಿಯಾಗಿದೆ. 2017 ರಲ್ಲಿ ಬಿಡುಗಡೆಯಾಗಿದೆ. ಆವತ್ತು ಯಾವ ಸ್ಥಿತಿಯಲ್ಲಿತ್ತು ಎನ್ನುವುದು ಬಹಳ ಮುಖ್ಯ. ಇವತ್ತು 221 ಮನೆಗಳನ್ನು ಕಟ್ಟಿದ್ದಾರೆಯಲ್ಲವೇ, ಒಂದು ಮನೆ ತೆಗೆದುಕೊಳ್ಳುವುದಕ್ಕೆ ನನ್ನಂತಹವನಿಗೆ ಅಲ್ಲಿ ಸುಮಾರು 40 ರಿಂದ 50 ಲಕ್ಷ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ. ತಾವು Watch and Ward ಅನ್ನು ಹಾಕಿದ್ದೀರ. Watch and Ward ಗೆ ದೇವಸ್ಥಾನದ ಹಣವನ್ನು ಕೊಟ್ಟಿದ್ದೀರಿ. ಅಷ್ಟು ಹಣವನ್ನು ಕೊಟ್ಟರೂ ಸಹ ಆ ಜಾಗವನ್ನು ಸಂರಕ್ಷಣೆ ಮಾಡಿಲ್ಲ. ತಾವು ಅಷ್ಟೆಲ್ಲಾ ಹಣವನ್ನು ಖರ್ಚು ಮಾಡಿ ಸಂರಕ್ಷಣೆ ಮಾಡದೇ ಇದ್ದ ಮೇಲೆ ಇದಕ್ಕೆ ಏನು ಅರ್ಥ? ಆ ಹಣವೂ ಉಳಿತಾಯವಾಗಲಿಲ್ಲ, ಜಾಗವೂ ಸಂರಕ್ಷಣೆಯಾಗಲಿಲ್ಲ. ಸರ್ಕಾರ ಏನು ಬೇಕಾದರೂ ಮಾಡುತ್ತಿರುತ್ತದೆಯೇ? ಸರ್ಕಾರ ಮಾಫಿಯಾ ಕೆಲಸ ಮಾಡುತ್ತಿದೆಯೇ?

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರೇ, ಇದು ಒಂದು ದಿವಸದಲ್ಲಿ ಆಗುವಂತಹ ಕೆಲಸ ಅಲ್ಲ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ದೇವಸ್ಥಾನದ ಸ್ವತ್ತು ಸಾಕಷ್ಟು ಎಕರೆಗಳಷ್ಟು ಹೋಗಿಬಿಟ್ಟಿದೆ. ಇನ್ನುಳಿದಿರುವಂತಹದ್ದು ಈ ಎರಡೇ.

**ಸಭಾಪತಿಯವರು:-** ಮಾನ್ಯ ಪಿ.ಆರ್.ರಮೇಶ್‌ರವರೇ, ಮಾನ್ಯ ಮಂತ್ರಿಗಳು ವಿಷಯವನ್ನು ತಿಳಿದುಕೊಂಡು ಹೇಳುತ್ತೇನೆ ಎಂದು ಹೇಳಿದ್ದಾರೆ. ಹಾಗೆಯೇ ಇನ್ನೊಂದು ಬಾರಿ ಅಪ್‌ಡೇಟ್ ಮಾಡಿಕೊಂಡು ಹೇಳುತ್ತೇನೆ ಎಂದು ಹೇಳಿದ್ದಾರೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಈ ಸರ್ಕಾರ, ಆ ಸರ್ಕಾರ ಎಂದು ಹೇಳುತ್ತಿಲ್ಲ. ಒಟ್ಟಿನಲ್ಲಿ ಆ ಜಾಗದ ವ್ಯವಸ್ಥೆಯಾಗಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, conclude ಮಾಡಿ. Please conclude.

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:-** ಮಾನ್ಯ ಸಭಾಪತಿಯವರೇ, ಇಬ್ಬರು ಸಹೋದರರು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಸುಮಾರು ವರ್ಷಗಳಿಂದ ಆಗುತ್ತಿರುವಂತಹ ಇಂತಹ ಕಾರ್ಯವನ್ನು ತಡೆಗಟ್ಟುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇದಕ್ಕೆ ಯಾವುದೇ ದಾಕ್ಷಿಣ್ಯ ಇಲ್ಲದೇ ಅಲ್ಲಿಗೆ ಹೋಗಿ ಏನು ಆಗಿದೆ ಎಂದು ತಿಳಿದುಕೊಂಡು ಮುಂದಿನ ಕ್ರಮದ ಬಗ್ಗೆ ತೀರ್ಮಾನ ಮಾಡುತ್ತೇನೆ. ತಮ್ಮಿಬ್ಬರ ಹತ್ತಿರ ಕೂಡ ಇದರ ಬಗ್ಗೆ ಮಾತನಾಡುತ್ತೇನೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವ ದಿನಾಂಕ ಎಂದು ಹೇಳಬೇಕು.

**ಪ್ರಶ್ನೆ ಸಂಖ್ಯೆ: 221**

**ಶ್ರೀ ಸಿ.ಸಿ.ಪಾಟೀಲ (ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಉತ್ತರಿಸಲು ನಾನು ಸಮಯ ಕೇಳಿದ್ದೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಗೋವಿಂದರಾಜುರವರೇ, ಮಾನ್ಯ ಸಚಿವರು ಒಂದು ವಾರದ ಸಮಯಾವಕಾಶ ಕೇಳಿದ್ದಾರೆ.

**ಶ್ರೀ ಸಿ.ಸಿ.ಪಾಟೀಲ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಇದೇ ಅಧಿವೇಶನದಲ್ಲಿ ಉತ್ತರವನ್ನು ಒದಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಇದೇ ಅಧಿವೇಶನದಲ್ಲಿ ತಮಗೆ ಉತ್ತರವನ್ನು ಒದಗಿಸುತ್ತಾರೆ.

**ಪ್ರಶ್ನೆ ಸಂಖ್ಯೆ: 319**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಒಂದು ಕಾಲದಲ್ಲಿ ಹಸು ಸಾಕಾಣಿಗೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಮತ್ತು ಹಂದಿ ಸಾಕಾಣಿಕೆ ಎನ್ನುವುದು ನಮ್ಮ ಗ್ರಾಮಾಂತರ ಪ್ರದೇಶಗಳ ಉಪ ಕಸುಬು ಆಗಿತ್ತು. ಪ್ರಸ್ತುತದಲ್ಲಿ ಈ ಸಾಕಾಣಿಕೆಗಳು ರೈತರ ಜೀವನಾವಲಂಬನೆಗೆ ಆಧಾರವಾಗಿತ್ತು. ಮುಂದುವರೆದು, ಈ ಸಾಕಾಣಿಕೆಗಳು ಇತ್ತೀಚಿನ ದಿನಗಳಲ್ಲಿ ವಾಣಿಜ್ಯ ಉದ್ದಿಮೆಗಳಾಗಿ ಪರಿವರ್ತನೆಯಾಗಿದೆ. ಹೈನುಗಾರಿಕೆ ಇರಬಹುದು, ಕುಕ್ಕುಟೋದ್ಯಮ ಇರಬಹುದು ಮತ್ತು ಕುರಿ ಸಾಕಾಣಿಕೆ ಉದ್ಯಮ ಇರಬಹುದು. ಕಳೆದ ಕೋವಿಡ್-19ರ ಒಂದನೇ ಮತ್ತು ಎರಡನೇ ಅಲೆಯಲ್ಲಿ ಸಾಕಷ್ಟು ರೀತಿಯಲ್ಲಿ ಹೈನುಗಾರಿಕೆ ಉದ್ಯಮ ಮತ್ತು ಕುಕ್ಕುಟೋದ್ಯಮ ಸೊರಗಿ ಹೋಗಿದೆ. ಅದರಲ್ಲಿಯೂ ಕಳೆದ 5 ವರ್ಷಗಳ ಮಳೆಯಲ್ಲಿಯೂ ಕೂಡ ಗ್ರಾಮಾಂತರ ಪ್ರದೇಶದ ರೈತರು ಕಂಗಾಲಾಗಿದ್ದಾರೆ. ಯಾವುದನ್ನು ಉಪ ಕಸುಬು ಎಂದು ಮಾಡಿದ್ದರೋ, ಅದು ಜೀವನಾಧಾರಿತ ಕಸುಬು ಆಗಿದೆ. ಅದರಲ್ಲಿಯೂ ಕೂಡ ಯಾವುದೇ ರೀತಿಯಲ್ಲಿ ರೈತನಿಗೆ ಲಾಭ ಇಲ್ಲ. ರಾಜ್ಯದಲ್ಲಿ ಕರ್ನಾಟಕ ಹಾಲು ಮಹಾಮಂಡಳ ಇದೆ. ಅದೇ ರೀತಿ 15 ಜಿಲ್ಲಾ ಹಾಲು ಒಕ್ಕೂಟಗಳು ಇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಸಚಿವರಲ್ಲಿ ಪ್ರಶ್ನೆ ಏನೆಂಬುದನ್ನು ಕೇಳಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಭಾಷಣ ಮಾಡುತ್ತಿಲ್ಲ. ನಾನು data ಕೊಟ್ಟು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದಕ್ಕೆ ಆಧಾರ ಇದೆ ಅದಕ್ಕೋಸ್ಕರವಾಗಿ ಕೇಳುತ್ತಿದ್ದೇನೆ. ಈ 15 ಜಿಲ್ಲಾ ಹಾಲು ಒಕ್ಕೂಟದಲ್ಲಿ ಸುಮಾರು 16,000 ಪ್ರಾಥಮಿಕ ಸಹಕಾರ ಘಟಕಗಳು ಇವೆ. ಸುಮಾರು 20 ಲಕ್ಷ ಹಾಲು ಉತ್ಪಾದಕರು ಇದ್ದಾರೆ. ಪ್ರತಿ ದಿವಸ ಸುಮಾರು 83.91 ಲಕ್ಷ ಕೆಜಿ ಲೆಕ್ಕದಲ್ಲಿ ಹಾಲು ಉತ್ಪಾದನೆಯಾಗುತ್ತಿದೆ. ಜೂನ್ ತಿಂಗಳಿನಲ್ಲಿ ಬಿದ್ದಂತಹ ಮಳೆಯಿಂದ ಸುಮಾರು ಶೇಕಡಾ 15 ರಷ್ಟು ಹಾಲು ಉತ್ಪಾದನೆಯಲ್ಲಿ ಕಡಿಮೆಯಾಗಿದೆ. ಸುಮಾರು 12 ಲಕ್ಷ ಲೀಟರ್ ಹಾಲು ಉತ್ಪಾದನೆ ಕಡಿಮೆಯಾಗಿದೆ. ಇದನ್ನು ಹೆಚ್ಚಳ ಮಾಡಬೇಕಾಗುತ್ತದೆ. ಇಲ್ಲಿ ಏನಾಗಿದೆಯೆಂದರೆ, ರೈತರು ಹಾಲು ಉತ್ಪಾದನೆ ಮಾಡಿ ತೆಗೆದುಕೊಂಡು ಬರುತ್ತಾರೆ. ಜಿಲ್ಲಾ ಹಾಲು ಘಟಕಗಳ ಅಡಿಯಲ್ಲಿ ಇರುವಂತಹ ಪ್ರಾಥಮಿಕ ಹಾಲು ಉತ್ಪಾದಕರ ಘಟಕಗಳು ಜಿಡ್ಡು ಮತ್ತು ಕೊಬ್ಬು ಅಂದರೆ SNF (Solids-Not-Fat) ಇಲ್ಲದೇ ಇದ್ದರೆ ಅದನ್ನು ವಾಪಸ್ಸು ಕಳುಹಿಸಿಕೊಡುತ್ತಾರೆ. ಬಹುಶಃ ಮಾನ್ಯ ಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲವೆಂದು ಕಾಣಿಸುತ್ತದೆ.

ಪ್ರತಿ ದಿವಸ ಸುಮಾರು 12 ಲಕ್ಷ ಲೀಟರ್ ಹಾಲು ಉತ್ಪಾದನೆಯು ಕಡಿಮೆಯಾಗಿದೆ. ಇಂತಹ ಪ್ರಕರಣಗಳನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು ಮತ್ತು ಇದರ ಬಗ್ಗೆ ನೆನ್ನೆಯ ದಿವಸ ಮಾನ್ಯ ಸದಸ್ಯರಾದ ರವಿಯವರು ಮಾತನಾಡಿದರು. ಬಹುಶಃ ಅವರು ಕರ್ನಾಟಕ ಹಾಲು ಮಹಾಮಂಡಳ ಒಕ್ಕೂಟದಲ್ಲಿ ಇದ್ದಾರೆ ಅನಿಸುತ್ತದೆ. ಈ ದೃಷ್ಟಿಯಲ್ಲಿ ತಾವೇನು ರೈತರಿಗೆ ಪಶು ಆಹಾರ ಮತ್ತು ಬೂಸ ಕೊಡುತ್ತಿದ್ದೀರಿ. ಈಗ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳ ಉತ್ಪನ್ನದಿಂದ ಕೊಡುತ್ತಿದ್ದೀರಿ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರೇ, ನೇರವಾಗಿ ಪ್ರಶ್ನೆಗೆ ಬಂದರೆ ಅನುಕೂಲವಾಗುತ್ತದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿದ್ದೇನೆ. ತಾವು ಬಾಕಿಯವರಿಗೆಲ್ಲಾ ಅವಕಾಶ ಕೊಟ್ಟಿದ್ದೀರಿ. ನನಗೆ ಅವಕಾಶ ಕೊಡದೇ ಇದ್ದರೆ ಕುಳಿತುಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರೇ, ತಾವು ಪ್ರಶ್ನೆ ಏನೆಂದು ಕೇಳಿ?

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ತಾವು ಕೇಳುವುದಿಲ್ಲ ಎಂದರೆ ನಾನು ಕುಳಿತುಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರೇ, ಇದು ಪ್ರಶ್ನೋತ್ತರ ಅವಧಿ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಹಾಗಾಗಿ ತಾವು ಕೊಡುವಂತಹ ಪಶು ಆಹಾರ ಮತ್ತು ಬೂಸವನ್ನು ರಿಯಾಯಿತಿ ದರದಲ್ಲಿ ಕೊಡುವಂತಹ ವ್ಯವಸ್ಥೆಯನ್ನು ಮಾಡಿ ಮತ್ತು ಎಲ್ಲಿ SNF ಕಡಿಮೆ ಇದೆ ಎಂದು ಹಾಲನ್ನು ವಾಪಸ್ಸು ಕಳುಹಿಸುತ್ತಿದ್ದಾರೆ, ಆ ದೃಷ್ಟಿಯಲ್ಲಿ ಕೂಡ ಗಮನಹರಿಸಿ. ಆ ರೀತಿ ಆಗದೇ ಇರುವ ಹಾಗೆ ನೋಡಿಕೊಳ್ಳಿ. ತಾವು ಎಲ್ಲಿಯೂ ಕೂಡ SNF ಕಡಿಮೆಯಾಗಿಲ್ಲ ಎಂದು ಹೇಳಿದ್ದೀರಿ. ಜಿಡ್ಡು ಮತ್ತು ಕೊಬ್ಬಿನ ಅಂಶ ಕಡಿಮೆಯಾಗಿದೆ. ಸಾಕಷ್ಟು ರೀತಿಯಲ್ಲಿ ಪ್ರೆಸ್ ಮೀಡಿಯಾದಲ್ಲಿಯೂ ಕೂಡ ವರದಿ ಬಂದಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಹೈನುಗಾರಿಕೆಯಲ್ಲಿ ತೊಡಗಿಕೊಂಡವರು ಏನಿದ್ದಾರೆ, ನಮ್ಮ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಆ

ರೈತರು ಹಾಕುವಂತಹ ಹಾಲನ್ನು ವಾಪಸ್ಸು ಕಳುಹಿಸುತ್ತಿದ್ದಾರೆ. ಅದನ್ನು ವಾಪಸ್ಸು ಕಳುಹಿಸದ ರೀತಿ ಕ್ರಮವಹಿಸಬೇಕು.

**ಶ್ರೀ ಪ್ರಭು ಬಿ. ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು ಕೊಟ್ಟಿರುವಂತಹ ಸಲಹೆ, ಸೂಚನೆಗಳನ್ನು ಪರಿಶೀಲನೆ ಮಾಡುತ್ತೇವೆ. ತಾವು fat ಮತ್ತು SNF ಬಗ್ಗೆ ಗುಣಮಟ್ಟವನ್ನು ನೋಡುತ್ತೇವೆ. ಜೂನ್ ತಿಂಗಳನಲ್ಲಿ ಮಳೆ ಜಾಸ್ತಿಯಾಗಿ ಹಾಲು ಉತ್ಪಾದನೆ ಕಡಿಮೆಯಾಗಿದೆ. ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಮುಂದೆ ಏನು ಮಾಡಬೇಕೆಂಬ ಬಗ್ಗೆ ಎಲ್ಲರ ಜೊತೆ ಸಭೆ ಮಾಡಿ, ತಮ್ಮ ಹತ್ತಿರ ಸಲಹೆ ತೆಗೆದುಕೊಂಡು, ಚರ್ಚೆ ಮಾಡಿ, ಇದನ್ನು ಸರಿಪಡಿಸುತ್ತೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಕೇಳುವುದೇನೆಂದರೆ, SNF ಕಡಿಮೆಯಾದರೆ ಹಾಲನ್ನು ಶೇಖರಣೆ ಮಾಡುವುದಿಲ್ಲ, ವಾಪಸ್ಸು ಕಳುಹಿಸುತ್ತಾರೆ. SNF ಇಲ್ಲದಿದ್ದರೆ ಹಾಲನ್ನು ವಾಪಸ್ಸು ಕಳುಹಿಸುತ್ತಾರೆ. ಪೇಮೆಂಟ್ ಆಗುವುದಿಲ್ಲ. ಡಿಗ್ರಿ ಕಡಿಮೆಯಾಗುತ್ತದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಅವರು ಹುಲ್ಲನ್ನು ಬೆಳೆಯುತ್ತಾರೆಯಲ್ಲವೇ, ಅದರಲ್ಲಿ ತೇವಾಂಶ ಕಡಿಮೆಯಾಗಿ ಹಸುಗಳು ಹುಲ್ಲನ್ನು ತಿನ್ನುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಈ ರೀತಿ ತೊಂದರೆಯಾಗಿದೆ, ಇದನ್ನು ಸರಿಯಾಗಿ ನೋಡಿಕೊಳ್ಳಿ ಎನ್ನುವ ದೃಷ್ಟಿಯಲ್ಲಿ ಕೇಳಿರುವಂತಹ ಪ್ರಶ್ನೆ ಇದು.

**ಶ್ರೀ ಪ್ರಭು ಬಿ. ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿಯವರು ಏನೇನು ಹೇಳಿದ್ದಾರೆ, ಅದನ್ನು ಗಮನಕ್ಕೆ ತೆಗೆದುಕೊಂಡು ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

(ಮುಂದು)

(817)14-09-2022(01-00)bsd-bns

**ಪ್ರಶ್ನೆ ಸಂಖ್ಯೆ: 226**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ನೀಡಿದ್ದು, ವಿಜಯಪುರ ಜಿಲ್ಲೆಯ ವಿಮಾನ ನಿಲ್ದಾಣ ಕಾಮಗಾರಿ ಯಾವ ಹಂತದಲ್ಲಿದೆ ಎಂಬ ನನ್ನ ಪ್ರಶ್ನೆಗೆ 2 packages ನ ಒಂದನೇ ಹಂತದಲ್ಲಿ runway, taxiway, apron, isolation bay, ಕೂಡು ರಸ್ತೆ ಹಾಗು ಒಳ ರಸ್ತೆಗಳು ಫೆಬ್ರವರಿ 2021 ರಿಂದ ಪ್ರಗತಿಯಲ್ಲಿದ್ದು, ಶೇಕಡ 66 ರಷ್ಟು ಪೂರ್ಣಗೊಂಡಿದೆ ಎಂದು ಹೇಳಿದ್ದಾರೆ. ಪ್ಯಾಕೇಜ್ 2ರಲ್ಲಿ terminal ಕಟ್ಟಡ, A.T.C. ಕಟ್ಟಡ, ವಿದ್ಯುತ್ ಉಪಕೇಂದ್ರ, watch tower, ಇತ್ಯಾದಿ ಏಪ್ರಿಲ್ 2022 ರಿಂದ ಪ್ರಗತಿಯಲ್ಲಿದ್ದು, ಶೇಕಡ 17 ರಷ್ಟು ಪೂರ್ಣಗೊಂಡಿದೆ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಯನ್ನು ನಾನು 3 ಬಾರಿ ಎಲ್ಲಾ ಅಧಿವೇಶನಗಳಲ್ಲಿಯೂ ಪ್ರಶ್ನಿಸಿದ್ದು, ಹಿಂದಿನ ಅಧಿವೇಶನದಲ್ಲಿ ಸುದೀರ್ಘವಾಗಿ ಉತ್ತರಿಸಿ, ಅಲ್ಲಿಗೆ ಬಂದು ಪ್ರಗತಿಯನ್ನು ಅವರು ವೀಕ್ಷಣೆ ಮಾಡಿದ್ದಾರೆ. ಆದರೆ 66% ನಲ್ಲಿ ಕೆಲಸ ಮಾಡಿರುವ ಬಗ್ಗೆ ನಾನು ಅವರಿಗೆ photo ಗಳನ್ನು ತೋರಿಸುತ್ತೇನೆ. ಈಗಿನ ಹಂತದ ಕೆಲಸ ಯಾವ ಹಂತದಲ್ಲಿದೆ? ಇದು 66% ಕೆಲಸ ಆಗಿದೆ ಎಂದು ನನಗೆ ಅನಿಸುತ್ತಿಲ್ಲ. ಇದರಲ್ಲಿ ಕಟ್ಟಡ slab ಹಂತಕ್ಕೂ ಬಂದಿಲ್ಲ ಮತ್ತು ಪೂರ್ಣಗೊಂಡಿಲ್ಲ. ಇದನ್ನು ತಮಗೂ ಕಳುಹಿಸುತ್ತೇನೆ. Runway ನ ಒಂದು helipad ಬಿಟ್ಟು ಬೇರೆ ಕೆಲಸ ಆಗಿಲ್ಲ. ನಿಜವಾಗಿ ಇಷ್ಟು ಕೆಲಸ 66% ರಷ್ಟು ಆಗಿದೆಯೇ ಎಂದು ಹೇಳಿರುವುದನ್ನು ಪರಿಶೀಲನೆ ಮಾಡಬೇಕು.

ಇನ್ನು ಎರಡನೆಯ ಪ್ಯಾಕೇಜ್‌ನಲ್ಲಿ 17% ಆಗಿರುವ ಬಗ್ಗೆ ಹೇಳಿದ್ದು, ಇವೆರಡನ್ನು ಬಿಟ್ಟು ಮೊದಲು, 72 ಸೀಟು ATR ಗೆ runway ಮಾಡಿರುವ ಬಗ್ಗೆ ಹೇಳಿದ್ದಾರೆ. ಅದನ್ನು ವಿಸ್ತರಣೆ ಮಾಡಿ 180 ಸೀಟುಗಳನ್ನು 320 seats ಗೆ ಮಾಡಿದ್ದು, ಇದಕ್ಕೆ ಹಣವನ್ನು ಒದಗಿಸುವುದಾಗಿಯೂ ಹೇಳಿದ್ದಾರೆ. ಮೊದಲನೆಯ ಹಂತದ ಪ್ಯಾಕೇಜ್ ಆಗಿಲ್ಲ, ಅವರು ಡಿಸೆಂಬರ್ 2022ರೊಳಗೆ ಎರಡೂ ಪ್ಯಾಕೇಜ್ ಮುಗಿಸಿ, ವಿಮಾನ ಯಾನ ಪ್ರಾರಂಭಿಸುವುದಕ್ಕೆ ಭರವಸೆ ಕೊಟ್ಟಿದ್ದರು. ಆದರೆ ಈಗ ಜೂನ್ 2023ಕ್ಕೆ ಮುಂದೂಡಿದ್ದಾರೆ. ಬಿಜಾಪುರ ಜಿಲ್ಲೆಯ ಪ್ರವಾಸೋದ್ಯಮಕ್ಕೆ ಅವಕಾಶ ಕೊಟ್ಟು, ಶೀಘ್ರಗತಿಯಲ್ಲಿ ಮಾಡಬೇಕು ಎಂದು ವಿನಂತಿಸುತ್ತೇನೆ. ಶಿವಮೊಗ್ಗ ವಿಮಾನ ನಿಲ್ದಾಣ ಕೆಲಸಗಳೆಲ್ಲವನ್ನೂ ಮಾಡಿ ನಮಗೆ ಮಾತ್ರ ಮಲತಾಯಿ ಧೋರಣೆ ತೋರಿಸಿದರೆ ಹೇಗೆ? ದಯವಿಟ್ಟು ಇದನ್ನು ಮಾಡಿಕೊಡಬೇಕು.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಸ್ನೇಹಿತರಾದ ಮಾನ್ಯ ರಾಥೋಡ್‌ರವರು ಹೇಳಿದಂತೆ ಮೊದಲು ATR ಮಾಡುವುದಿತ್ತು. ನಾನು ಅಲ್ಲಿಗೆ 2 ಬಾರಿ ಭೇಟಿ ಕೊಟ್ಟಿದ್ದೇನೆ, ಅವರೂ ಹೋಗಿ ಬಂದಿದ್ದಾರೆ. ಮೊದಲನೆಯ stage ನಲ್ಲಿ 66% ಕೆಲಸ ಆಗಿರುವ ಬಗ್ಗೆ ಹೇಳಿದ್ದು, ಒಟ್ಟು ರೂ.220 ಕೋಟಿಗಳನ್ನು 727 ಎಕರೆ ಪ್ರದೇಶವನ್ನು ತೆಗೆದುಕೊಂಡು, ಸುಮಾರು ರೂ.63.46 ಕೋಟಿಗಳನ್ನು ಜಮೀನಿನ ಮಾಲೀಕರಿಗೆ ಕೊಟ್ಟು ಕ್ರಿಯಾ ಯೋಜನೆಯನ್ನು ಮಾಡಿದ್ದೇವೆ. ನಾನು ಅಲ್ಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಬಹುತೇಕ ಅಲ್ಲಿನ industrialists, horticulture, floriculture ರವರುಗಳೆಲ್ಲರೂ ಬಂದರು, ನಾನು ಅಲ್ಲಿ ಸುಮಾರು ಗಂಟೆಗಳ ಕಾಲ ಸುತ್ತಾಡಿ, ಜಿಲ್ಲಾಧಿಕಾರಿಗಳು ಮತ್ತು ಅಧಿಕಾರಿಗಳೊಡನೆ ಮಾತನಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಬಿಜಾಪುರದ ಕಾರ್ಯಕ್ರಮದಲ್ಲಿದ್ದಾಗ ಅವರೊಡನೆ ಚರ್ಚೆ ಮಾಡಿ, ATR ಬದಲು Boeing ಮಾಡುವುದರಿಂದ floriculture ಮತ್ತೊಂದಕ್ಕೆ ಅನುಕೂಲವಾಗುವುದಲ್ಲದೇ, 24X7 ರಂತೆ night ಕೂಡ flight landing ಮಾಡುವ ಬಗ್ಗೆ ದೂರದೃಷ್ಟಿ ಚಿಂತನೆಯಿಂದ night landing ಮಾಡಲು ತೀರ್ಮಾನ ಮಾಡಿದ್ದೇವೆ. ಈಗಾಗಲೇ ನಾವು ಕೆಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನನಗೆ ಇರುವ ಮಾಹಿತಿ ಪ್ರಕಾರ ATR runway ಏನಿದೆ, ಆ ಕೆಲಸ ಮುಗಿದಿದೆ, ನಾನು ಮಾನ್ಯ ಸದಸ್ಯರಿಗೆ ವಿನಂತಿಸುವುದೇನೆಂದರೆ, ನಾನು 27 ಮತ್ತು 28ನೇ ತಾರೀಖುಗಳಂದು ಬಿಜಾಪುರಕ್ಕೆ ಭೇಟಿ ನೀಡುವವನಿದ್ದು, ಆ ಸಂದರ್ಭದಲ್ಲಿ ಅವರನ್ನು ಕರೆಯುತ್ತೇನೆ. ಆ ಸ್ಥಳಕ್ಕೆ ಹೋಗಿ ಸತ್ಯ ಸಂಗತಿ ಬಗ್ಗೆ ಚರ್ಚೆ ಮಾಡೋಣ, ಯಾವುದೇ ಕಾರಣದಿಂದ ತಪ್ಪು ಮಾಹಿತಿ ನೀಡಿದ್ದರೆ ನಾನು ಕ್ಷಮಿಸುವವನಲ್ಲ, ಮಾನ್ಯ ಸದಸ್ಯರು ಕ್ಷಮಿಸಬಹುದು. ಮಾಹಿತಿಯನ್ನು ಕೊಡುವಾಗ ನಾಲ್ಕು ಕಣ್ಣುಗಳನ್ನಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಇದು ಸದನವಾಗಿದೆ. ನಾನು ಡಿಸೆಂಬರ್‌ನೊಳಗೆ ಮಾಡುವುದಾಗಿ ಹೇಳಿದ್ದು ನಿಜ. ಇದೇ ರೀತಿ ಶಿವಮೊಗ್ಗದಲ್ಲಿನ ಕೆಲಸವೂ ಒಂದು ಹಂತಕ್ಕೆ ಬಂದಿದೆ. ಈಗಾಗಲೇ ರಾಯಚೂರು ಜಿಲ್ಲೆಯಲ್ಲಿ ಈ ತಿಂಗಳಲ್ಲಿ ಟೆಂಡರ್ ಕರೆದು ಪ್ರಕ್ರಿಯೆ ಪ್ರಾರಂಭ ಮಾಡುವವರಿದ್ದೇವೆ. Boeing ಮಾಡಿರುವುದರಿಂದ ಜೂನ್ 23 ರೊಳಗೆ ಪೂರ್ತಿ ಮಾಡಿ ಲೋಕಾರ್ಪಣೆ ಮಾಡಬೇಕು ಎನ್ನುವುದು ನನ್ನ ವೈಯಕ್ತಿಕ ಚಿಂತನೆಯಾಗಿದೆ. ನಮ್ಮ ಇಲಾಖೆಯಿಂದ ಪ್ರತಿಯೊಂದು ಕೆಲಸವನ್ನು ಮಾಡಿಸುತ್ತಿದ್ದೇವೆ. PWD ಇಲಾಖೆಯಿಂದಲೂ ಮಾಡುತ್ತಿದ್ದು, ಅಲ್ಲಿನ ಶಾಸಕರಾದ ಶ್ರೀ ಬಸವರಾಜ ಪಾಟೀಲ್ ಯತ್ನಾಳ್ ರವರು ಸಾಕಷ್ಟು ಮುತುವರ್ಜಿ ವಹಿಸಿದ್ದಾರೆ. ನಾವು ಹೇಳಿರುವಂತೆ ATR ಆದರೆ ಡಿಸೆಂಬರ್‌ಗೆ ಮಾಡಬೇಕೆಂದು ನನ್ನ ಕಳಕಳಿ ಇತ್ತು. ಜೂನ್ 2023ರೊಳಗೆ ಇದನ್ನು ಲೋಕಾರ್ಪಣೆ ಮಾಡುವ ಕೆಲಸ ಮಾಡುತ್ತೇನೆ. ಹಣಕಾಸಿನ ಮುಗ್ಗಟ್ಟು ಇಲ್ಲ ಮತ್ತು civil aviation ನವರಿಂದ ಯಾವುದೇ ಸಮಸ್ಯೆ ಇಲ್ಲ. ಈಗಾಗಲೇ ಮೊದಲನೆಯ stage ಮುಕ್ತಾಯವಾಗಿ ಎರಡನೆಯ stage ಕೂಡ ಪ್ರಾರಂಭವಾಗಿದೆ. ಅದೇರೀತಿ ರೂ.95 ಕೋಟಿಗಳ ಮೊದಲನೆಯ stage ಕೆಲಸ ಇದ್ದು, ಈಗಾಗಲೇ ಸಾಕಷ್ಟು

ಹಣ ಬಿಡುಗಡೆ ಮಾಡಿದ್ದೇವೆ. 2ನೇ stage ಕೂಡ 17% ಆಗಿರುವ ಬಗ್ಗೆ ಇದ್ದು, ಸ್ಥಳಕ್ಕೆ ಅವರನ್ನು ಕರೆದುಕೊಂಡು ಹೋಗುತ್ತೇನೆ. ಇದರ ಸಾಧಕ-ಬಾಧಕದ ಜೊತೆ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಂಡು ಈ ಯೋಜನೆಯನ್ನು ಸಾರ್ವಜನಿಕವಾಗಿ ಸಮರ್ಪಣೆ ಮಾಡುವ ಕೆಲಸ ಮಾಡುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಮ್ಮ ಉದ್ದೇಶ ಏನೆಂದರೆ, ಈ ಯೋಜನೆಯನ್ನು ತ್ವರಿತಗತಿಯಲ್ಲಿ ಮಾಡಿ, ನಮ್ಮ ಜಿಲ್ಲೆಯ ಕೇವಲ ಶ್ರೀ ಯತ್ನಾಳ್ ರವರು ಮಾತ್ರವಲ್ಲದೇ, ಶ್ರೀ ಸುನೀಲ್‌ಗೌಡ ಪಾಟೀಲ್, ನಾನು, ಮಾನ್ಯ ನಿರಾಣಿ ರವರು, ಶ್ರೀ ಪೂಜಾರ್ ರವರೆಲ್ಲರೂ ಸೇರಿದಂತೆ ಎಲ್ಲರೂ ಆಗಬೇಕೆಂದು ಹೇಳುವವರಿದ್ದೇವೆ. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ. ಅವರು ಕೆಲಸ ಮಾಡುತ್ತಾರೆ, ಆದರೆ ಈ ಕೆಲಸ ಬೇಗ ಮಾಡಿಕೊಡಬೇಕು.

**ಪ್ರಶ್ನೆ ಸಂಖ್ಯೆ: 275**

**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಮಂಜುನಾಥ್ ಬಂಡಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ನೀಡಿದ್ದು, ನಾನು ಅವರ ಗಮನಕ್ಕೆ ತರುವುದೇನೆಂದರೆ, ಅವರು ನೀಡಿರುವ ಉತ್ತರ ಮತ್ತು ಅದಕ್ಕೆ ನೀಡಿರುವ supporting document ಗಳನ್ನು ನೋಡಿದಾಗ ಸಂಪೂರ್ಣವಾಗಿ ಯಾವುದೂ ತುಲನೆ ಆಗುತ್ತಿಲ್ಲ. ಘನತ್ಯಾಜ್ಯದ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 15 ಮಂಜೂರು ಮಾಡುವ ಪ್ರಸ್ತಾವನೆಗಳು ಬಾಕಿ ಇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅವರೇ ಕೊಟ್ಟಿರುವ supporting document ನ ವರದಿಯಲ್ಲಿ 18 ಪ್ರಸ್ತಾವನೆಗಳು ಬಾಕಿ ಇವೆ ಎಂದು ಹೇಳಿದ್ದಾರೆ. ಅದರಲ್ಲಿ ಸುಮಾರು 60 ಜಾಗದ ಪ್ರಕರಣಗಳು ಬಾಕಿ ಇವೆ, ಇನ್ನೂ ಮಂಜೂರು ಮಾಡಬೇಕಾಗಿದೆ, ಕ್ರಮ ವಹಿಸಲಾಗಿದೆ, ಪ್ರಸ್ತಾವನೆ ತಿಳಿಸಲಾಗಿದೆ ಎಂಬ standard word ಗಳನ್ನು ಕೊಟ್ಟಿದ್ದಾರೆ.

ಇನ್ನು ಎರಡನೆಯದಾಗಿ ಸ್ಮಶಾನಕ್ಕೆ ಸಂಬಂಧಪಟ್ಟಂತೆ ಸೊನ್ನೆ ಎಂದು ಉತ್ತರದಲ್ಲಿ ನೀಡಿದ್ದು, ಆದರೆ, supporting document ನಲ್ಲಿ ಬೆಳ್ತಂಗಡಿಯ 8 ಜಾಗಗಳಲ್ಲಿ ಬಾಕಿ ಇದೆ ಎಂದು ಕೊಟ್ಟಿದ್ದಾರೆ. ಇದು 2015 ರಿಂದ ಬಾಕಿ ಇದ್ದರೂ ಸೊನ್ನೆ ಎಂದು ಉತ್ತರದಲ್ಲಿ ಹೇಳಿದ್ದಾರೆ. 3ನೆಯದಾಗಿ ಮನೆ ನಿವೇಶನಗಳ ಬಗ್ಗೆ ಕೆಲವು document ಗಳನ್ನು ಕೊಟ್ಟಿಲ್ಲ. ಸುಮ್ಮನೆ ಕಾಟಾಚಾರಕ್ಕೆ ಉತ್ತರವನ್ನು submit ಮಾಡಿದಂತೆ ಇದೆ. ನಾಲ್ಕನೆಯದಾಗಿ ಕಟ್ಟಡಗಳ ಬಗ್ಗೆ 4 ಎಂದು ಉತ್ತರದಲ್ಲಿ ಹೇಳಿದ್ದು, ಇದು ಬೆಳ್ತಂಗಡಿ ತಾಲ್ಲೂಕಿಗೆ ಮಾತ್ರ supportive ಆಗಿ ನೀಡಿದಂತಿದೆ. ಬೇರೆ ಯಾವುದಕ್ಕೂ supportive ಆಗಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಂಜಸವಾದ ಉತ್ತರವನ್ನು ಕೊಡಲು ತಿಳಿಸಬೇಕು.

**ಶ್ರೀ ಆರ್. ಅಶೋಕ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ದಕ್ಷಿಣ ಕನ್ನಡಕ್ಕೆ ಸಂಬಂಧಪಟ್ಟಂತೆ ಸರ್ಕಾರದಿಂದ ಇದುವರೆಗೂ 2,123 ಎಕರೆ ಜಮೀನನ್ನು ಕೊಟ್ಟಿದ್ದೇವೆ. ಇದರಲ್ಲಿ ಸ್ಮಶಾನಕ್ಕೆ 636 ಪ್ರಕರಣಗಳಿಗೆ, ಮನೆ ನಿವೇಶನಗಳಿಗೆ 302 ಪ್ರಕರಣದಲ್ಲಿ 830 ಎಕರೆ ನೀಡಲಾಗಿದೆ. ಸಾರ್ವಜನಿಕ ಕಟ್ಟಡಕ್ಕೆ 197 ದಕ್ಷಿಣ ಕನ್ನಡ ಜಿಲ್ಲೆಗೆ ಕೊಡಲಾಗಿದೆ. ಉಡುಪಿ ಜಿಲ್ಲೆಗೂ ಕೂಡ 1,180 ಎಕರೆ ನೀಡಲಾಗಿದ್ದು, ಅಲ್ಲಿಯೂ ಘನತ್ಯಾಜ್ಯ, ಮನೆ, ಸಾರ್ವಜನಿಕ ಕಟ್ಟಡದ ಉದ್ದೇಶಗಳಿಗೆ ಕೊಟ್ಟಿದ್ದೇವೆ. ಈಗ pending ಇರುವ ಪ್ರಕರಣಗಳು deemed forest ಗೆ ಸಂಬಂಧಪಟ್ಟಂತೆ ಬರುತ್ತಿದ್ದು, ಇದರ ಬಗ್ಗೆ ಅವರ ಜೊತೆ ಸೇರಿಕೊಂಡು ಅಳತೆ ಮಾಡಿ, boundary fix ಮಾಡುವ ಯೋಜನೆ ಮಾಡಿದ್ದೇನೆ. ಅದೇರೀತಿ ಕಂದಾಯ ಇಲಾಖೆಯಲ್ಲಿ

ಸರ್ವೆ ಮಾಡಿ ಕೊಡಬೇಕಾದ ಪ್ರಕರಣಗಳು ಬಾಕಿ ಇದ್ದು, ಅವುಗಳನ್ನು ಶೀಘ್ರವಾಗಿ ಮಾಡುವ ವ್ಯವಸ್ಥೆ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರು ಕೇಳಿದಂತೆ ಸ್ಮಶಾನದ ವಿಚಾರಕ್ಕೆ ಸಂಬಂಧಪಟ್ಟಂತೆ zero ಬಂದಿರುವುದನ್ನು ಅಧಿಕಾರಿಗಳ ಗಮನಕ್ಕೆ ತರುತ್ತೇನೆ.

(ಮುಂದು)

(೮18) 14.09.2022 1.10 ಹೆಚ್‌ವಿ:ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಅಶೋಕ(ಮುಂದು):-**

ಸನ್ಮಾನ್ಯ ಸಭಾಪತಿಯವರೇ, ಇದೊಂದು ದೊಡ್ಡ ಪ್ರಕ್ರಿಯೆಯಾಗಿದೆ. ಅರ್ಜಿ ಬಂದು, ಅದು ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಸೀಲ್ದಾರ್‌ಗೆ ಬರುವಂತಹ ಹಂತದಲ್ಲಿ ಮಿಸ್ ಆಗಿರಬಹುದು. ಎಲ್ಲೆಲ್ಲಿ ಪೆಂಡಿಂಗ್ ಇದೆ ಎನ್ನುವುದನ್ನು ತರಿಸಿಕೊಳ್ಳುತ್ತೇನೆ. ನಾನು ಕಂದಾಯ ಸಚಿವನಾಗಿ ಅಧಿಕಾರವನ್ನು ವಹಿಸಿಕೊಂಡ ನಂತರ ಸುಮಾರು 5 ಸಾವಿರ ಎಕರೆ ಭೂಮಿಯನ್ನು ಕೊಟ್ಟಿದ್ದೇನೆ. ನನಗೆ ನೆನಪಿರುವಂತೆ ನಾನು ಎಲ್ಲ ಎಂ.ಎಲ್.ಎ., ಎಂ.ಎಲ್.ಸಿ., ಮತ್ತು ಎಂ.ಪಿ., ಗಳಿಗೆ ಪತ್ರವನ್ನು ಬರೆದಿದ್ದೇನೆ. ಒಂದು ವೇಳೆ ಯಾರಿಗಾದರು ಆ ಪತ್ರ ತಲುಪದೇ ಇದ್ದರೆ, ತಪ್ಪಾಗಿದ್ದರೆ; ಆ ತಪ್ಪನ್ನು ಸರಿಪಡಿಸಿಕೊಂಡು ನಾನು ಮತ್ತೊಮ್ಮೆ ಪತ್ರವನ್ನು ಕಳುಹಿಸಿಕೊಡುತ್ತೇನೆ. ಮುಂದೆ 10 ವರ್ಷಗಳಾದ ಮೇಲೆ ಎಲ್ಲಿಯೂ ಸರ್ಕಾರಿ ಜಮೀನು ಸಿಗುವುದಿಲ್ಲ. ಈಗ ಬರುತ್ತಿರುವಂತಹ ಬೇಡಿಕೆಗಳನ್ನು ನೋಡಿದರೆ ಲಭ್ಯವಿರುವ ಸರ್ಕಾರಿ ಜಮೀನು ಯಾವುದಕ್ಕೂ ಸಾಕಾಗುವುದಿಲ್ಲ. ಮೊನ್ನೆ ರಾಜ್ಯದಲ್ಲಿವುಂಟಾಗಿರುವ ನೆರೆ ಹಾವಳಿಯ ವೈಮಾನಿಕ ವೀಕ್ಷಣೆ ನಡೆಸುತ್ತಿದ್ದ ಸಂದರ್ಭದಲ್ಲಿ ನಾನು ಗಮನಿಸಿದಂತೆ ಬೆಟ್ಟದ ಮೇಲೆಲ್ಲ ಕೃಷಿ ಚಟುವಟಿಕೆ ಪ್ರಾರಂಭ ಮಾಡಿದ್ದಾರೆ. ಭೂಮಿಯ ಮೇಲಿರುವ ಪ್ರದೇಶಗಳನ್ನು ಒತ್ತುವರಿ ಮಾಡಿಕೊಂಡು ಮುಗಿಸಿ, ಈಗ ಬೆಟ್ಟದ ಮೇಲೆ ಹೋಗಿದ್ದಾರೆ. ಅಂದರೆ, ಪಶು ಪಕ್ಷಿಗಳಿಗೆ ಜಾಗವೇ ಸಿಗದಂತಾಗಿದೆ. ಸರ್ಕಾರಿ ಜಾಗವನ್ನು ಸಂರಕ್ಷಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ ನಾನು ಎಲ್ಲ ಮಾನ್ಯ ಸದಸ್ಯರುಗಳಿಗೆ ಒಂದು ಪತ್ರವನ್ನು ಬರೆಯುತ್ತೇನೆ. ಸರ್ಕಾರದಲ್ಲಿ ಲಭ್ಯವಿರುವ ಭೂಮಿಯನ್ನು ಮುಂದಿನ 20-30 ವರ್ಷಗಳಿಗೆ ಬೇಕಾಗುವಂತೆ ಆಟದ ಮೈದಾನ, ಅಂಗನವಾಡಿ, ಆಸ್ಪತ್ರೆ ಅಥವಾ ಉಚಿತ ನಿವೇಶನಗಳನ್ನು ಹಂಚಿಕೆ ಮಾಡುವ ಉದ್ದೇಶಗಳಿಗಾಗಿ ಕಾಯ್ದಿರಿಸಿಕೊಳ್ಳಬೇಕಾಗಿದೆ. ಯಾರೋ ಒಬ್ಬರಿಗೆ 5 ಎಕರೆಯನ್ನು ಕೊಡುವುದಕ್ಕೆ ಬದಲಾಗಿ ಅದೇ ಭೂಮಿಯನ್ನು ಉಚಿತ ನಿವೇಶನಗಳನ್ನಾಗಿ ಮಾರ್ಪಡಿಸಿದರೆ 100 ಜನರಿಗೆ ಹಂಚಿಕೆ ಮಾಡಬಹುದಾಗಿದೆ. ಇಂತಹ ಉದ್ದೇಶಗಳಿಗಾಗಿ ಸರ್ಕಾರಿ ಭೂಮಿಯನ್ನು ಉಪಯೋಗಿಸಿಕೊಳ್ಳಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ಹೈಕೋರ್ಟ್ ಮುಂದೆ ಸ್ಮಶಾನಕ್ಕೆ ಸಂಬಂಧಪಟ್ಟಂತೆ ಒಂದು ಪ್ರಕರಣ ಬಂದಿತ್ತು. ಸಾವಿರಾರು ಹಳ್ಳಿಗಳಿಗೆ ನಾವು ಸ್ಮಶಾನಕ್ಕಾಗಿ ಭೂಮಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಮೊನ್ನೆ ದಾವಣಗೆರೆ ಜಿಲ್ಲೆಯಲ್ಲಿ ಗ್ರಾಮ ವ್ಯಾಸ್ತವ್ಯ ಮಾಡಿದಂತಹ ಸಂದರ್ಭದಲ್ಲಿ, ಅಲ್ಲಿನ ಹಳ್ಳಿಗರನ್ನು ಸೇರಿಸಿ ಸ್ಮಶಾನಕ್ಕಾಗಿ ಒಂದು ಎಕರೆ ಭೂಮಿಯನ್ನು ಕೊಡಿ ಎಂದು ಖುದ್ದಾಗಿ ಕೇಳಿದರೂ ಸಹ ಯಾರೂ ಭೂಮಿ ಕೊಡುವುದಕ್ಕೆ ಮುಂದೆ ಬರಲಿಲ್ಲ. ಅಲ್ಲಿ ಒಂದೇ ಒಂದು ಎಕರೆ ಸರ್ಕಾರಿ ಜಮೀನಿಲ್ಲ. ಎಲ್ಲವನ್ನು ಹಂಚಿಕೆ ಮಾಡಿದ್ದಾರೆ. ಎಲ್ಲರೂ ಗದ್ದೆಗಳನ್ನು ಮಾಡಿದ್ದಾರೆ. "ಸ್ಮಶಾನಕ್ಕಾಗಿ ಒಂದು ಎಕರೆ ಭೂಮಿಯನ್ನು ಕೊಟ್ಟರೇ, ಸುತ್ತಲೂ ಇರುವಂತಹ ಜಮೀನು ವ್ಯರ್ಥವಾಗುತ್ತದೆ. ಆ ಕಾರಣದಿಂದಾಗಿ ನಾವು ಸ್ಮಶಾನಕ್ಕೆ ಭೂಮಿಯನ್ನು ಕೊಡುವುದಿಲ್ಲ" ಎನ್ನುವ ಮಾತನ್ನು ಹೇಳಿದ್ದರು. ಸರ್ಕಾರ 30-40 ಲಕ್ಷ ರೂಪಾಯಿಗಳನ್ನು ನೀಡುತ್ತದೆ ಎಂದರೂ ಸಹ ಯಾರೂ ಸ್ಮಶಾನಕ್ಕಾಗಿ ಭೂಮಿಯನ್ನು ಕೊಡುವುದಕ್ಕೆ ಸಿದ್ಧರಿಲ್ಲ.

ಸನ್ಮಾನ್ಯ ಸಭಾಪತಿಯವರೇ, ನಮಗೆ ಲಭ್ಯವಿರುವಂತಹ ಎಲ್ಲ ಗೋಮಾಳವನ್ನು ಕೊಟ್ಟುಬಿಡಿ ಎನ್ನುವಂತಹ ಒತ್ತಡವನ್ನು ನನ್ನ ಮೇಲೆ ತಂದಿದ್ದಾರೆ. ಈ ಬಗ್ಗೆ ಸದನದಲ್ಲಿ ಪ್ರಶ್ನೆಯನ್ನು ಸಹ ಕೇಳಿದ್ದಾರೆ. ಈ ಹಿಂದೆಯೂ ಬಹಳಷ್ಟು ಪ್ರಮಾಣದಲ್ಲಿ ಗೋಮಾಳವನ್ನು ಬೇರೆಬೇರೆ ಉದ್ದೇಶಗಳಿಗಾಗಿ ಕೊಟ್ಟಿದ್ದಾರೆ. ಆ ರೀತಿ ಕೊಡಬಾರದೆಂದು ಸುಪ್ರೀಂ ಕೋರ್ಟಿನ ಆದೇಶವಿದೆ. ಗೋಮಾಳವನ್ನು ಶಾಲೆ-ಕಾಲೇಜು, ಆಸ್ಪತ್ರೆ, ಕೆ.ಇ.ಬಿ., ಬೆಸ್ಕಾಂ ಕಟ್ಟಡಗಳಿಗೆ ಮತ್ತು ಉಚಿತ ನಿವೇಶನಗಳನ್ನು ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಮಾತ್ರ ವಿನಿಯೋಗಿಸಿಕೊಳ್ಳಬೇಕೆಂದು ಇದೆ. ಅದನ್ನು ಬಿಟ್ಟು ಬೇರೆ ಯಾರೋ ಒಬ್ಬರಿಗೆ ವೈಯಕ್ತಿಕ ಉದ್ದೇಶಕ್ಕಾಗಿ ಹಂಚಿಕೆ ಮಾಡಿದರೆ ನಾಳೆ ಏನೂ ಉಳಿಯುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಾರ್ವಜನಿಕ ಉದ್ದೇಶಕ್ಕಾಗಿಯೇ ಭೂಮಿ ನೀಡಬೇಕೆಂದು ಬರೆದಿದ್ದಾರೆಯೇ ವಿನಃ ವೈಯಕ್ತಿಕ ಉದ್ದೇಶಕ್ಕಾಗಿ ಕೇಳಿಲ್ಲ. ನಮ್ಮ ಇಲಾಖೆಗೆ ಸಾರ್ವಜನಿಕ ಉದ್ದೇಶಗಳಿಗಾಗಿ ಭೂಮಿ ಬೇಕೆನ್ನುವ ಬೇಡಿಕೆ ಬಂದರೆ, ಎಲ್ಲಿಯೂ ಕಡತಗಳ ವಿಳಂಬ ವಿಲೇವಾರಿಯಾಗುವುದಕ್ಕೆ ಅವಕಾಶವನ್ನೇ ಕೊಟ್ಟಿಲ್ಲ. ಸಾರ್ವಜನಿಕವಾಗಿರುವ ಅಹವಾಲುಗಳು ಪ್ರತ್ಯೇಕವಾದ ದಾರಿಯಲ್ಲಿ ಬರುತ್ತದೆ. ಅದನ್ನು ನೋಡಿಕೊಳ್ಳಲು ಒಬ್ಬ ತಹಸೀಲ್ದಾರ್ ಅವರನ್ನು ನೇಮಕ ಮಾಡಲಾಗಿದೆ. ಅವರು ತಕ್ಷಣವೇ ಕ್ಲಿಯರ್ ಮಾಡಿಕೊಡುತ್ತಾರೆ.

**ಶ್ರೀ ಮಂಜುನಾಥ್ ಭಂಡಾರಿ:-** ಸನ್ಮಾನ್ಯ ಸಭಾಪತಿಯವರೇ, ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಸ್ಮಶಾನ, ಆಸ್ಪತ್ರೆ ಅಥವಾ ಶಾಲಾ ಕಟ್ಟಡಗಳಗಾಗಿ 10 ಎಕರೆ ಭೂಮಿಯನ್ನು ಮೀಸಲಿಡಬೇಕೆನ್ನುವುದು ನನ್ನ ಮನವಿಯಾಗಿದೆ. ಸ್ಮಶಾನಕ್ಕೆ ಜಾಗವಿಲ್ಲವೆಂದರೆ ಹೇಗೆ? ಆದ್ದರಿಂದ ದಯವಿಟ್ಟು ಸರ್ಕಾರ ಸ್ಮಶಾನದ ಉದ್ದೇಶಕ್ಕಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯಾದರೂ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಉತ್ತಮವಾಗಿರುವ ಸಲಹೆಯನ್ನು ನೀಡಿದ್ದಾರೆ. ನಾನು ಆಡಳಿತ ಪಕ್ಷ ಅಥವಾ ವಿರೋಧ ಪಕ್ಷದವರೆಂದು ತಾರತಮ್ಯ ಮಾಡುವುದಿಲ್ಲ. ಯಾರೇ ಸದಸ್ಯರಾಗಿರಲಿ, ಸರ್ವೆ ನಂಬರ್ ಸಹಿತ ನನಗೊಂದು ಪತ್ರವನ್ನು ಬರೆದರೆ, ನಾನು ಸ್ಪೀಡ್ ಪೋಸ್ಟ್ ರೀತಿಯಲ್ಲಿ ಅದಕ್ಕೆ ಅನುಮೋದನೆಯನ್ನು ನೀಡುತ್ತೇನೆ. ಮುಂದೆ ಸರ್ಕಾರದ ಹೆಸರಿನಲ್ಲಿ ಯಾವ ಭೂಮಿಯೂ ಉಳಿಯುವುದಿಲ್ಲ. ಅದನ್ನು ಉಳಿಸಿಕೊಳ್ಳಬೇಕೆನ್ನುವ ನಿಟ್ಟಿನಲ್ಲಿ ನಾವು ಪ್ರಯತ್ನಿಸೋಣ.

**ಶ್ರೀ ಮಂಜುನಾಥ್ ಭಂಡಾರಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಮಾಹಿತಿಯನ್ನು ಕಳುಹಿಸಿಕೊಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

ಸಭಾಪತಿಯವರು:- ಮಾನ್ಯ ಕಂದಾಯ ಸಚಿವರು ಮಾನ್ಯ ಮುಖ್ಯಮಂತ್ರಿಗಳನ್ನು ತುರ್ತಾಗಿ ಭೇಟಿಯಾಗಬೇಕಾಗಿರುವ ಹಿನ್ನೆಲೆಯಲ್ಲಿ ಅವರ ಖಾತೆಗೆ ಸಂಬಂಧಪಟ್ಟ ಮಾನ್ಯ ಸುನೀಲ್ ಗೌಡ ಪಾಟೀಲ್‌ರವರ ತಡೆಹಿಡಿಯಲಾದ ಪ್ರಶ್ನೆಯನ್ನು ಈಗ ತೆಗೆದುಕೊಳ್ಳಲಾಗುತ್ತಿದೆ.

**ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ: 207+208**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ಗೌಡ ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ವಿಜಯಪುರ ಜಿಲ್ಲೆಯಲ್ಲಿ ಮೇಲಿಂದ ಮೇಲೆ ಇಲ್ಲಿಯವರೆಗೆ ಸುಮಾರು 52 ಬಾರಿ ಭೂಕಂಪನ ಸಂಭವಿಸಿದೆ. ಅಲ್ಲಿನ ಜನರು ಎಷ್ಟು ಆತಂಕದಲ್ಲಿದ್ದಾರೆಂದರೆ, ಭೂಕಂಪಕ್ಕೆ ಹೆದರಿ ಮನೆಯಿಂದ ಹೊರಗೆ ಮಲಗಬೇಕೆಂದರೆ ಮಳೆಯ ಕಾಟ, ಮನೆಯ ಒಳಗೆ ಮಲಗಿದರೆ ಭೂಕಂಪದ ಭಯ. ಜನರಿಗೆ ಇದೊಂದು ಬಿಸಿ ತುಪ್ಪವಾಗಿ ಪರಿಣಮಿಸಿದೆ. 2010ನೇ ಇಸವಿಯಲ್ಲಿ ವಿಜಯಪುರದಲ್ಲಿ ಸುಮಾರು 24 ಬಾರಿ ಭೂಕಂಪ ಸಂಭವಿಸಿದೆ. ಇದಾದ ನಂತರ 2021ನೇ ಇಸವಿಯಲ್ಲಿ 25 ಬಾರಿ ಭೂಕಂಪವಾಗಿದೆ. ಇಲ್ಲಿಯವರೆಗೆ ಒಟ್ಟಾರೆಯಾಗಿ 52 ಬಾರಿ ಭೂಕಂಪವಾದರೂ ಸಹ ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ನಾವು ಮತ್ತು ಮಾಧ್ಯಮದವರು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮಾಹಿತಿಯನ್ನು ಕೇಳಿದರೆ, ಅವರು "ನಮಗೆ ಏನೂ ಗೊತ್ತಿಲ್ಲ" ಎನ್ನುವ ಮಾತನ್ನು ಹೇಳಿದ್ದಾರೆ. ಜಿಲ್ಲಾಡಳಿತ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳನ್ನು ಬಹಳಷ್ಟು ಒತ್ತಾಯ ಮಾಡಿ ಕೇಳಿದರೆ ಅವರು, "ಇದು ತಾಂತ್ರಿಕವಾದ ವಿಚಾರವಾಗಿದೆ. ತಂತ್ರಜ್ಞರೇ ಇದರ ಬಗ್ಗೆ ಹೇಳಬೇಕಾಗಿದೆ. ನಮಗೆ ಇದರ ಬಗ್ಗೆ ಏನೂ ಗೊತ್ತಿಲ್ಲ" ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ಈ ಬಗ್ಗೆ ಅಂತರರಾಷ್ಟ್ರೀಯ ಅಥವಾ ರಾಷ್ಟ್ರ ಮಟ್ಟದಲ್ಲಿ ಒಂದು ಸರ್ವೆಯನ್ನು ಮತ್ತು ಸಂಶೋಧನೆಯನ್ನು ಮಾಡಿಸಿ, ಇದಕ್ಕೊಂದು ಪರಿಹಾರವನ್ನು ಒದಗಿಸಿಕೊಟ್ಟರೆ ಉತ್ತಮ ಎನ್ನುವುದು ನನ್ನ ಭಾವನೆಯಾಗಿದೆ. ಇಡೀ ಜಿಲ್ಲೆಯ ಜನರು ನಾವುಗಳು ಎಲ್ಲಿ ಸಾಯುತ್ತೇವೆಯೋ ಎನ್ನುವ ಭೀತಿಯಲ್ಲಿ ಬದುಕುತ್ತಿದ್ದಾರೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ವಿಜಯಪುರದಲ್ಲಿ ಕಳೆದ ಎರಡು ವರ್ಷಗಳಿಂದ ಹಲವಾರು ಭಾರಿ ಲಘು ಭೂಕಂಪಗಳು ಸಂಭವಿಸುತ್ತಿರುವುದರಿಂದ ಅಲ್ಲಿನ ಜನರು ಆತಂಕಕ್ಕೆ ಒಳಗಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ರಾಷ್ಟ್ರೀಯ ನೈಸರ್ಗಿಕ ವಿಪತ್ತು ಉಸ್ತುವಾರಿ ಕೇಂದ್ರದ ಸಹಯೋಗದಲ್ಲಿ ರಾಷ್ಟ್ರಮಟ್ಟದ ಸಂಸ್ಥೆಗಳಾದಂತಹ ರಾಷ್ಟ್ರೀಯ ಸಂಶೋಧನಾ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ರಾಷ್ಟ್ರೀಯ ಶಿಲಾ ಯಂತ್ರಶಾಸ್ತ್ರ ಸಂಸ್ಥೆಗಳ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಸೂಚನೆಯನ್ನು ನೀಡಲಾಗಿದೆ. ಅವರು ಬಂದು ಪರಿಶೀಲನೆಯನ್ನು ಮಾಡಿದ್ದಾರೆ. ಈಗಾಗಲೇ ವಿಜಯಪುರ ಜಿಲ್ಲೆ ಉಕ್ಕಲಿ ಗ್ರಾಮಪಂಚಾಯಿತಿಯಲ್ಲಿ ತಾತ್ಕಾಲಿಕ ಭೂಕಂಪನ ಮಾಪಕವನ್ನು ಅಳವಡಿಸಲಾಗಿದೆ. ಹಿಂದೆ ಗುಲ್ಬರ್ಗಾ ಜಿಲ್ಲೆಯಲ್ಲಿ ಭೂಕಂಪ ಸಂಭವಿಸಿದಾಗ, ನಾನು ಅಲ್ಲಿಗೆ ಭೇಟಿ ನೀಡಿದ್ದೆ.

ಅಲ್ಲಿಯೂ ಸಹ ಈ ರೀತಿಯ ಸದ್ದುಗಳು ಕೇಳಿ ಬರುವುದು ಜನರು ಮನೆಗಳಿಂದ ಹೊರಗೆ ಓಡಿ ಬರುವಂತಹ ಪ್ರಸಂಗಗಳು ನಡೆದಿವೆ. ಮೊನ್ನೆ ಕೊಡಗು ಜಿಲ್ಲೆಯಲ್ಲಿಯೂ ಸಹ ಅದೇ ರೀತಿ ಆಗಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರಿಗೂ ತಿಳಿದಿರುವಂತೆ ಕಳೆದ 4 ವರ್ಷಗಳಲ್ಲಿ ಬೇಸಿಗೆಯ ಅನುಭವವಾಗದೇ ಇರುವಂತೆ ಮಳೆ ಸುರಿಯುತ್ತಿದೆ. ಇದರಿಂದಾಗಿ ಅಂತರ್ಜಲದ ಮಟ್ಟ ಹೆಚ್ಚಾಗುತ್ತಿದೆ. ಭೂಮಿಯ ತಳಭಾಗದಲ್ಲಿ ಸುಣ್ಣದ ಕಲ್ಲಿನ ಪದರಗಳಿವೆ. ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿ, ಅಂತರ್ಜಲದ ಮಟ್ಟ ಹೆಚ್ಚಾಗಿರುವುದರಿಂದ ಈ ಸುಣ್ಣದ ಕಲ್ಲುಗಳ ಪದರಗಳು ತೇವಾಂಶಗೊಂಡು ಭೂಕಂಪವಾಗುತ್ತಿದೆ. ಕೊಡಗು ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಭೂಕಂಪನ ಸಂಭವಿಸಿದಾಗ, ನಾನು ಖುದ್ದು ಅಲ್ಲಿಗೆ ಭೇಟಿ ನೀಡಿದ್ದೆ. ಆಗ ಹೈದ್ರಾಬಾದ್‌ನಿಂದ ಬಂದಿದ್ದ ಅಧಿಕಾರಿಗಳು ನನ್ನ ಜೊತೆಗೇ ಇದ್ದರು. ಅವರುಗಳು ಸುಮಾರು ನಾಲ್ಕು ದಿನಗಳ ಕಾಲ ಅಲ್ಲಿಯೇ ಇದ್ದು ಪರಿಶೀಲನೆ ನಡೆಸಿದ್ದಾರೆ. ಜನರು ಯಾವುದೇ ರೀತಿಯಲ್ಲಿಯೂ ಆತಂಕಕ್ಕೆ ಒಳಗಾಗುವಂತಹ ಅವಶ್ಯಕತೆಯಿಲ್ಲ. ಮಳೆ ಹೆಚ್ಚಿನ ಪ್ರಮಾಣದಲ್ಲಿ ಬಿದ್ದಿರುವುದರಿಂದ ಈ ರೀತಿಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಈಗಾಗಲೇ ವಿಜಯಪುರದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದು ಭೂಮಾಪನ ಸಲಕರಣೆಯನ್ನು ಅಳವಡಿಸಿದ್ದೇವೆ. ಯಾವುದೇ ಸಮಸ್ಯೆ ಬಂದರೂ ಕೂಡಲೇ ಅರಿವಿಗೆ ಬರುವಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ನಾನು ಕೂಡ ಅಲರ್ಟ್ ಆಗಿರುತ್ತೇನೆ. ಜಿಲ್ಲಾಧಿಕಾರಿಗಳು ಕೂಡಲೇ ಅಲ್ಲಿಗೆ ಮತ್ತೊಮ್ಮೆ ಭೇಟಿ ನೀಡಿ, ಸ್ಥಳ ಪರಿಶೀಲನೆ ಮಾಡಿ, ಅಲ್ಲಿನ ಜನರಿಗೆ ಸಾಂತ್ವಾನ ಹೇಳುವುದರ ಜೊತೆಗೆ ಏನಾದರೂ ಅಪಾಯದ ಮುನ್ಸೂಚನೆಗಳಿದ್ದರೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ಮಾಡುವ ಅವಕಾಶವನ್ನು ನಾನು ಮಾಡಿಕೊಡುತ್ತೇನೆ. ಇದರ ಬಗ್ಗೆ ಗಮನ ಹರಿಸಲಾಗುತ್ತದೆ.

**ಶ್ರೀ ಸುನೀಲ್ ಗೌಡ ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಜಿಲ್ಲಾಡಳಿತದವರಿಗೆ ತಾಂತ್ರಿಕವಾದ ಮಾಹಿತಿಯೇ ಇಲ್ಲ. ಮಾನ್ಯ ಸಚಿವರು ಮಾತನಾಡುತ್ತಾ, "ರಾಷ್ಟ್ರೀಯ ಸಂಶೋಧನಾ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ರಾಷ್ಟ್ರೀಯ ಶಿಲಾ ಯಂತ್ರಶಾಸ್ತ್ರ ಸಂಸ್ಥೆಗಳ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ" ಎಂದು ಹೇಳಿದ್ದಾರೆ. ಆದರೆ, ಇಲ್ಲಿಯವರೆಗೆ ಸುಮಾರು 52 ಬಾರಿ ಭೂಕಂಪನವಾಗಿದೆ. ಈ ಹಿನ್ನೆಲೆಯಲ್ಲಿ ಅವರುಗಳು ಶೀಘ್ರವಾಗಿ ವರದಿಯನ್ನು ಕೊಟ್ಟು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ, ಈಗ ಪರಿಶೀಲನೆ ನಡೆಸುತ್ತಿದ್ದಾರೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದಷ್ಟು ಬೇಗ ಸರ್ಕಾರ ವರದಿಯನ್ನು ಪಡೆದುಕೊಂಡು, ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತಿದ್ದೇನೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ರಿಕ್ಟರ್ ಮಾಪಕದಲ್ಲಿ ಭೂಕಂಪನದ ತೀವ್ರತೆ ಎಷ್ಟು ಪ್ರಮಾಣದಲ್ಲಿದೆ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ. ಉದಾಹರಣೆಗೆ ಹೇಳಬೇಕಾದರೆ, 2, 2.3, 3 ಇಷ್ಟು ತೀವ್ರತೆಯಲ್ಲಿ ಭೂಕಂಪವಾದರೆ ಸಮಸ್ಯೆ ಇರುವುದಿಲ್ಲ. ಇದಕ್ಕಿಂತ ಹೆಚ್ಚಿನ ತೀವ್ರತೆ ಇದ್ದರೆ ಮಾತ್ರ ಸಮಸ್ಯೆಯಾಗುತ್ತದೆ. ನಿರಂತರವಾಗಿ ಇದನ್ನು ಮಾನಿಟರ್ ಮಾಡಲಾಗುತ್ತಿದೆ. ಈಗಾಗಲೇ ಅಲ್ಲಿಗೆ ಮಾಪಕವನ್ನು ಅಳವಡಿಸಲಾಗಿದೆ.

**ಶ್ರೀ ಸುನೀಲ್ ಗೌಡ ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಭೂಕಂಪನದ ತೀವ್ರತೆ ಹೆಚ್ಚಾಗುತ್ತಿದೆ. ತಾವು ಹೇಳಿದಂತೆ ಪರಿಶೀಲನೆ ನಡೆಸುತ್ತಿರುವ ಸಂಸ್ಥೆಯವರು ತಾಂತ್ರಿಕವಾಗಿ ಯಾವುದೇ ಕ್ಲಿಯರ್ ಮಾಹಿತಿಯನ್ನು ನೀಡುತ್ತಿಲ್ಲ.

**ಶ್ರೀ ಆರ್. ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರೀಯ ಮಟ್ಟದ ಸಂಸ್ಥೆಗಳು ಬಂದು ಪರಿಶೀಲನೆ ನಡೆಸುತ್ತಿದ್ದಾರೆ, ಅವರು ಆ ವಿಚಾರದಲ್ಲಿ ತಜ್ಞರಾಗಿದ್ದಾರೆ. ಅವರ ಬಳಿ ಮಾಹಿತಿ ಇದೆ. ಬೇಕಾದಷ್ಟು ಕಡೆಗಳಲ್ಲಿ ಇಂತಹ ಘಟನೆಗಳನ್ನು ನೋಡಿದ ಅನುಭವ ಅವರಿಗಿದೆ. ಅವರು ವೈಜ್ಞಾನಿಕವಾಗಿ ವರದಿಯನ್ನು ಕೊಡುತ್ತಾರೆ. ಆ ವರದಿಯ ಆಧಾರದ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸುನೀಲ್ ಗೌಡ ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ರಾಷ್ಟ್ರ ಮಟ್ಟದ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದ ಸಂಸ್ಥೆಗಳಿಂದ ಅಧ್ಯಯನ ನಡೆಸಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಆರ್.ಅಶೋಕ್:-** ಸನ್ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಉಲ್ಲೇಖ ಮಾಡಿರುವಂತಹ ನಾಲ್ಕು ಸಂಸ್ಥೆಗಳು ರಾಷ್ಟ್ರ ಮಟ್ಟದ ಸಂಸ್ಥೆಗಳಾಗಿವೆ.

**ಶ್ರೀ ಸುನೀಲ್ ಗೌಡ ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಸಹ ಮೀಟಿಂಗ್‌ನಲ್ಲಿ ಇದ್ದೆ. ಈ ಸಂಸ್ಥೆಗಳ ಯಾವ ಅಧಿಕಾರಿಯಾಗಲೀ ಅಥವಾ ಯಾವುದೇ ಟೀಂ ಆಗಲೀ ವಿಜಯಪುರಕ್ಕೆ ಭೇಟಿ ನೀಡಿಲ್ಲ. ಜಿಲ್ಲಾಡಳಿತದಿಂದ ಬೇಕಾದರೆ ಮಾನ್ಯ ಸಚಿವರು ಮಾಹಿತಿಯನ್ನು ತರಿಸಿಕೊಳ್ಳಲಿ. ಅಲ್ಲಿನ ಜಿಲ್ಲಾಧಿಕಾರಿಗಳು ಮತ್ತು ಸ್ಥಳೀಯ ಅಧಿಕಾರಿಗಳು ಅಲ್ಲಿಗೆ ಭೇಟಿ ನೀಡಿದ್ದಾರೆ. ಆದರೆ, ತಂತ್ರಜ್ಞರು ಯಾರೂ ಅಲ್ಲಿಗೆ ಭೇಟಿ ನೀಡಿಲ್ಲ.

**ಶ್ರೀ ಆರ್.ಅಶೋಕ್:–** ಸನ್ಮಾನ್ಯ ಸಭಾಪತಿಯವರೇ, ಅಲ್ಲಿಗೆ ಯಾರು ತಂತ್ರಜ್ಞರು ಭೇಟಿ ನೀಡಿದ್ದರು ಎನ್ನುವ ಮಾಹಿತಿಯನ್ನು ಇನ್ನು ಒಂದು ಗಂಟೆಯೊಳಗಾಗಿ ಮಾನ್ಯ ಸದಸ್ಯರಿಗೆ ತಲುಪಿಸುವಂತೆ ನಮ್ಮ ಅಧಿಕಾರಿಗಳಗೆ ಸೂಚನೆಯನ್ನು ನೀಡುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:298**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಹರೀಶ್ ಕುಮಾರ್:-** ಸನ್ಮಾನ್ಯ ಸಭಾಪತಿಯವರೇ, "ದಕ್ಷಿಣ ಕನ್ನಡ ಜಿಲ್ಲೆಯ ಸೂರತ್ಕಲ್‌ನಲ್ಲಿರುವ ಟೋಲ್‌ಗೇಟ್ ಅಧಿಕೃತವೇ" ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಉತ್ತರ ಸಮಜಂಸವಾಗಿಲ್ಲವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಮಾನ್ಯ ಸಚಿವರು ನೀಡಿರುವಂತಹ ಲಿಖಿತ ರೂಪದ ಉತ್ತರದಲ್ಲಿ " ......ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ." ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಜಾಣ ಉತ್ತರವನ್ನು ನೀಡಿದ್ದಾರೆ.

(ಮುಂದು)

(819) 14.9.2022 1.20 ಪಿಕೆ:ಕೆಎಸ್

**ಶ್ರೀ ಕೆ. ಹರೀಶ್ ಕುಮಾರ್(ಮುಂದು)**

ಸದರಿ ಟೋಲ್‌ಗೇಟ್ ಅನಧಿಕೃತವಾದುದು ಎನ್ನುವ ಹಿನ್ನೆಲೆಯಲ್ಲಿ ಅಲ್ಲಿ 6 ವರ್ಷಗಳಿಂದ ಹೋರಾಟಗಳು ನಡೆಯುತ್ತಿವೆ. 9 ರಿಂದ 10 ಕಿ.ಮೀ. ದೂರದಲ್ಲಿ ಹೆಜಮಾಡಿಯಲ್ಲಿ ಏನು ಇನ್ನೊಂದು ಟೋಲ್ ಆಗುತ್ತಿತ್ತೋ ಆ ಸಂದರ್ಭದಲ್ಲಿ National Highways Authority of India (NHAI) ನವರು, ಇಲ್ಲಿ ಟೋಲ್‌ಗೇಟ್ ಓಪನ್ ಮಾಡಿದ ಮೇಲೆ ಅದನ್ನು ಕ್ಲೋಸ್ ಮಾಡುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದರು. ಈ ದಿಸೆಯಲ್ಲಿ ಇಲ್ಲಿಯವರೆಗೆ ಯಾವುದೇ ಕೆಲಸವಾಗಿಲ್ಲ. ಆದರೆ ಅಲ್ಲಿ ಹೋರಾಟ ಇನ್ನೂ ನಿಂತಿಲ್ಲ; ನಿನ್ನೆ ಕೂಡ ಪ್ರತಿಭಟನೆ ಆಗುತ್ತಿತ್ತು. ಅಲ್ಲಿರುವ ಒಂದು ಸಮಸ್ಯೆ ಏನೆಂದರೆ ಅವರು ಕೊಡುವಂತಹ ಕಿರುಕುಳ. ರಾಜ್ಯದಲ್ಲೇ ಇದನ್ನು ಸ್ಪೆಷಲ್ ಟೋಲ್‌ಗೇಟ್ ಎಂದು ಹೇಳಬಹುದು. ಇಲ್ಲಿ ಕೊಡುವಂತಹ ಕಿರುಕುಳ ಯಾವ ಟೋಲ್‌ಗೇಟ್‌ನಲ್ಲಿ ಇರುವುದಿಲ್ಲ. VIP ಕಾರುಗಳು ಅಥವಾ ವಾಹನಗಳು ಹೋದರೆ ಅದನ್ನು ತಡೆದು ನಿಲ್ಲಿಸುತ್ತಾರೆ. ಅಲ್ಲಿ VIP Lane ಇರುತ್ತದೆ. ಆದರೆ ಅದಕ್ಕೆ ಟೇಪ್ ಕಟ್ಟಿ ಅಡ್ಡ ಇಟ್ಟಿರುತ್ತಾರೆ. ಅಲ್ಲಿ ಕೆಲವು ಹುಡುಗರನ್ನು ನಿಲ್ಲಿಸಿಕೊಂಡು, ಕಾರುಗಳನ್ನು ನಿಲ್ಲಿಸಿ ಅನವಶ್ಯಕವಾಗಿ ಕಿರುಕುಳ ಕೊಡುವಂಥದ್ದು, ಅದನ್ನು ಪರೀಕ್ಷೆ ಮಾಡುವಂಥದ್ದನ್ನು ನಾನೂ ಕೂಡ ಅನುಭವಿಸಿದ್ದೇನೆ. ನಮ್ಮ ಕಾರಿನ ಮೇಲೆ ಸರ್ಕಾರ ಕೊಟ್ಟಿರುವ ಪಾಸ್‌ಗಳಿದ್ದರೂ ಅದನ್ನು ನೋಡುವುದಿಲ್ಲ; allow ಮಾಡುವುದಿಲ್ಲ. ಅದನ್ನು check ಮಾಡಬೇಕು ಎಂದು ಹೇಳುತ್ತಾರೆ; Identity Card ನ್ನು ಕೇಳುತ್ತಾರೆ. ಇಂತಹ ಅನುಭವ ಎಲ್ಲಾ ಸದಸ್ಯರುಗಳಿಗೂ ಆಗಿರುತ್ತದೆ. ಕಡೆಗೆ ಎಸ್.ಪಿ. ಗೆ ಫೋನ್ ಮಾಡಬೇಕಾದ ಪರಿಸ್ಥಿತಿ ಕೂಡ ಬಂತು. ಟೋಲ್‌ಗೇಟ್‌ಗಳಲ್ಲಿ ಮಾನವೀಯತೆಯಿಂದ ವರ್ತಿಸುವ ವ್ಯವಸ್ಥೆ ಆಗಬೇಕು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಯಾವುದೇ ಮೂಲಭೂತ ಸೌಕರ್ಯಗಳು ಅಲ್ಲಿ ಇಲ್ಲ. VIP Lane ಗಳು ಎಲ್ಲಾ ಕಡೆ ಇದೆ ಎಂದು

ಹೇಳಿದ್ದೀರಿ. ಆದರೆ VIP Lane ಎಲ್ಲಾ ಕಡೆ ಇಲ್ಲ. ಒಂದು ವೇಳೆ ಇದ್ದರೂ ಅದನ್ನು ಟೇಪ್ ಹಾಕಿ ಬಂದ್ ಮಾಡಿರುತ್ತಾರೆ. ನಾವು ಅಲ್ಲಿಗೆ ಹೋಗಿ ಕಾದುಕೊಂಡು ನಿಂತ ನಂತರ ಅವರ ಜನ ಬಂದು ತೆಗೆಯುತ್ತಾರೆ. VIP Lane ಎಂದು ಬೋರ್ಡ್ ಮಾತ್ರ ಇರುತ್ತದೆ. VIP Lane ಗಳ ಸಂಬಂಧ ಸರಿಯಾದ ವ್ಯವಸ್ಥೆ ಆಗಬೇಕು. ಸಾರ್ವಜನಿಕರಿಗೆ ಅಥವಾ VIP ಗಳಿಗೆ ಯಾವುದೇ ರೀತಿಯ ಕಿರುಕುಳ ಆಗಬಾರದು. ಅವರು ಮಾನವೀಯತೆಯಿಂದ ವರ್ತಿಸುವ ಹಾಗೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಡಾ: ಕೆ.ಗೋವಿಂದರಾಜ್:-** ತುರ್ತು ವಾಹನಗಳಿಗೂ ಕೂಡ ಇಂತಹ ಪರಿಸ್ಥಿತಿ ಎದುರಾಗುತ್ತದೆ.

**ಶ್ರೀ ಸಿ.ಸಿ.ಪಾಟೀಲ:-** ಮಾನ್ಯ ಸಭಾಪತಿಗಳೆ, ಇದು ಕೇವಲ ಮಾನ್ಯ ಹರೀಶ್‌ಕುಮಾರ್‌ರವರೊಬ್ಬರ ಪ್ರಶ್ನೆಯಲ್ಲ ಎಂದು ಭಾವಿಸುತ್ತೇನೆ. ನಾನೂ ಕೂಡ ಇದರ ಬಗ್ಗೆ ಹಿಂದೆ ಮಾತನಾಡಿದ್ದೇನೆ. ನಾನು ಲೋಕೋಪಯೋಗಿ ಸಚಿವನಾಗಿ, ಮಾನ್ಯ ಹರೀಶ್ ಕುಮಾರ್‌ರವರ ಎಲ್ಲಾ ಅನುಭವ, ಅಭಿಪ್ರಾಯಗಳನ್ನು ಸಾರಾಸಗಟಾಗಿ ತಿರಸ್ಕಾರ ಮಾಡುವಂತಹ ಪರಿಸ್ಥಿತಿಯಲ್ಲಿಲ್ಲ. ಮಾನ್ಯ ಸದಸ್ಯರು ಮಾತನಾಡುತ್ತಾ, ಮಾನ್ಯ ಸಚಿವರು ಜಾಣ ಉತ್ತರವನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದರು. ಅದು ಜಾಣ ಉತ್ತರವಲ್ಲ; ವಸ್ತು ಸ್ಥಿತಿಯ ಉತ್ತರವಾಗಿದೆ. ಮಾನ್ಯ ಸದಸ್ಯರು National Highways Authority of India ಸಂಬಂಧಪಟ್ಟಂತೆ ಕೇಳಿದ್ದಾರೆ. ಅದರ ಮಾಲೀಕತ್ವ NHAI ಅವರ ಹತ್ತಿರ ಇರುತ್ತದೆ; ಭೂಸಾರಿಗೆ ಮಂತ್ರಾಲಯಕ್ಕೆ ಇರುತ್ತದೆ. ಮಾನ್ಯ ನಿತೀನ್ ಗಡ್ಕರಿಯವರು ಸಚಿವರಾಗಿದ್ದಾರೆ. ಲೋಕೋಪಯೋಗಿ ಸಚಿವನಾಗಿ ನೀವು ಕೇಳಿದ ಪ್ರಶ್ನೆಗಳಿಗೆ ಅವರಿಂದ ಉತ್ತರಗಳನ್ನು ತರಿಸಿಕೊಂಡು ನಿಮಗೆ ಒದಗಿಸಿ ಕೊಟ್ಟಿದ್ದೇನೆ. ಕೆಲವು ಕಡೆ manhandling, ದೌರ್ಜನ್ಯ ನಡೆಯುತ್ತಿದೆ ಎಂದು ಹೇಳುವುದು ಸರಿಯಲ್ಲ. ನಾನು ಅವರ ಪರವಾಗಿ ಮಾತನಾಡುತ್ತಿದ್ದೇನೆ ಎಂದು ಯಾರೂ ಭಾವಿಸಬಾರದು. ಹಿಂದೆ ಮಾನ್ಯ ಬಸವರಾಜ ಹೊರಟ್ಟಿಯವರು ಸಭಾಪತಿಗಳಾಗಿದ್ದಾಗ ಅವರ ಅಧ್ಯಕ್ಷತೆಯಲ್ಲಿ ಅನೇಕ ಸಭೆಗಳನ್ನು ನಾವು ಮಾಡಿದ್ದೇವೆ. ಕೆಲವೊಂದು ಟೋಲ್ ಪ್ಲಾಜಾದಲ್ಲಿ harassment ಎಂದು ಪದ ಬಳಸುವ ಬದಲು VIP ಗಳಿಗೆ inconvenience ಇದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಇದನ್ನು ತಡೆಗಟ್ಟುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನೀವು ಕೇಳಿದಂತಹ ಟೋಲ್ ಪ್ಲಾಜಾ ಅದು ಅಧಿಕೃತ ಟೋಲ್ ಪ್ಲಾಜಾ ಆಗಿದೆ. ಮತ್ತೆ, short distance ನಲ್ಲಿ ಇರುವ ಟೋಲ್ ಪ್ಲಾಜಾ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರು. ಮಾನ್ಯ ಸಭಾಪತಿಗಳೆ, 60 ಕಿ.ಮೀ ವ್ಯಾಪ್ತಿಯ ಒಳಗೆ 2 ಟೋಲ್ ಪ್ಲಾಜಾಗಳಿದ್ದರೆ ಒಂದನ್ನು ತೆಗೆಯಬೇಕು, amalgamation ಮಾಡಬೇಕು ಎನ್ನುವುದನ್ನು ನಾವು ಈಗಾಗಲೇ ಕೇಂದ್ರ ಭೂ ಸಾರಿಗೆ ಮಂತ್ರಾಲಯಕ್ಕೆ ಮನವಿ ಮಾಡಿಕೊಂಡಿದ್ದೇವೆ. In principle they

have agreed for this. 60 ಕಿ.ಮೀ. ಒಳಗೆ ಇನ್ನೊಂದು ಟೋಲ್ ಪ್ಲಾಜಾ ಇರಬೇಕು ಎಂದರೆ, ಅದನ್ನು ಏಕೆ ಮಾಡಲಾಗುತ್ತಿದೆ ಎಂಬುದಕ್ಕೆ, they have to give specific reasons. Elevated roads ಬರಬಹುದು, flyovers ಬರುತ್ತಿರಬಹುದು ಅಥವಾ ಇನ್ನೊಂದು ಕಾರಣದಿಂದ specific constructions ಇದ್ದರೆ, 60 ಕಿ.ಮೀ ಒಳಗೆ ಟೋಲ್‌ಗೇಟ್ ಹಾಕುವುದಕ್ಕೆ ಆ ಒಂದು ಕಾಮಗಾರಿಗೆ ಸೀಮಿತವಾಗಿ ಕಾನೂನಿನೊಳಗೆ ಅವಕಾಶ ಇದೆ. ಇದನ್ನು ಹೊರತುಪಡಿಸಿದರೆ 60 ಕಿ.ಮೀ. ಒಳಗೆ 2 ಟೋಲ್ ಪ್ಲಾಜಾಗಳಿದ್ದರೆ ಒಂದನ್ನು ತೆಗೆಯಲಿಕ್ಕೆ ನಾವು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಮನವಿ ಮಾಡಿದ್ದೇವೆ, in principle they have agreed for this. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಸಾಧ್ಯವಾದಷ್ಟು, VIP ವಾಹನಗಳಿರಬಹುದು, ತುರ್ತು ಚಿಕಿತ್ಸಾ ವಾಹನಗಳಿರಬಹುದು ಅಥವಾ ನಮ್ಮ ಪೊಲೀಸ್ ವಾಹನಗಳಿರಬಹುದು ಇವು ಸುಗಮವಾಗಿ ಓಡಾಡುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಮಾನ್ಯ ಸಭಾಪತಿಗಳೆ, ಇಲ್ಲಿ ಇನ್ನೊಂದು ಸಮಸ್ಯೆ ಇದೆ. VIP Lane ಗೇಟನ್ನು ಪೂರ್ತಿಯಾಗಿ ಖುಲ್ಲಾ ಬಿಟ್ಟರೆ ಅಲ್ಲಿ ಬೇರೆ ವಾಹನಗಳು ನುಗ್ಗಿಬಿಡುತ್ತವೆ. ಅಂತಹ ಪರಿಸ್ಥಿತಿಯಲ್ಲಿ VIP ವಾಹನಗಳು ಹಿಂದುಳಿಯುವ ಸಾಧ್ಯತೆ ಇರುತ್ತದೆ. ಅದಕ್ಕಾಗಿ ಟೋಲ್‌ನವರು ಟೇಪ್ ಕಟ್ಟಿರುತ್ತಾರೆ ಅಥವಾ barricade ಇಟ್ಟಿರುತ್ತಾರೆ. ಇದು ನನ್ನ ಅನುಭವದಲ್ಲೂ ಇದೆ.

**ಶ್ರೀ ಟಿ.ಎ.ಶರವಣ:-** VIP Lane ಗೇಟನ್ನು ಪೂರ್ತಿಯಾಗಿ ತೆರೆದಿಡಬೇಕು ಎಂದು ಹೇಳುತ್ತಿಲ್ಲ. VIP Lane ನ ಗೇಟನ್ನು ತೆಗೆಯುವುದಕ್ಕೆಯೇ ಒಬ್ಬ ವ್ಯಕ್ತಿ ಇರುತ್ತಾನೆ. ಆತನ ವರ್ತನೆ ಚೆನ್ನಾಗಿರಬೇಕು ಅಷ್ಟೆ. ಈ ಅಂಶವನ್ನು ಮಾನ್ಯ ಸದಸ್ಯರು ಉಲ್ಲೇಖ ಮಾಡಬಯಸುತ್ತಿದ್ದಾರೆ.

**ಶ್ರೀ ಸಿ.ಸಿ.ಪಾಟೀಲ:-** ಮಾನ್ಯ ಸಭಾಪತಿಯವರೇ, ನಾನು ಪ್ರಾರಂಭದಲ್ಲಿಯೇ, ಮಾನ್ಯ ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಸಾರಾಸಗಟಾಗಿ ತಿರಸ್ಕರಿಸುವುದಿಲ್ಲ ಎಂಬ ಮಾತನ್ನು ಹೇಳಿದ್ದೇನೆ. ಈ ವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ಯಾರೋ ಒಬ್ಬ ದೆಹಲಿಯವನೋ, ಹೈದರಾಬಾದ್‌ನವರೋ ಅಥವಾ ಬಾಂಬೆಯವನೋ ಗುತ್ತಿಗೆ ತೆಗೆದುಕೊಂಡು, ಆತ ತನ್ನ ಭಾಗದ ಜನರನ್ನು ತಂದು ಆ ಪಾಯಿಂಟ್‌ಗಳಲ್ಲಿ ಕೂಡಿಸಿರುತ್ತಾನೆ. ನಾವು ಕನ್ನಡ ಮಾತನಾಡುತ್ತೇವೆ; ಅವನು ಹಿಂದಿ ಮಾತನಾಡುತ್ತಾನೆ. ವಿಐಪಿ ವಾಹನಗಳಿರಬಹುದು ಅಥವಾ ತುರ್ತು ಚಿಕಿತ್ಸಾ ವಾಹನಗಳಿರಬಹುದು ಅವು ಸುಗಮವಾಗಿ ಪಾಸ್ ಆಗುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ. ಕಟ್ಟುನಿಟ್ಟಿನ ಪತ್ರವನ್ನು ಕೂಡ ನಾನು ಬರೆದಿದ್ದೇನೆ. ಇನ್ನಷ್ಟು ಅದರ ಬಗ್ಗೆ ಕಾಳಜಿ ವಹಿಸಿ ಕ್ರಮ ವಹಿಸುತ್ತೇವೆ.

**ಶ್ರೀ ಕೆ.ಹರೀಶ್ ಕುಮಾರ್:–** ಮಾನ್ಯ ಸಭಾಪತಿಗಳೆ, ಕೇಂದ್ರ ಸಚಿವರು, 60 ಕಿ.ಮೀ. ಒಳಗಿರುವಂತಹ ಟೋಲ್‌ಗಳನ್ನು 3 ತಿಂಗಳ ಒಳಗೆ ಬಂದ್ ಮಾಡುತ್ತೇವೆ ಎಂದು ಹೇಳಿದ್ದರು. ಈಗಾಗಲೇ 6 ತಿಂಗಳು ಕಳೆದು ಹೋಗಿವೆ. ಕರ್ನಾಟಕದಲ್ಲಿ 60 ಕಿ.ಮೀ ಒಳಗೆ 18 ಟೋಲ್‌ಗಳಿವೆ. ಈ ಕ್ರಮ 6 ತಿಂಗಳಾದರೂ ಅನುಷ್ಠಾನಕ್ಕೆ ಬಂದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಸಿ.ಸಿ.ಪಾಟೀಲ:–** ಮಾನ್ಯ ಸಭಾಪತಿಗಳೆ, ನಮ್ಮ ಮನವಿಗೆ, in principle the officials of NHAI have agreed. We will speed it up.

**ಶ್ರೀ ಟಿ.ಎ.ಶರವಣ:–** ಎಷ್ಟು ದಿವಸದ ಒಳಗೆ ಈ ಕೆಲಸವಾಗುತ್ತದೆ ಎಂದು ಸದನಕ್ಕೆ ತಿಳಿಸಿಬಿಡಿ.

**Sri C.C.PATIL:–** NHAI has to take decision in this regard. I will urge the officials of NHAI to implement it immediately.

**ಪ್ರಶ್ನೆ ಸಂಖ್ಯೆ: 270**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಗೋವಿಂದ ರಾಜು(ವಿಧಾನ ಸಭೆಯಿಂದ ಚುನಾಯಿತರಾದವರು) (ಶ್ರೀ ಎಂ.ಎಲ್.ಅನಿಲ್ ಕುಮಾರ್ ಅವರ ಪರವಾಗಿ):-** ಮಾನ್ಯ ಸಭಾಪತಿಗಳೆ, ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಪರಿಗಣಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಕೋಳಿ ಸಾಕಾಣಿಕೆಯನ್ನು ರಾಜ್ಯಾದ್ಯಂತ ರೈತರು ಉಪಕಸುಬನ್ನಾಗಿ ಹಾಗೂ ಕೆಲವು ರೈತರು ಗರಿಷ್ಠ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ ಸರ್ಕಾರ, ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದೆ. ಲಿಖಿತ ಉತ್ತರದಲ್ಲಿ "ನ್ಯಾಯಾಲಯದ ಆದೇಶ ಸಂಖ್ಯೆ: ಐಎಲ್‌ಆರ್2000ಕೆಎಆರ್ 4718, 2000 (6) ಕೆಎಆರ್‌ಎಲ್‌ಜೆ 435 12/01/2000 ರಂತೆ ಕರ್ನಾಟಕ ಉಚ್ಚ ನ್ಯಾಯಾಲಯ ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಪರಿಗಣಿಸಿ, ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ನಿಯಮ 2 ರನ್ವಯ ತೀರ್ಪು ನೀಡಿದೆ" ಎಂದು ತಿಳಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಕೋಳಿ ಸಾಕಾಣಿಕೆ ರೈತರೇ ಮಾಡುವಂತಹ ಒಂದು ಉಪಕಸುಬಾಗಿದೆ. ಹಳ್ಳಿ ಭಾಗಗಳಲ್ಲಿ ಕೃಷಿ ಎಂತಲೇ ಕೋಳಿ ಸಾಕಾಣಿಕೆ ಮಾಡುತ್ತಾರೆ. ಆದೇಶ ಇದ್ದರೂ ಉಡುಪಿ ಮತ್ತು ಮಂಗಳೂರು ಭಾಗದಲ್ಲಿ, ಕೋಳಿ ಸಾಕಾಣಿಕೆ ಮಾಡಬೇಕಾದರೆ ಭೂಪರಿವರ್ತನೆ ಮಾಡಬೇಕು ಎಂದು ಏಕೆ ಒತ್ತಾಯ ಮಾಡುತ್ತಿದ್ದಾರೆ? ಹಿಂದಿನ ವರ್ಷದ ಬಜೆಟ್ ಅಧಿವೇಶನದಲ್ಲೂ ಸಹ ಇದನ್ನು ಪ್ರಸ್ತಾಪ ಮಾಡಿದೆ; ಈ ಸಾಲಿನ ಬಜೆಟ್ ಅಧಿವೇಶನದಲ್ಲೂ ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ನಿರ್ದಿಷ್ಟವಾಗಿ ಉಡುಪಿ ಮತ್ತು ಮಂಗಳೂರು ಭಾಗಕ್ಕೆ ಸಂಬಂಧಪಟ್ಟಂತೆ ಇರುವಂತಹ ಆದೇಶವನ್ನು ಕಳುಹಿಸುವ ಕೆಲಸ ಮಾಡಿ. ದೊಡ್ಡ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಮಾಡಬೇಕಾದರೆ 8-10 ಎಕರೆಯಲ್ಲಿ ಮಾಡಬೇಕಾಗುತ್ತದೆ. ಇದನ್ನು ಭೂಪರಿವರ್ತನೆ ಮಾಡಿ ಮಾಡಿದರೆ ಅದು ವಾಣಿಜ್ಯ ಚಟುವಟಿಕೆ ಆಗುತ್ತದೆ. ಆದರೆ, ಕೋಳಿ ಸಾಕಾಣಿಕೆ ಕೃಷಿ ಎನ್ನುವುದನ್ನು ಸರ್ಕಾರ ಕೂಡ ಒಪ್ಪಿಕೊಂಡಿದೆ. ಅದಕ್ಕೆ ಪೂರಕವಾಗಿ ತಮಿಳುನಾಡು ಸರ್ಕಾರ ಮಾಡಿರುವ ಆದೇಶದ ಪ್ರತಿಯನ್ನು ಒದಗಿಸಿ ಕೊಡುತ್ತೇನೆ. ಇದಲ್ಲದೇ, 2021ರಲ್ಲಿ ಆರ್‌ಡಿಪಿಆರ್ (Rural Development and Panchayat Raj) ಇಲಾಖೆಯಿಂದ ಒಂದು ಆದೇಶ ಮಾಡಿದ್ದಾರೆ. ಹಳ್ಳಿ ಭಾಗದಲ್ಲಿ ಕೋಳಿ ಸಾಕಾಣಿಕೆ ಮಾಡುವಂತಹ ಮನೆಗಳವರೂ ಕೂಡ ಆಸ್ತಿ ತೆರಿಗೆ ಕಟ್ಟಬೇಕೆಂದು ಆದೇಶ ಮಾಡಿದ್ದಾರೆ. ಆದರೆ ಪಶು ಸಂಗೋಪನೆ ಇಲಾಖೆಯವರು, ಕೋಳಿ ಸಾಕಾಣಿಕೆ ಎನ್ನುವುದು ಕೃಷಿ ಎಂದು ಹೇಳುತ್ತಾರೆ. ಹೀಗಿರುವಾಗ ಆಸ್ತಿ ತೆರಿಗೆಯನ್ನು ಹಾಕುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಹತ್ತಾರು ಎಕರೆಗಳಲ್ಲಿ ಮಾಡುವಂತಹ ಕೃಷಿ ಚಟುವಟಿಕೆಗೆ ಆಸ್ತಿ ತೆರಿಗೆ ಕಟ್ಟುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕು.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಗಳೆ, ಕೋಳಿ ಸಾಕಾಣಿಕೆ ಹೆಚ್ಚಾಗಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ.

(ಮುಂದು)

**(820) 14-09-2022 1.30 ಡಿಎಸ್-ಕೆಎಸ್**

**ಶ್ರೀ ಪ್ರಭು ಬಿ.ಚವ್ಹಾಣ್(ಮುಂದು):-**

ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ನಿಯಮ 2 ರನ್ವಯ ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಪರಿಗಣಿಸಬೇಕೆನ್ನುವ ಪ್ರಸ್ತಾವನೆ ಇದೆ. ಮಾನ್ಯ ಗೋವಿಂದ ರಾಜು ರವರು ಸಲಹೆಯನ್ನು ಕೊಡುತ್ತಿದ್ದಾರೆ. ಶೀಘ್ರದಲ್ಲೇ ಅಧಿಕಾರಿಗಳ ಸಭೆ ಕರೆಯಬೇಕೆಂದು ಅವರು ಒತ್ತಾಯ ಮಾಡುತ್ತಿದ್ದಾರೆ. ಈ ಅಧಿವೇಶನ ಮುಗಿದ ತಕ್ಷಣ ಮಾನ್ಯ ಗೋವಿಂದರಾಜುರವರನ್ನು ಮತ್ತು ಮಾನ್ಯ ಎಂ.ಎಲ್.ಅನಿಲ್ ಕುಮಾರ್‌ರವರನ್ನು ಸಭೆಗೆ ಕರೆಯಿಸಿ ನಮ್ಮ ಕಡೆಯಿಂದ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆರ್‌ಡಿಪಿಆರ್ (Rural Development and Panchayat Raj) ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದರು.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಆರ್‌ಡಿಪಿಆರ್ ರವರು ಹೊರಡಿಸಿರುವ ಆದೇಶವನ್ನು ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಕಂದಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಹೊರಡಿಸಿರುವ ಆದೇಶಗಳನ್ನು ನಾನು ಪರಿಶೀಲನೆ ಮಾಡಿ ಚರ್ಚೆ ಮಾಡಿದ ನಂತರ ನಾನು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಕೋಳಿ ಸಾಕಾಣಿಕೆಯನ್ನು ಕೃಷಿ ಎಂದು ಆದೇಶ ಮಾಡಿರುವುದು, ಕಂದಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಅವಶ್ಯವಿರುವ ತಿದ್ದುಪಡಿ/ಆದೇಶಗಳನ್ನು ಹೊರಡಿಸಲು ಕೋರಿ ಪ್ರಸ್ತಾವನೆಗಳು ಸದರಿ ಎರಡು ಇಲಾಖೆಗಳಲ್ಲಿ ಬಾಕಿ ಇರುತ್ತವೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಇದು ಎಷ್ಟು ದಿವಸದಿಂದ ಬಾಕಿ ಇದೆ? 2000 ಇಸವಿಯಲ್ಲಿ ಕೃಷಿ ಎಂದು ಆದೇಶ ಮಾಡಿರುವುದು, ಈಗ 2022ನೇ ಇಸವಿಯಲ್ಲಿದ್ದೇವೆ. ಈಗ 23

ವರ್ಷವಾಗಿದೆ. ಪ್ರಸ್ತಾವನೆ ಬಾಕಿ ಇದೆಯೇ, ಹಾಗಾದರೆ ಯಾವಾಗ ಈ ಪ್ರಸ್ತಾವನೆಯನ್ನು ಪೂರ್ತಿ ಮಾಡಿ ಆದೇಶ ಮಾಡುತ್ತಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ಗಂಭೀರವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಕೃಷಿ ಎಂದು ಪರಿಗಣಿಸಿದ ಮೇಲೆ ಭೂ ಪರಿವರ್ತನೆಗೆ ಕೇಳಬೇಡಿ ಎಂದು ಹೇಳುವುದು ಸರಿಯಿದೆ. ಕೃಷಿ ಎಂದು ಹೇಳಿದ ಮೇಲೆ ಆಸ್ತಿ ತೆರಿಗೆ ಹಾಕುವುದು ಸರಿಯಲ್ಲ. ಸಂಬಂಧಪಟ್ಟ ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿಗಳನ್ನು ಕರೆದು ಈ ವಾರದಲ್ಲಿ ಒಂದು ಸಭೆಯನ್ನು ಮಾಡಿ ಪರಿಹಾರವನ್ನು ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಮಂತ್ರಿಗಳೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು, ಸಾಧ್ಯವಾದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಂತ್ರಿಗಳು ಮತ್ತು ತಾವು ಸೇರಿ ಈ ತರಹ ಕೋಳಿ ಸಾಕಾಣಿಕೆಯನ್ನು ಮಾಡುವಂತಹ ಕೃಷಿ ಆಧಾರಿತ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಅವರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಒಂದು ಸಭೆಯನ್ನು ಮಾಡಿ ಬಗೆಹರಿಸಿ.

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಸಭೆಯನ್ನು ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ:269**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವಂತಹ ಉತ್ತರ ನನಗೆ ಸಮಾಧಾನವಿಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿರುವಂತಹ ರೀತಿ ನೋಡಿದರೆ 2019-20 ರಲ್ಲಿ 77412 ಮನೆಗಳನ್ನು ಪೂರ್ಣಗೊಳಿಸಲಾಗಿದೆ. 2019-20 ರಿಂದ 2022-23 ರವರೆಗೆ ಒಟ್ಟು 3,92,730 ಮನೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಹೇಳಿದ್ದಾರೆ. 2021-22ನೇ ಸಾಲಿನಲ್ಲಿ 5 ಲಕ್ಷ ಹೊಸ ಮನೆಗಳ ಗುರಿ ಮಂಜೂರು ಮಾಡಲಾಗಿದ್ದು, ಈವರೆಗೆ 3,40,728 ಮನೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಉತ್ತರದ ಅದೇ ಕಾಲಂ ನಲ್ಲಿ 2021-22 ರಲ್ಲಿ 1,33,328 ಮನೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಹೇಳಿರುವುದು contradiction ಆಗಿದೆ. ಅವರು ಇತ್ತೀಚಿನ ದಿನಗಳಲ್ಲಿ ಕನ್ನಡ ಪ್ರಭ ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಆಗಸ್ಟ್ 30ನೇ ತಾರೀಖಿನ ಪತ್ರಿಕೆಯಲ್ಲಿ ಏನು ಹೇಳುತ್ತಾರೆಂದರೆ, ಹಿಂದಿನ ಸರ್ಕಾರದಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟಬೇಕೆನ್ನುವ ಆಲೋಚನೆ ಏನು ಇತ್ತೋ, ಆ ಮನೆಗಳ ವಿಚಾರ ಬಂದಾಗ ಸೆಪ್ಟೆಂಬರ್ ತಿಂಗಳನಲ್ಲಿ 20,000 ಮನೆಗಳನ್ನು ಪೂರ್ತಿ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತಾರೆ. ಮತ್ತು 493 ಎಕರೆ ಜಮೀನಿನಲ್ಲಿ 48,000 ಮನೆಗಳನ್ನು ಕಟ್ಟುವುದಕ್ಕೆ, it is under construction ಎಂದು ಹೇಳಿರುವ ಮಾತನ್ನು ನಾನು ಗಮನಿಸಿದ್ದೇನೆ. ಅದರ ವಿಚಾರವಾಗಿ ಸೆಪ್ಟೆಂಬರ್ ತಿಂಗಳಿನಲ್ಲಿ 2,000 ಮನೆಗಳನ್ನು ಪೂರ್ಣಗೊಳಿಸುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತಾರೆ. ಮತ್ತೊಂದು ಕಡೆ ಮೂರು ಲಕ್ಷಕ್ಕಿಂತ ಹೆಚ್ಚು ಮನೆಗಳನ್ನು ಕಟ್ಟಿ ಹಂಚಿದ್ದೇವೆ ಎನ್ನುವಂತಹ ಮಾತನ್ನು ಹೇಳುತ್ತಾರೆ. ಇದು ಎಲ್ಲೋ ಒಂದು ಕಡೆ ಲೆಕ್ಕ ಸರಿಯಾಗುತ್ತಿಲ್ಲ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಕಾಂಗ್ರೆಸ್ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 2016 ರಿಂದ ಇಲ್ಲಿಯವರೆಗೆ ನಾಲ್ಕು ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ನಾಲ್ಕು ವಸತಿ ಸಚಿವರುಗಳನ್ನು ನೋಡಿದ್ದೇವೆ. ಈಗಲೂ ಕೂಡ ಒಂದು ಲಕ್ಷ ಮನೆಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ಎಷ್ಟು ಬಂದಿದೆ ಎಂದರೆ, 1500 ಕೋಟಿ ರೂಪಾಯಿಗಳ ಅನುದಾನವನ್ನು ಕೇಳಿದ್ದರು. ಅದರಲ್ಲಿ 600 ಕೋಟಿ ರೂಪಾಯಿಗಳು ಬಂದಿದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಇವೆಲ್ಲವನ್ನು ನೋಡಿದಾಗ, ಒಂದು ಲಕ್ಷ ಮನೆಗಳಿಗೆ ಟೆಂಡರ್‌ನ್ನು ಕರೆದಿದ್ದಾರೆಯೇ ಎನ್ನುವ ವಿಚಾರವನ್ನು ಕೇಳಬಯಸುತ್ತೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ನಾನು ಹೇಳಬಯಸುತ್ತಿದ್ದೇನೆ. ನಿಮ್ಮಲ್ಲಿನ contradiction ಬಗ್ಗೆಯೂ ಸ್ಪಷ್ಟೀಕರಣ ಕೊಡಬೇಕೆಂದು ಕೇಳಬಯಸುತ್ತಿದ್ದೇನೆ. ವಿಶೇಷವಾಗಿ ಈ ಪ್ರಶ್ನೆಯನ್ನು ನಾನು ಏಕೆ ಕೇಳಿದ್ದೇನೆಂದರೆ, ಮಾನ್ಯ ಸಚಿವರು ಹಿರಿಯರಾಗಿದ್ದಾರೆ. ಬೆಂಗಳೂರು ನಗರದಿಂದ ಹಿಡಿದು ಇಡೀ ಕರ್ನಾಟಕ

ರಾಜ್ಯವನ್ನು ಗುಡಿಸಲು ಮುಕ್ತವನ್ನಾಗಿಸಬೇಕೆಂದು ಯೋಚನೆ ಮಾಡಿದ್ದೇವೆಯೋ ಅದರ ಕಡೆಗೆ ಯಾವ ಹೆಜ್ಜೆಯನ್ನಿಟ್ಟಿದ್ದಾರೆ ಎನ್ನುವ ಪ್ರಶ್ನೆಗೆ ವಿವರವಾಗಿ ಉತ್ತರ ಕೊಡಬೇಕೆಂದು ಮನವಿ ಮಾಡುತ್ತಿದ್ದೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ನಾಗರಾಜು ರವರು ಏನು ಪ್ರಶ್ನೆ ಕೇಳಿದ್ದಾರೆಂದು ಅವರು ಅರ್ಥ ಮಾಡಿಕೊಳ್ಳಬೇಕು. 'ರಾಜ್ಯ ಸರ್ಕಾರ ಕಳೆದ ಮೂರು ವರ್ಷಗಳ ಆಡಳಿತಾವಧಿಯಲ್ಲಿ ರಾಜ್ಯವನ್ನು ಗುಡಿಸಲು ಮುಕ್ತವನ್ನಾಗಿಸಲು ಯಾವ-ಯಾವ ಕ್ರಮಗಳನ್ನು ಕೈಗೊಂಡಿದೆ, ಜಿಲ್ಲಾವಾರು ಮಾಹಿತಿ ಕೊಡಿ' ಎಂದು ಹೇಳಿದ್ದಾರೆ. ಜಿಲ್ಲಾವಾರು ಮಾಹಿತಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಬೆಂಗಳೂರು ನಗರದ ಬಗ್ಗೆ ನನಗೆ ಪ್ರಶ್ನೆಯನ್ನು ಕೇಳಿಲ್ಲ. ರಾಜ್ಯದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದರ ಬಗ್ಗೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಕನ್ನಡ ಪ್ರಭ ಪತ್ರಿಕೆಯ ಹೇಳಿಕೆಯನ್ನು ಉಲ್ಲೇಖ ಮಾಡಿದ್ದಾರೆ. ಅದರ ಬಗ್ಗೆಯೂ ನಾನು ಹೇಳುವುದಕ್ಕೆ ತಯಾರಿದ್ದೇನೆ. 'ವಸತಿ ಇಲಾಖೆಯು ಕಳೆದ ಮೂರು ವರ್ಷಗಳಿಂದ ಎಷ್ಟು ಮನೆಗಳನ್ನು ನಿರ್ಮಿಸಿದೆ; ಎಷ್ಟು ಮನೆಗಳನ್ನು ಹಂಚಿಕೆ ಮಾಡಿದೆ; ಸಂಪೂರ್ಣ ಮಾಹಿತಿ ಹಾಗೂ ಫಲಾನುಭವಿಗಳ ಪಟ್ಟಿ ಒದಗಿಸುವುದು' ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಮಾಹಿತಿಯನ್ನು ನಾವು ಒದಗಿಸಿದ್ದೇವೆ. ಒಟ್ಟು ಇಲ್ಲಿಯವರೆಗೆ 392730 ಮನೆಗಳಿಗೆ ಸುಮಾರು 7592.99 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಮಾನ್ಯ ಸದಸ್ಯರೇನು ಪ್ರಶ್ನೆಗಳನ್ನು ಕೇಳಿದ್ದಾರೆಯೋ ಅದಕ್ಕೆ ಪ್ರತಿಯೊಂದಕ್ಕೂ ನಾವು ಹಂತ ಹಂತವಾಗಿ ಮಾಹಿತಿಯನ್ನು ಕೊಟ್ಟಿದ್ದೇವೆ. ಅದಲ್ಲದೆ 2019 ರಿಂದ ಇಲ್ಲಿಯವರೆಗೆ ಏನೇನು ಕೇಳಿದ್ದಾರೆ ಅವೆಲ್ಲ ಮಾಹಿತಿಗಳನ್ನು ಕೊಟ್ಟಿದ್ದೇವೆ. ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ವಸತಿ ಯೋಜನೆ, ಇನ್ನಿತರ ವಸತಿ ಯೋಜನೆ ಇದಕ್ಕೂ ಬೆಂಗಳೂರು ನಗರದ ಒಂದು ಲಕ್ಷ ಮನೆಗಳಿಗೂ ಸಂಬಂಧ ಇರುವುದಿಲ್ಲ. ಬೆಂಗಳೂರು ನಗರದ ಒಂದು ಲಕ್ಷ ಮನೆಗಳಿಗೆ ಕೇಂದ್ರ ಸರ್ಕಾರ 2016-17 ರಲ್ಲಿ ಒಂದು ಲಕ್ಷ ಮನೆಗಳನ್ನು ಕಟ್ಟುವುದಕ್ಕೆ 600 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿತು. ಬಿಡುಗಡೆ ಮಾಡಿದಂತಹ ಸಂದರ್ಭದಲ್ಲಿ ಅವರು G (Ground) +3 floors ನ್ನು ಮಾಡಿದರು. G+3 floors ಅನ್ನು ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಸ್ವಲ್ಪ ಗಮನಹರಿಸಬೇಕು. ಅಂದು ಇದ್ದಂತಹ ಸರ್ಕಾರ, G+14 floors ಮಾಡಿಕೊಂಡಿತು. G+14 ಮಾಡಿ 28,000 ಮನೆಗಳಿಗೆ ಟೆಂಡರ್ ಕರೆದು LoA (Letter of Award) issue ಮಾಡಿದರು. LoA issue ಮಾಡಿರತಕ್ಕಂಥದ್ದನ್ನು ನಾವು ಅದನ್ನೇನಾದರೂ ಮಾಡಿ ಚುನಾವಣೆ ಸಂದರ್ಭದಲ್ಲಿ work order issue ಮಾಡಿದರು. ಅದಾದ ಮೇಲೆ ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾದರು. 1074 ಎಕರೆ ಜಮೀನು ಕೊಟ್ಟಿದ್ದೇವೆಂದು ಹೇಳಿ, 36,000 ಅರ್ಜಿಗಳು ಬರುತ್ತವೆ. ಅವರು ಏನು ಮಾಡುತ್ತಾರೆಂದರೆ, ನಿಮಗೆ ಮನೆ ಹಂಚಿಕೆಯಾಗಿದೆ ಎಂದು ಅರ್ಜಿಯನ್ನು ಕಳುಹಿಸಿದರು. ಅದೆಲ್ಲವನ್ನು ನಾನು ಕೂಲಂಕಷವಾಗಿ ಹೇಳುವ

ಅವಶ್ಯಕತೆ ಇಲ್ಲ. ಇವತ್ತು ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಏನಿದೆ, ರಾಜ್ಯದ ಹಿತದೃಷ್ಟಿಯಿಂದ ಸಮರ್ಪಕವಾಗಿದೆ. ಇದಕ್ಕೆ ಹಂತ ಹಂತವಾಗಿ ಯಾವ ರೀತಿ ಉತ್ತರ ಕೊಡಬೇಕೆನ್ನುವುದಕ್ಕಿಂತ ಹೆಚ್ಚಾಗಿ ನಾನು ಒಂದೆರಡು ಗಂಟೆ ಸಮಯ ಮಾನ್ಯ ಸದಸ್ಯರ ಜೊತೆಗೆ ಕುಳಿತುಕೊಂಡು ಚರ್ಚೆ ಮಾಡುತ್ತೇನೆ. ಅದಕ್ಕಿಂತ ಮಿಗಿಲಾಗಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಇಲ್ಲಿಯವರೆವಿಗೂ ನಾವು ಇದಕ್ಕೆ ಒಟ್ಟು 7592 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ವಸತಿ ಯೋಜನೆಯಡಿಯಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಆರ್ಥಿಕ ವರ್ಷ 2019-20 ರಿಂದ 2022-23ನೇ ಸಾಲಿನವರೆಗೆ ಪರಿಶಿಷ್ಟ ಜಾತಿಯವರಿಗೆ 2630 ಕೋಟಿ ರೂಪಾಯಿಗಳು ಅವರವರ ಖಾತೆಗೆ ಹೋಗಿರುವಂಥದ್ದು. ಪರಿಶಿಷ್ಟ ಪಂಗಡದವರಿಗೆ 956 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಿಂದುಳಿದ ವರ್ಗದವರೆಲ್ಲರಿಗೂ 4006 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಒಟ್ಟು 7592.99 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದರ ಜೊತೆಯಲ್ಲಿ ಒಟ್ಟು 392730 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಈ ಮನೆಗಳ ಬಗ್ಗೆ ಪ್ರತಿಯೊಂದಕ್ಕೂ ಅನುಬಂಧಗಳನ್ನು ಹಂತ ಹಂತವಾಗಿ ನಾವು ನೀಡಿದ್ದೇವೆ. ತಮ್ಮ ಮೂಲಕ ಮಾನ್ಯ ನಾಗರಾಜುರವರಿಗೆ ತಿಳಿಸುವುದೇನೆಂದರೆ, ಬೆಂಗಳೂರು ನಗರದ ಬಗ್ಗೆ ಬಂದಾಗ ಅವರು ನನ್ನ ಹತ್ತಿರ ಬಂದು ಒಂದೆರಡು ಗಂಟೆ ಕುಳಿತುಕೊಳ್ಳಲಿ. ಏನೇನು ಆಗಿದೆ ಎಂಬುದನ್ನೆಲ್ಲಾ ತಿಳಿಸುತ್ತೇನೆ. ಅವರೇ ನಾಳೆ ಮಂತ್ರಿಯಾದರೂ ಕೂಡ ಅದೇ ಮಾಡಬೇಕಾಗುತ್ತದೆ. ಆದ್ದರಿಂದ ಬಡವರಿಗೆ ಕೊಡತಕ್ಕಂಥ ಕೆಲಸವನ್ನು ನಾನು ಸಮರ್ಪಕವಾಗಿ ಮಾಡಿದ್ದೇನೆ ಎನ್ನುವುದಕ್ಕಿಂತ ಹೆಚ್ಚಾಗಿ ಯಾರಿಗೆ ಏನು ಇದೆಯೋ ಗೊತ್ತಿಲ್ಲ, ಯಾರಿಗೆ ಏನು ತಲುಪಬೇಕಾಗಿತ್ತೋ ಅದನ್ನು ತಲುಪಿಸುವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ.

(ಮುಂದು)

(821) 1:40 14/09/2022 ಎಸ್‌ಪಿಆರ್/ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಸೋಮಣ್ಣ(ಮುಂದು):-**

ಅನ್ಯಥಾ ಭಾವಿಸಬಾರದು; ತಮಗೆ ಏನಾದರೂ ಮಾಹಿತಿ ಬೇಕಾದರೆ, ಬಂದು ಕುಳಿತುಕೊಂಡು ಪಡೆದುಕೊಳ್ಳಬಹುದು. ನಾನು ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಹೇಳಿರುವುದು ಹಾಗೂ ಮತ್ತೊಂದು ಸಂದರ್ಭ ಮತ್ತು ಸನ್ನಿವೇಶ ಇವುಗಳಿಗೆಲ್ಲವೂ ಕೂಡ ನಾನು ತಮಗೆ ಮಾಹಿತಿಯನ್ನು ನೀಡುತ್ತೇನೆ; ಆಗ ಚರ್ಚೆ ಮಾಡೋಣ.

**ಡಾ||ಕೆ.ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು ಇದಕ್ಕೆ ಅನುದಾನವನ್ನು ನೀಡಿದ್ದಾರೆಯೇ?

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು 600 ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರದ ಒಂದು ಲಕ್ಷ ಮನೆಗಳಿಗೆ ನೀಡಿದೆ. ನಾವು ಕೇಳಿದ ತಕ್ಷಣವೇ ಕೇಂದ್ರ ಸರ್ಕಾರವು ಒಂದು ಲಕ್ಷ ಮನೆಗಳನ್ನು ಹಾಗೂ 600 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿದೆ. ಇದಾದ ನಂತರ ಅಂದಿನ ಸರ್ಕಾರವು 28,000 ಮನೆಗಳನ್ನು ಟೆಂಡರ್ ಮೂಲಕ ಎಲ್.ಓ.ಇ., ಯನ್ನು ನೀಡಿ, ಆ ನಂತರ 14 ಅಂತಸ್ತುಗಳನ್ನು ಹಾಕಲಾಗುತ್ತದೆ. ಈ ಎಲ್ಲಾ ಅಂಶಗಳ ಬಗ್ಗೆ ನಾನು ಚರ್ಚಿಸಲು ಪ್ರಾರಂಭಿಸಿದರೆ, 1-2 ಗಂಟೆಗಳ ಸಮಯ ಬೇಕಾಗುತ್ತದೆ ಹಾಗೂ ನಾನು ಈ ಬಗ್ಗೆ ಮಾತನಾಡುತ್ತೇನೆ. ಹೀಗಾಗಿ ಯಾರೂ ಸಹ ಅನ್ಯಥಾ ಭಾವಿಸಬಾರದು. ಇದು ಬಡವರಿಗಾಗಿ ಮಾಡಿದ 48,000 ಮನೆಗಳ ಯೋಜನೆಯಾಗಿದೆ. ಮಾನ್ಯ ಸದಸ್ಯರು ಬಂದು ನೋಡಲು ನಾನು ಅವರನ್ನು ಆಹ್ವಾನಿಸುತ್ತೇನೆ. ಆದರೆ ಅಲ್ಲಿಗೆ ನಾನು ಬರದೇ, ನನ್ನ ಇಲಾಖಾಧಿಕಾರಿಗಳನ್ನು ಕಳುಹಿಸುತ್ತೇನೆ. ಬೆಂಗಳೂರು ನಗರದಲ್ಲಿ 73 ಕಡೆಗಳಲ್ಲಿ 535 ಎಕರೆಯಷ್ಟು ಪ್ರದೇಶದಲ್ಲಿ 447 ಎಕರೆಯಷ್ಟು ಜಾಗವನ್ನು .... ಇದನ್ನು ನೋಡಲು ಸದಸ್ಯರನ್ನೂ ಸಹ ಆಹ್ವಾನಿಸುತ್ತೇನೆ. ಇವತ್ತಿನ ದಿವಸ ನಾವು ಎಷ್ಟರ ಮಟ್ಟಿಗೆ ಮನೆಗಳನ್ನು ನಿರ್ಮಿಸಿದ್ದೇವೆ.., ಯಾವುದೋ ಒಂದು ತಪ್ಪಿನಿಂದಾಗಿ ನಾಳೆಯ ದಿನ ಯಾವುದೇ ಅವಗಢಗಳು ಸಂಭವಿಸಿ, ಅವರುಗಳು ಮುಂದೊಂದು ದಿನ ನ್ಯಾಯಾಲಯದ ಮೊರೆ ಹೋದರೆ, ಬಡವರ ಎಲ್ಲಾ ಹಣ ಖರ್ಚು ಆಗುತ್ತದೆ ಎನ್ನುವ ಒಂದೇ ದೃಷ್ಟಿಯಿಂದ ನಾನು ಒಬ್ಬ ಹಿರಿಯನಾಗಿ, ಇದ್ದ ವ್ಯಾಪ್ತಿಯಲ್ಲಿಯೇ ಹಾಲಿ ಇರುವುದನ್ನು ಅಲ್ಪ-ಸ್ವಲ್ಪ ಪ್ರಮಾಣದಲ್ಲಿ ಅರ್ಥ ಮಾಡಿಕೊಂಡಿರುವುದರಿಂದ ನಾನು ಇದನ್ನು ಸಮರ್ಪಕವಾಗಿ ಮಾಡಿದ್ದೇನೆ. ಸದಸ್ಯರಿಗೆ ಯಾವುದೇ ರೀತಿಯ ಮಾಹಿತಿಯ ಅವಶ್ಯಕತೆ ಇದ್ದಲ್ಲಿ ಅದನ್ನು ನೀಡಲು ನಾನು ಸಿದ್ಧನಿದ್ದೇನೆ. ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಕೆ.ಹರಿಪ್ರಸಾದ್ ರವರನ್ನೊಳಗೊಂಡಂತೆ ಎಲ್ಲಾ ಸದಸ್ಯರುಗಳು ಬಂದರೆ, ನಾನು ವಾಹನದ ವ್ಯವಸ್ಥೆಯನ್ನು ಮಾಡುತ್ತೇನೆ; ಸದರಿ 48,000 ಮನೆಗಳು ಎಲ್ಲಿ ಬಂದಿತ್ತು ಎನ್ನುವುದನ್ನು ನೋಡಲಿ. ಈ ಹಿಂದೆ ಅಧಿಕಾರದಲ್ಲಿದ್ದ ಸರ್ಕಾರವು ಯಾವ ಯಾವ ಜಾಗಗಳನ್ನು ಮನೆ ನಿರ್ಮಾಣಕ್ಕೆ ಹಂಚಿಕೆ ಮಾಡಿತ್ತು ; ಆ ಜಾಗಗಳು ಸರಿಯಾಗಿ ಇದ್ದವೆ ಅಥವಾ ಇಲ್ಲವೇ ; ಅಥವಾ ಆ ಜಾಗವು ಮನೆ ನಿರ್ಮಿಸಲು ಆಗುವುದಿಲ್ಲವೇ ಇಂತಹ ಎಲ್ಲಾ ಅಂಶಗಳ ಬಗ್ಗೆ ಅವರಿಗೆ ಮಾಹಿತಿಯನ್ನು ನೀಡುವುದರ ಜೊತೆಗೆ.... ಸದಸ್ಯರಿಗೆ ತಿಳಿಯದಿರುವ ಸಂಗತಿ ಏನೆಂದರೆ, ಈ ಹಿಂದೆ 7,90,000/- ರೂಪಾಯಿಗಳಷ್ಟು ಬೆಲೆ ಒಂದು ಮನೆಗೆ ಇತ್ತು. ಸರ್ಕಾರವು ಕೊಡುವುದನ್ನು ಹೊರತುಪಡಿಸಿ, ಇವತ್ತಿನ ದಿವಸ ನಾವು S.C.P., T.S.P., ಮತ್ತಿತರೆ ಮಾಡಿ ಅಂದರೆ ಏನೆಲ್ಲಾ ಸಾಧ್ಯವೋ ಅವುಗಳೆಲ್ಲವನ್ನೂ ಮಾಡಿ

ಸುಮಾರು 2,000 ದಷ್ಟು ಮನೆಗಳನ್ನು ಮೊನ್ನೆಯ ದಿನ ಅಂದರೆ ದಿನಾಂಕ 06/09/2022 ರಂದು ಹಂಚಿಕೆ ಮಾಡಬೇಕಾಗಿತ್ತು. ಆದರೆ ಅದೇ ದಿನ ನನ್ನ ಮಿತ್ರರಾದ ಉಮೇಶ್ ವಿ. ಕತ್ತಿ ರವರು ನಿಧನರಾಗಿದ್ದರಿಂದ ಅದನ್ನು ಮಾಡುವುದಕ್ಕಾಗಲಿಲ್ಲ.

ಬೆಂಗಳೂರು ನಗರದಲ್ಲಿ 48,000 ಮನೆಗಳಿಗಾಗಿ ಕೇಂದ್ರ ಸರ್ಕಾರವು 600 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆ ಮಾಡಿದೆ. ಒಟ್ಟಾರೆಯಾಗಿ ಒಂದು ಲಕ್ಷ ಮನೆಗಳಿಗೆ 1,500 ಕೋಟಿ ರೂಪಾಯಿಗಳ ಅನುದಾನ ಮೀಸಲಿಡಲಾಗಿದೆ. ಪ್ರಸ್ತುತ ನಾವು 52,000 ಮನೆಗಳ ನಿರ್ಮಾಣವನ್ನು ಪ್ರಾರಂಭಿಸಿದ್ದೇವೆ. ಈ ಕಾರಣಕ್ಕಾಗಿ ಕೇಂದ್ರ ಸರ್ಕಾರವು ಅನುದಾನದ ಮೊತ್ತವನ್ನು ಬಿಡುಗಡೆ ಮಾಡಿದೆ. ಸದರಿ 1.5 ಲಕ್ಷ ರೂಪಾಯಿಗಳನ್ನು ಪ್ರತಿಯೊಬ್ಬರಿಗೂ ಸಹ ನೀಡಲಾಗುತ್ತದೆ. ವಿರೋಧ ಪಕ್ಷದ ನಾಯಕರಿಗೆ ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ಎರಡು ಬೆಡ್ ರೂಂಗಳ ಮನೆಯನ್ನು ನಿರ್ಮಿಸಿ, ಒಂದು ಮನೆಗೆ 16 ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿದ್ದರು. ಯಾವ ಬಡವನು ಇಷ್ಟು ದೊಡ್ಡ ಮೊತ್ತವನ್ನು ನೀಡಿ, ಮನೆಯನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತದೆ? ಆ ಬಡವರು ತಮಗೆ ವಾರ್ಷಿಕ 87,000/- ರೂಪಾಯಿಗಳ ವರಮಾನವಿದೆ ಎಂದು ಹೇಳುತ್ತಾರೆ. ಇಷ್ಟು ಮೊತ್ತದ ವರಮಾನವಿದ್ದರೆ, ಅವರುಗಳು ಹೇಗೆ ಸಾಲವನ್ನು ಪಡೆಯಲು ಆಗುತ್ತದೆ? ಹೀಗಾಗಿ ಈ ಮನೆಗಳ ಮೊತ್ತವನ್ನು 3 ಲಕ್ಷ ರೂಪಾಯಿಗಳಿಗೆ ನಿಗದಿಪಡಿಸಿದ್ದೇನೆ. 37,000 ಮನೆಗಳನ್ನು ಗ್ರಾಮೀಣ ಪ್ರದೇಶದಲ್ಲಿರುವವರಿಗೆ 1,20,000 ರೂಪಾಯಿಗಳಂತೆ ನಿಗದಿಪಡಿಸಿದ್ದೇನೆ. ಈ ವಿಷಯದ ಬಗ್ಗೆ ಬಹಳಷ್ಟು ಕೂಲಂಕಷವಾಗಿ ಅಧ್ಯಯನ ಮಾಡಿದ್ದೇನೆ. ಇದು ನನಗೆ ಒಂದು ರೀತಿಯ ಶಾಪವೋ ಅಥವಾ ವಿಮೋಚನೆಯೋ ಗೊತ್ತಿಲ್ಲ. ಈ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಿದ್ದೇನೆ. 48,000 ಮನೆಗಳ ನಿರ್ಮಾಣವು ಒಂದು ಹಂತಕ್ಕೆ ಬಂದಿವೆ. ನಾನು ಎಲ್ಲರನ್ನೂ ಕರೆದುಕೊಂಡು ಹೋಗುತ್ತೇನೆ. ಬೆಂಗಳೂರು ನಗರದಲ್ಲಿ ಮನೆಗಳ ನಿರ್ಮಾಣ ಯಾವ ರೀತಿಯಾಗಿ ನಡೆಯುತ್ತಿದೆ ಹಾಗೂ ಯೋಜನೆಯ ಸಾಧಕ-ಬಾಧಕಗಳೇನು ಎನ್ನುವುದರ ಬಗ್ಗೆ ನೋಡೋಣ. ಮಾಡಿರುವ ಮನೆಗಳು ಸರಿಯಿವೆಯೇ ಎನ್ನುವುದನ್ನೂ ಸಹ ನೋಡೋಣ. ಈ ಹಿಂದಿನ ಸರ್ಕಾರವು ನೀಡಿದ ಜಾಗದಲ್ಲಿಯೇ ಮನೆಗಳನ್ನು ನಿರ್ಮಿಸಿದ್ದರೆ, ಕ್ವಾರಿ ಪಿಟ್‌ನಲ್ಲಿಯೇ ಮನೆಗಳನ್ನು ನಿರ್ಮಿಸಿದ್ದರೆ, ಮನೆಗಳ ಸ್ಥಿತಿ ಏನಾಗುತ್ತಿತ್ತು ಎನ್ನುವುದನ್ನು ಹಿರಿಯ ಸದಸ್ಯರಾದ ಶ್ರೀ ಎಂ.ನಾಗರಾಜುರವರೇ ತಿಳಿಸಬೇಕು. ಈ ವಿಷಯದ ಬಗ್ಗೆ ಚರ್ಚೆಯಾಗಲಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಪ್ರಶ್ನೋತ್ತರ ವೇಳೆ ಮುಕ್ತಾಯವಾಗಿದೆ.

**ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 14 ನೇ ಸೆಪ್ಟಂಬರ್ , 2022, ಸಮೂಹ-3 ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 95 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರಗಳನ್ನು ಲಗತ್ತಿಸಲಾಗಿದೆ)

**ಸಭಾಪತಿಯವರು:-** ಮಂಡಿಸಲಾಯಿತು.

## ೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾಗಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು

**ಅ) ವಿಷಯ:- ಖಾಸಗಿ ಶಿಕ್ಷಣ ಸಂಸ್ಥೆಗಳ ಭೂ ಪರಿವರ್ತನೆಗೆ ಹಾಗೂ ಮಾನ್ಯತೆ ನವೀಕರಣಕ್ಕೆ ಶಿಕ್ಷಣ ಇಲಾಖೆ ಅಧಿಕಾರಿಗಳಿಂದ ಅನಗತ್ಯ ಕಿರುಕುಳದ ಬಗ್ಗೆ**

- - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ದಿನಾಂಕ 13/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಲಾಗಿದೆ)

**“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”**

**ಆ) ವಿಷಯ:- ಬಾಗಲಕೋಟೆ ಜಿಲ್ಲೆ ಮಹಾಲಿಂಗಪೂರ ಪಟ್ಟಣವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಕುರಿತು**

- - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರು ದಿನಾಂಕ 13/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಕಂದಾಯ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಲಾಗಿದೆ)

**ಇ) ವಿಷಯ:- ಬೆಂಗಳೂರಿನ ಧರ್ಮರಾಯಸ್ವಾಮಿ ದೇವಸ್ಥಾನದ ಆಸ್ತಿಯನ್ನು ರಕ್ಷಣೆ ಮಾಡುವಂತೆ ಹಾಗೂ ಒತ್ತುವರಿಯ ತೆರವಿನ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದೇ ಇರುವ ಬಗ್ಗೆ**

- - - - -

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರು ದಿನಾಂಕ 13/09/2022 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಪಟ್ಟಂತೆ ಮಾನ್ಯ ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿ ಲಗತ್ತಿಸಲಾಗಿದೆ)

## ೦4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ಅ) ವಿಷಯ:- ಆನೆ ದಾಳಿಯಿಂದ ಮೃತಪಟ್ಟ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ನೀಡುವ ಬಗ್ಗೆ

- - - -

**ಶ್ರೀ ಪ್ರಾಣೇಶ್ ಎಂ.ಕೆ.(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ವಿವಿಧ ದಿನಪತ್ರಿಕೆಗಳ ಶೀರ್ಷಿಕೆಯಡಿ ಕಂಡು ಬಂದಂತೆ, "ಕಾಡಾನೆ, ನಾಡಿಗೆ ಆತಂಕ", "ಆನೆ ದಾಳಿ, ಕೃಷಿಕನಿಗೆ ಗಾಯ", "ಕಾಫಿ ತೋಟಕ್ಕೆ 3 ಕಾಡಾನೆ ದಾಳಿ; ಬೆಳೆ ನಾಶ", ಈ ರೀತಿ ಹಲವಾರು ದಿನ ಪತ್ರಿಕೆಗಳಲ್ಲಿ ಕಾಡಾನೆ ಹಾವಳಿ ಕುರಿತು ವರದಿಗಳಾಗಿದ್ದು, ಇತ್ತೀಚೆಗೆ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕಂಜಿಗೆ ಗ್ರಾಮ ಆನಂದ ದೇವಾಡಿಗ (52 ವರ್ಷ) ಎಂಬ ರೈತನನ್ನು ಬಲಿ ಪಡೆದಿದೆ, ನಂತರ 25 ದಿನಗಳೊಳಗೆ ಊರುಬಗೆ ಗ್ರಾಮ ರೈತ ಅರ್ಜುನ್ (45 ವರ್ಷ) ಆನೆ ದಾಳಿಯಿಂದ ಮೃತಪಟ್ಟಿದ್ದು, ಮೂಲರಹಳ್ಳಿಯಲ್ಲಿ ಆನೆ ದಾಳಿಗೆ ಕೃಷಿಕ ಎಂ.ಬಿ.ಶಿವಣ್ಣ ಎಂಬುವರು ಗಾಯಗೊಂಡಿದ್ದು, ಗೌಡಹಳ್ಳಿ ಗ್ರಾಮದ ಕಾಫಿ ಬೆಳೆಗಾರರಾದ ಎಂ.ಎಸ್.ಹರೀಶ್ ಎಂಬುವರ ತೋಟ ಸಂಪೂರ್ಣ ನಾಶವಾಗಿದ್ದು, ಹೀಗೆ ಮೂಡಿಗೆರೆ ತಾಲ್ಲೂಕಿನಾದ್ಯಂತ ಆನೆ ದಾಳಿಯಿಂದ ಅಪಾರ ಬೆಳೆ ನಾಶ ಹಾಗೂ ಜೀವಹಾನಿ ಆಗುತ್ತಿದೆ. ಆನೆ ದಾಳಿ ಕುರಿತು ಇತ್ತೀಚೆಗೆ ನಾನು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಈ ಎಲ್ಲಾ ವಿಚಾರಗಳನ್ನು ಸುದೀರ್ಘವಾಗಿ ಚರ್ಚಿಸಿದ ನಂತರ, ಕೂಡಲೇ ಆನೆಗಳನ್ನು ಬಂಧಿಸಿ ಸ್ಥಳಾಂತರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು, ಅದಕ್ಕಾಗಿ ನಾನು ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮುಂದುವರೆದು, ನಾನು ಸರ್ಕಾರಕ್ಕೆ ಒತ್ತಾಯಿಸುವುದೇನೆಂದರೆ, ಆನೆ ದಾಳಿಯಿಂದ ಮೃತಪಟ್ಟವರ ಕುಟುಂಬಗಳಿಗೆ, ಆನೆಗಳ ಹಾವಳಿಯಿಂದ ಮತ್ತು ಅತಿವೃಷ್ಟಿಯಿಂದ ಅಪಾರ ಪ್ರಮಾಣದ ಬೆಳೆ ನಾಶವಾಗಿ ಕಂಗಾಲಾಗಿರುವ ರೈತ ಕುಟುಂಬಗಳಿಗೆ ಶೀಘ್ರವಾಗಿ ಪರಿಹಾರವನ್ನು ಘೋಷಣೆ ಮಾಡುವ ಮೂಲಕ ಸಂಕಷ್ಟದಲ್ಲಿರುವ ಕುಟುಂಬಗಳನ್ನು ರಕ್ಷಿಸಬೇಕೆಂದು ವಿನಂತಿಸುತ್ತೇನೆ. ಹಾಗೂ ಮುಂದಿನ ದಿನಗಳಲ್ಲಿ ಆನೆ ಹಾವಳಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ, ರೈತರ ತೋಟ, ಜಮೀನುಗಳನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಮೂಡಿಗೆರೆ ವ್ಯಾಪ್ತಿಯಲ್ಲಿ ಆನೆಗಳು ಬಾರದಂತೆ ಬ್ಯಾರೀಕೆಡ್‌ಗಳನ್ನು ಅಳವಡಿಸುವುದು, ತಡೆಗೋಡೆಗಳನ್ನು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಿರ್ಮಾಣ ಮಾಡಲು ತಕ್ಷಣದಿಂದ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ. ವಿಶೇಷವಾಗಿ ಕಳಕಳಿಯಿಂದ ನಾನು ಸರ್ಕಾರಕ್ಕೆ ವಿನಂತಿಸುವುದೇನೆಂದರೆ, ಆನೆ ದಾಳಿಯಲ್ಲಿ ಮೃತಪಟ್ಟ ಕುಟುಂಬಕ್ಕೆ ಕನಿಷ್ಠ 25 ಲಕ್ಷ ರೂಪಾಯಿಗಳ ಪರಿಹಾರ ಹಾಗೂ ತೋಟಗಳು, ಬೆಳೆಗಳು ನಾಶವಾದಲ್ಲಿ ಅಂತಹ ಕುಟುಂಬಗಳಿಗೆ ಕನಿಷ್ಠ 15 ಲಕ್ಷ ರೂಪಾಯಿಗಳ ಪರಿಹಾರವನ್ನು ನೀಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯವು ಅತ್ಯಂತ ಗಂಭೀರವಾದ ವಿಚಾರವಾಗಿದ್ದು, ಇದಕ್ಕೆ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ:- ಕೊಡಗು ಜಿಲ್ಲೆಯ ಭಾಗಮಂಡಲ ತೀರ್ಥಯಾತ್ರಾ ಸ್ಥಳದಲ್ಲಿ ಮೂಲಭೂತ ಸೌಕರ್ಯಗಳಿಲ್ಲದಿರುವ ಬಗ್ಗೆ**

**- - - -**

**ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು.

ಭಾಗಮಂಡಲ ಕರ್ನಾಟಕದ ಕೊಡಗು ಜಿಲ್ಲೆಯಲ್ಲಿನ ಒಂದು ತೀರ್ಥಯಾತ್ರಾ ಸ್ಥಳವಾಗಿದೆ. ಯಾತ್ರಾರ್ಥಿಗಳು ಕಾವೇರಿಯ ಜನ್ಮಸ್ಥಳವಾದ ತಲಕಾವೇರಿಯೆಡೆಗೆ ಮುಂದುವರೆಯುವುದಕ್ಕೆ ಮುಂಚಿತವಾಗಿ, ತ್ರಿವೇಣಿ ಸಂಗಮದಲ್ಲಿ ಒಮ್ಮೆ ಸ್ನಾನ ಮಾಡಿ, ತಮ್ಮ ಪೂರ್ವಜರ ಕುರಿತಾದ ಕರ್ಮಾಚರಣೆಗಳನ್ನು ನಿರ್ವಹಿಸುವುದು ಒಂದು ಸಂಪ್ರದಾಯ. ಅಕ್ಟೋಬರ್ ತಿಂಗಳಿನಲ್ಲಿ ಬರುವ ತುಲಾ ಸಂಕ್ರಮಣದ ಸಂದರ್ಭದಲ್ಲಿ ಯಾತ್ರಾರ್ಥಿಗಳು ಇಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಜಮಾವಣೆಯಾಗುತ್ತಾರೆ. ಬೇಸಿಗೆಯ ಹಾಗೂ ಮಳೆಯಾಗುವ ಹಿನ್ನೆಲೆಯಲ್ಲಿ ಯಾತ್ರಾರ್ಥಿಗಳು ದೇವಾಲಯವನ್ನು ಪ್ರವೇಶ ಮಾಡುವ ಸಂದರ್ಭದಲ್ಲಿ ಮೇಲ್ಚಾವಣಿ ಇಲ್ಲದೇ ತೀವ್ರವಾಗಿ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ದೇವಾಲಯದ ಆವರಣದಲ್ಲಿ ಸುಸಜ್ಜಿತವಾದ ಪಾದಚಾರಿ ಮಾರ್ಗವೂ ಸಹ ಇರುವುದಿಲ್ಲ. ಮುಂದುವರೆದು, ದಿನನಿತ್ಯ ಆಗಮಿಸುವ ಸಾವಿರಾರು ಭಕ್ತರಿಗೆ ಭೋಜನವನ್ನು ಒದಗಿಸಲು ಒಂದು ಉತ್ತಮವಾದ ಭೋಜನ ಶಾಲೆ ಹಾಗೂ ಪಾಕ ಶಾಲೆಯೂ ಸಹ ಈ ದೇವಾಲಯಕ್ಕೆ ಅವಶ್ಯಕತೆ ಇದೆ.

ಕರ್ನಾಟಕ ರಾಜ್ಯದ ಅರ್ಧದಷ್ಟು ಜನ ಕಾವೇರಿ ನೀರನ್ನೇ ಅವಲಂಬಿಸಿರುವ ಈ ಸಂದರ್ಭದಲ್ಲಿ ಕಾವೇರಿಯ ಉಗಮ ಸ್ಥಾನವಾದ ಈ ದೇವಾಲಯವು ಮೂಲಭೂತ ಸೌಕರ್ಯಗಳಿಂದಲೇ ವಂಚಿತವಾಗಿರುವುದು ದುರದೃಷ್ಟಕರ. ಅಕ್ಕ ಪಕ್ಕದ ರಾಜ್ಯಗಳ ದೇವಾಲಯಗಳ ಭೇಟಿ ನೀಡುವ ಸಂದರ್ಭದಲ್ಲಿ ನಮ್ಮ ರಾಜ್ಯದ ಭಕ್ತರಿಗೆ ಅನಾನುಕೂಲವಾಗಬಾರದೆಂದು ನಮ್ಮ ಸರ್ಕಾರವು ಅಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕೋಟಿಗಟ್ಟಲೇ ಅನುದಾನವನ್ನು ಮೀಸಲಿಡುತ್ತಿರುವುದು ಶ್ಲಾಘನೀಯ. ಅದೇ ರೀತಿಯಲ್ಲಿ ಅರ್ಧ ಕರ್ನಾಟಕಕ್ಕೆ ದಾಹವನ್ನು ತೀರಿಸುವ, ರೈತರ ಭೂಮಿಗಳಿಗೆ ಅನ್ನದಾತೆಯಾಗಿರುವ ತಲಕಾವೇರಿಯ ಜೀರ್ಣೋದ್ಧಾರಕ್ಕೆ ಅಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ, ಮೇಲ್ಚಾವಣಿಗಳ ನಿರ್ಮಾಣ, ಸುಸಜ್ಜಿತವಾದ ಮೇಲ್ಚಾವಣಿ ಸಹಿತ ಪಾದಚಾರಿ ಮಾರ್ಗ, ಉತ್ತಮವಾದ ಭೋಜನ ಶಾಲೆ ಹಾಗೂ ಪಾಕ ಶಾಲೆಗಳನ್ನು ನಿರ್ಮಾಣ ಮಾಡಲು ಕೂಡಲೇ ಸರ್ಕಾರವು ಅನುದಾನವನ್ನು ಮಂಜೂರು ಮಾಡುವಂತೆ ಶೂನ್ಯವೇಳೆಯಲ್ಲಿ ಮಾನ್ಯ ಮುಜರಾಯಿ ಸಚಿವರನ್ನು ಒತ್ತಾಯಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ(ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು):–** ಮಾನ್ಯ ಸಭಾಪತಿಯವರೇ, ಸಹೋದರರಾದ ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ, ಭಾಗಮಂಡಲವು ಕರ್ನಾಟಕದ ಕೊಡಗು ಜಿಲ್ಲೆಯಲ್ಲಿನ ಒಂದು ತೀರ್ಥಯಾತ್ರಾ ಸ್ಥಳವಾಗಿದೆ. ಬಹಳಷ್ಟು ಕಡೆಗಳಿಂದ ಭಕ್ತರು ಅಲ್ಲಿಗೆ ಬರುತ್ತಾರೆ. ಅವರಿಗೆ ಅವ್ಯವಸ್ಥೆಯಾಗುತ್ತಿದೆ. ಏಕೆಂದರೆ, ಅಕ್ಟೋಬರ್ ತಿಂಗಳಿನಲ್ಲಿ ಬರುವ ತುಲಾ ಸಂಕ್ರಮಣದ ಸಂದರ್ಭದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತಾದಿಗಳು ಅಲ್ಲಿಗೆ ಬಂದಾಗ, ಅಲ್ಲಿ ಭಕ್ತರಿಗೆ ಅವಶ್ಯವಾಗಿರುವ ಭೋಜನದ ವ್ಯವಸ್ಥೆ, ಭೋಜನ ಶಾಲೆ, ಪಾಕ ಶಾಲೆಯೂ ಹಾಗೂ ಪಾದಚಾರಿ ಮಾರ್ಗ, ಮೇಲ್ಛಾವಣಿ ನಿರ್ಮಾಣ, ಸುಸಜ್ಜಿತವಾದ ಮೇಲ್ಛಾವಣಿ ಸಹಿತ ಪಾದಚಾರಿ ಮಾರ್ಗ ಇವುಗಳೆಲ್ಲದರ ಬಗ್ಗೆ ಸಹೋದರರು ನನ್ನ ಗಮನಕ್ಕೆ ತಂದಿದ್ದಾರೆ. ಈ ವಿಷಯದ ಬಗ್ಗೆ ನಾನು ಇವತ್ತಿನ ದಿನವೇ ಅಲ್ಲಿನ ಅಧಿಕಾರಿಗಳೊಂದಿಗೆ ಮಾತನಾಡಿ, ಅಲ್ಲಿನ ಮಾಹಿತಿಯನ್ನು ತರಿಸಿಕೊಂಡು ಆದಷ್ಟು ಬೇಗ ಕೆಲಸಗಳನ್ನು ಮಾಡಿಕೊಡುವ ವ್ಯವಸ್ಥೆಗಳನ್ನು ಮಾಡಲಾಗುತ್ತದೆ.

**ಇ) ವಿಷಯ:- ಕಳೆದ 15 ವರ್ಷಗಳಿಂದ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳ ನೇಮಕಾತಿ ಬಗ್ಗೆ**

- - - -

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ 80 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ, ಪ್ರೌಢ ಶಾಲೆ, ಪದವಿಪೂರ್ವ ಕಾಲೇಜುಗಳಿದ್ದು, ಆದರೆ, ಕೇವಲ 6,600 ದೈಹಿಕ ಶಿಕ್ಷಣ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, ಕಳೆದ 15 ವರ್ಷಗಳಿಂದ ಈ ಶಿಕ್ಷಕರ ನೇಮಕಾತಿ ನಡೆದಿಲ್ಲ ಎಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ವಿದ್ಯಾರ್ಥಿ ದಿಸೆಯಲ್ಲೇ ಮಕ್ಕಳ ಮಾನಸಿಕ ಬೆಳವಣಿಗೆ ಹಾಗೂ ದೈಹಿಕ ಬೆಳವಣಿಗೆ ಮತ್ತು ಕ್ರೀಡಾ ಮನೋಭಾವ ಮೂಡಿಸುವ ಕೆಲಸ ದೈಹಿಕ ಶಿಕ್ಷಕರ ಕರ್ತವ್ಯವಾಗಿರುತ್ತದೆ. ಇಂತಹ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ನಾನು ಶಿಕ್ಷಣ ಸಚಿವನಾಗಿದ್ದ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಸಮಗ್ರ ನೀತಿ ರೂಪಿಸುವ ನಿಟ್ಟಿನಲ್ಲಿ ಪ್ರೊಫೆಸರ್ ಎಲ್.ಆರ್.ವೈದ್ಯನಾಥನ್ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದ್ದು, ಈ ಸಮಿತಿಯು ಅಧ್ಯಯನ ನಡೆಸಿ ಸರ್ಕಾರಕ್ಕೆ 10 ಅಂಶಗಳ ವರದಿಯನ್ನು ಸಲ್ಲಿಸಿದ್ದು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಂತದಲ್ಲಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಹಿನ್ನೆಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಇರುವುದು ಕಡ್ಡಾಯ, ಯಾವುದೇ ಹುದ್ದೆ ಖಾಲಿ ಇರಬಾರದು ಎಂದು ವರದಿ ತಿಳಿಸಿತ್ತು. 2006ರಲ್ಲಿ ದೈಹಿಕ ಶಿಕ್ಷಕರ ನೇಮಕಾತಿ ನಡೆದಿತ್ತು. ತದನಂತರ ಇದುವರೆಗೂ ದೈಹಿಕ ಶಿಕ್ಷಕರ ಹುದ್ದೆ ಭರ್ತಿಯಾಗಿಲ್ಲ. ಸಿ.ಪಿ.ಇ.ಡಿ., ಮತ್ತು ಬಿ.ಪಿ.ಇ.ಡಿ., ಪದವೀಧರರು ರಾಜ್ಯದಲ್ಲಿ ಸಹಸ್ರಾರು ಸಂಖ್ಯೆಯಲ್ಲಿದ್ದು, ಅವರು ವಯೋಮಿತಿ ಮೀರುತ್ತಿದ್ದಾರೆ ಕಾರಣ, ಕೂಡಲೇ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಈ ಮೂಲಕ ಶಿಕ್ಷಣ ಸಚಿವರು ಹಾಗೂ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

822/14-09-2022/1-50/ಬಿಕೆಪಿ-ಜಿಆರ್

**ಈ) ವಿಷಯ: ರಾಜ್ಯದ 10 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳ ಕಟ್ಟಡಗಳು ಅಪಾಯದ ಅಂಚಿನಲ್ಲಿದ್ದು ಆ ಶಾಲೆಗಳಿಗೆ ಮೂಲಭೂತ ಅವಶ್ಯಕತೆಗಳನ್ನು ಒದಗಿಸುವ ಕುರಿತು.**

- - - -

**ಶ್ರೀ ಕೆ.ಹರೀಶ್ ಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಶೂನ್ಯ ವೇಳೆಯಲ್ಲಿ ಈ ವಿಷಯವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿ ಕೊಟ್ಟ ತಮಗೆ ಧನ್ಯವಾದಗಳು.

ರಾಜ್ಯದಲ್ಲಿ ಸರಾಸರಿ ಹತ್ತು ಸಾವಿರಕ್ಕೂ ಹೆಚ್ಚು ಪ್ರಾಥಮಿಕ ಮತ್ತು ಪ್ರೌಢಶಾಲಾ ಕಟ್ಟಡಗಳು ಅಪಾಯದ ಅಂಚಿನಲ್ಲಿದ್ದು, ಚಾವಣಿ ಕುಸಿತ, ಗೋಡೆಗಳು ಶಿಥಿಲವಾಗಿರುವುದು ಇನ್ನಿತರ ಮೂಲಭೂತ ಸೌಕರ್ಯಗಳ ಕೊರತೆ ಕುರಿತು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೊಳ್ತಿಗೆ ಗ್ರಾಮದ ಮಣಕ್ಕಾರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದೊಳಗೆ ವಿದ್ಯಾರ್ಥಿಗಳು ಪ್ರವೇಶಿಸದಂತೆ ಫಲಕ ಅಳವಡಿಸಲಾಗಿದೆ. ಹಾಗೆಯೇ ಕಾರವಾರದಲ್ಲಿ ಹೆಣ್ಣುಮಕ್ಕಳ ಶಾಲೆ ಶಿಥೀಲಾವಸ್ತೆಯಲ್ಲದೆ. ಬೆಳಗಾವಿಯ ಯಮನಕಮರಡಿಯಲ್ಲಿ ಶಾಲಾ ಕಟ್ಟಡ ಕುಸಿದು ಇಬ್ಬರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. ಹಾಸನದಲ್ಲಿ ಭಾರಿ ಮಳೆಯಿಂದಾಗಿ ಜಿಲ್ಲೆಯ 120 ಶಾಲೆಗಳು ಹಾನಿಗೀಡಾಗಿವೆ. ಮೈಸೂರಿನಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯ ಕೊರತೆ, ನೀರಿನ ಕೊರತೆಗಳಿದ್ದು, ಕೆಲವು ಕಡೆ ಕಾಮಗಾರಿಗಳು ಮಂಜೂರಾಗಿದ್ದರೂ ಅಮೇಗತಿಯಲ್ಲಿ ನಡೆಯುತ್ತಿವೆ. ಕೆಲವು ಕಡೆ ಹಳೆಯ ವಿದ್ಯಾರ್ಥಿಗಳ ಸಂಘಗಳ ನೇತೃತ್ವದಲ್ಲಿ ಕೆಲಸಗಳು ನಡೆಯುತ್ತಿವೆ. ಕೆಲವು ಕಡೆ ದೇವಸ್ಥಾನಗಳಲ್ಲಿ ಶಾಲೆಗಳು ನಡೆಯುತ್ತಿವೆ. ಉದ್ದಿಮೆಗಳಲ್ಲಿನ ಸಿ.ಎಸ್.ಆರ್., ನಿಧಿಯನ್ನು ಎಲ್ಲಾ ಜಿಲ್ಲೆಗಳ ಶಾಲೆಗಳಿಗೆ ಬಳಸಿಕೊಳ್ಳಬಹುದಾಗಿದ್ದರೂ ಈ ಉದ್ದಿಮೆಗಳು ಸಕಾಲದಲ್ಲಿ ನಿಧಿಯನ್ನು ನೀಡುವಲ್ಲಿ ನಿರ್ಲಕ್ಷಿಸಿವೆ. 2021ರ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ನಿಮಿತ್ತ ಮಾನ್ಯ ಮುಖ್ಯಮಂತ್ರಿಗಳು ಅಮೃತ ಮಹೋತ್ಸವ ಯೋಜನೆಯನ್ನು ರೂಪಿಸುವ ಮೂಲಕ 750 ಶಾಲೆಗಳನ್ನು ತಲಾ 10 ಲಕ್ಷ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುವುದಾಗಿ ಘೋಷಿಸಿದ್ದರು. ಆದರೆ, ಈ ಯೋಜನೆಗೆ ಈವರೆಗೂ ಹಣ ಬಿಡುಗಡೆಯಾಗಿರುವುದಿಲ್ಲ. ಹಾಗೆಯೇ 2021-22ನೇ ಸಾಲಿನಲ್ಲಿ ಜ್ಞಾನಪೀಠ ಪುರಸ್ಕಾರಕ್ಕೆ ಭಾಜನರಾಗಿರುವ

ಕನ್ನಡದ ಎಂಟು ಮೇರು ಸಾಹಿತಿಗಳು ವ್ಯಾಸಂಗ ಮಾಡಿದ ಶಾಲೆಗಳ ಅಭಿವೃದ್ಧಿಗೆ 18 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವುದಾಗಿ ಆಯವ್ಯಯದಲ್ಲಿ ಘೋಷಿಸಿದ್ದು, ಅದು ಸಹ ಬಿಡುಗಡೆಯೂ ಆಗಿರುವುದಿಲ್ಲ.

ಈ ಎಲ್ಲಾ ಕಾರಣಗಳಗಾಗಿ ಮಕ್ಕಳ ವಿದ್ಯಾಬ್ಯಾಸಕ್ಕೆ ತೊಂದರೆಯಾಗದಂತೆ ಆಯಾ ಶಾಲೆಗಳ ಮೂಲಭೂತ ಸೌಕರ್ಯಗಳ ಅವಶ್ಯಕತೆಗಳನ್ನು ಮನಗಂಡು ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್ ರವರ ಶೂನ್ಯವೇಳೆಯ ಪ್ರಸ್ತಾಪಕ್ಕೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಉ) ವಿಷಯ:- ವಸತಿ ಇಲಾಖೆಯಲ್ಲಿಯ ವಿವಿಧ ವಸತಿ ಯೋಜನೆಗಳಿಗೆ ಬಾಕಿ ಇರುವ ಅನುದಾನ ಬಿಡುಗಡೆಗೊಳಿಸುವ ಕುರಿತು.**

- - - -

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಸಾರ್ವಜನಿಕ ಮಹತ್ವದ ವಿಚಾರವನ್ನು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

ನೆತ್ತಿ ಮೇಲೊಂದು ಸೂರಿನ ಕನಸು ಕಂಡು ಸರಕಾರದ ನಾನಾ ವಸತಿ ಯೋಜನೆಗಳಡಿ ಮನೆ ಕಟ್ಟಲು ಮುಂದಾದ ಬಡ ಜನರ ಸಂಕಷ್ಟಕ್ಕೆ ಕೇಂದ್ರ ಸರಕಾರ ತನ್ನ ಪಾಲಿನ ಅನುದಾನ ನೀಡದ ಕಾರಣ ಮನೆಗಳು ಅರ್ಧಕ್ಕೆ ನಿಂತಿರುವುದು, ಸಾವಿರಾರು ಜನರ ಮನೆ ಕನಸು ಕನಸಾಗಿಯೇ ಉಳಿದು, ಫಲಾನುಭವಿಗಳು ಮನೆ ಕಟ್ಟಲು ಮುಂದಾಗದಿರುವುದು ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ನಗರ, ಪಟ್ಟಣ ಪ್ರದೇಶದಲ್ಲಿ ವಾಜಪೇಯಿ ನಗರ ವಸತಿ ಯೋಜನೆ, ಡಾ॥ ಬಿ.ಆರ್. ಅಂಬೇಡ್ಕರ್, ದೇವರಾಜ ಅರಸು ವಸತಿ ಯೋಜನೆ ಹಾಗೂ ಪ್ರಧಾನಮಂತ್ರಿ ಅವಾಸ್ ಯೋಜನೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಪ್ರಧಾನ ಮಂತ್ರಿ ಅವಾಸ್ ಯೋಜನೆಯಲ್ಲಿ ರಾಜ್ಯದಲ್ಲಿ ಸಾವಿರಾರು ಮನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳು ಕೇಂದ್ರ ಸರ್ಕಾರದ 1.20 ಲಕ್ಷ ರೂ. ಹಾಗೂ ರಾಜ್ಯ ಸರಕಾರದ 2 ಲಕ್ಷ ರೂ. ಅನುದಾನವನ್ನು ಒಳಗೊಂಡಿದೆ. ಆದರೆ ಕೇಂದ್ರ ಕೊಟ್ಟರೆ ರಾಜ್ಯ ಕೊಟ್ಟಿಲ್ಲ. ರಾಜ್ಯ ಕೊಟ್ಟರೆ ಕೇಂದ್ರದ ಅನುದಾನ ಇಲ್ಲ ಎಂಬಂತಾಗಿ ಸಾವಿರಾರು ಮನೆಗಳು ಪೂರ್ಣಗೊಳ್ಳದೆ ವಸತಿ ಯೋಜನೆಯು ಕುಂಠಿತವಾಗಿದೆ.

ಅಂಕಿ ಅಂಶಗಳ ಪ್ರಕಾರ ರಾಜ್ಯದಲ್ಲಿ ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ 184987 ಮನೆಗಳಿಗೆ ಅನುಮೋದನೆ ದೊರೆತಿದ್ದು, ಇದರಲ್ಲಿ ಅನುದಾನ ಕೊರತೆ ಸೇರಿ ನಾನಾ ಕಾರಣಗಳಿಗೆ 82780 ಮನೆಗಳು ಅರ್ಧಕ್ಕೆ ನಿಂತಿವೆ ಮತ್ತು ಬ್ಲಾಕ್ ಮಾಡಲಾಗಿದೆ. ಇನ್ನಿತರ ವಸತಿ ಯೋಜನೆಗಳಲ್ಲಿ 20559 ಮನೆಗಳು ಅರ್ಧಕ್ಕೆ ನಿಂತಿವೆ ಎಂದು ಅಂಕಿ ಸಂಖ್ಯೆ ಹೇಳುತ್ತವೆ, ಈ ವಸತಿ ಯೋಜನೆಗಳಿಗೆ 2020 ರಿಂದ ರಾಜ್ಯ ಸರಕಾರ ಅನುದಾನ

ನೀಡುತ್ತಿದೆಯಾರೂ ಕೇಂದ್ರ ಸರಕಾರದ ಅನುದಾನ ಬಿಡುಗಡೆ ಆಗದೆ ಫಲಾನುಭವಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಪರಿಸ್ಥಿತಿ ಗ್ರಾಮೀಣ ಭಾಗದಲ್ಲೂ ಸಹ ಇದೆ.

ಆದಕಾರಣ, ರಾಜ್ಯ ಸರಕಾರ ಕೂಡಲೇ ಕೇಂದ್ರದೊಂದಿಗೆ ಸಮನ್ವಯ ಸಾಧಿಸಿ, ನಾನಾ ವಸತಿ ಯೋಜನೆಗಳಿಗೆ ಬಾಕಿ ಇರುವ ಅನುದಾನವನ್ನು ಬಿಡುಗಡೆಗೊಳಿಸುವಂತೆ ಒತ್ತಾಯಿಸಿ, ಲಕ್ಷಾಂತರ ಫಲಾನುಭವಿಗಳ ಬದುಕಿನ ನೆಲೆಗೆ ಆಸರೆಯನ್ನು ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ವಸತಿ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್‌ರವರ ಶೂನ್ಯವೇಳೆಯ ಪ್ರಸ್ತಾಪಕ್ಕೆ ಮಾನ್ಯ ವಸತಿ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಸಭಾಪತಿಯವರು:-** ಸಿ.ಇ.ಟಿ., ಪರೀಕ್ಷೆಯ ಒಂದೇ ವಿಚಾರವನ್ನು ಮಾನ್ಯ ಸದಸ್ಯರಾದ ಶ್ರೀ ಶಶಿಲ್ ಜಿ. ನಮೋಶಿ ರವರು ಮತ್ತು ಶ್ರೀ ಟಿ.ಎ.ಶರವಣ ರವರು ಕೊಟ್ಟಿರುವುದರಿಂದ ಯಾರಾದರೊಬ್ಬರು ಪ್ರಸ್ತಾಪಿಸುವುದು.

**ಶ್ರೀ ಟಿ.ಎ. ಶರವಣ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ನಾನು ಪ್ರಸ್ತಾಪ ಮಾಡುತ್ತೇನೆ.

**ಊ) ವಿಷಯ:- 2022-23ನೇ ಸಿ.ಇ.ಟಿ., ಪಿ.ಯುಸಿ. ಪರೀಕ್ಷೆಯ ಗೊಂದಲ ಪರಿಹರಿಸುವ ಬಗ್ಗೆ.**

**- - -**

**ಶ್ರೀ ಟಿ.ಎ.ಶರವಣ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

2022-23ನೇ ಸಾಲಿನ ಉನ್ನತ ಶಿಕ್ಷಣದ ಪ್ರವೇಶಕ್ಕೆ ಸಿ.ಇ.ಟಿ. ಪರೀಕ್ಷೆಯ ಫಲಿತಾಂಶ ಪ್ರಕಟವಾಗಿ ಒಂದೂವರೆ ತಿಂಗಳು ಕಳೆದಿದೆ Rank ಪಟ್ಟಿಯಲ್ಲಿ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ ಎಂದು ವಿದ್ಯಾರ್ಥಿಗಳು ಹೋರಾಟಕ್ಕಿಳಿದು ಕೋರ್ಟ್‌ನಿಂದ ತೀರ್ಪು ತಂದಿದ್ದರೂ, ಅಂದಿನಿಂದ ಇಂದಿನವರೆಗೂ ಸಿಇಟಿ Rank ಗೊಂದಲಕ್ಕೆ ಮಾತ್ರ ಪರಿಹಾರ ಸಿಕ್ಕಿಲ್ಲ. ಸರಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳದೇ ಇರುವುದರಿಂದ ಫಲಿತಾಂಶ ಪ್ರಕಟವಾದ ಮೊದಲ ದಿನದಿಂದ ಈವರೆಗೆ Rank ಪಡೆದ ವಿದ್ಯಾರ್ಥಿಗಳು ಹಾಗೂ ಪೋಷಕರೂ ಸೇರಿದಂತೆ ಲಕ್ಷಾಂತರ ಜನರು ಆತಂಕದಲ್ಲೇ ಉಳಿಯುವಂತಾಗಿದೆ. ಈ ಬಗ್ಗೆ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಈ ವಿಚಾರವನ್ನು ಸದನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಟಿ.ಎ. ಶರವಣರವರು ಮತ್ತು ಶ್ರೀ ಶಶಿಲ್ ಜಿ.ನಮೋಶಿಯವರು ಕೇಳಿರುವ ಶೂನ್ಯವೇಳೆಯ ಪ್ರಸ್ತಾಪಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಖ) ವಿಷಯ: ಬೀದರ್ ಬ್ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 96 ಸ್ವಚ್ಛತಾ ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ತೆಗೆದುಹಾಕಿರುವ ಕುರಿತು.**

– – – –

**ಶ್ರೀ ಅರವಿಂದ ಕುಮಾರ್ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಜರೂರು ವಿಚಾರವನ್ನು ಶೂನ್ಯ ವೇಳೆಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

ಈ ಸ್ವಚ್ಛತಾ ಕರ್ಮಿಗಳು ಸುಮಾರು 2 ವರ್ಷಗಳಿಂದ ಬೀದರ್‌ನ ಬ್ರಿಮ್ಸ್ (BRIMS) ಬೋಧಕ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಕೋವಿಡ್–19 ರ ಸಮಯದಲ್ಲಿ ತಮ್ಮಗಳ ಪ್ರಾಣದ ಹಂಗನ್ನು ತೊರೆದು ಹಗಲು–ರಾತ್ರಿ ಎನ್ನದೆ, ರೋಗಿಗಳಿಗೆ ತಮ್ಮ ಬಂಧುಗಳು ಯಾರು ಇಲ್ಲದ ಸಮಯದಲ್ಲಿ ಅವರ ಆರೈಕೆ ಮಾಡಿ, ಅತೀ ನಿಷ್ಠೆಯಿಂದ ಆಸ್ಪತ್ರೆಯ ಸ್ವಚ್ಛತಾ ಕೆಲಸವನ್ನು ಮಾಡಿ ತಮ್ಮ ಸೇವೆಯನ್ನು ಒದಗಿಸಿರುತ್ತಾರೆ. ಇಂತಹ ಬಡ ಕೂಲಿ ಕಾರ್ಮಿಕರನ್ನು ಏಕಾಏಕಿ ಕೆಲಸದಿಂದ ತೆಗೆದು ಹಾಕಲಾಗಿದೆ. ಈ ಸಂಬಂಧ ಈ ಬಡ ದಲಿತ ಕಾರ್ಮಿಕರಿಗೆ ದಿಕ್ಕು ತೋಚದಂತಾಗಿ, ದಿನಾಂಕ:09–05–2022 ರಿಂದ ಆಸ್ಪತ್ರೆಯ ಮುಂದೆ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿದ್ದು, ಮಳೆ–ಬಿಸಿಲು–ಚಳಿಗಳೆನ್ನದೆ ಸುಮಾರು 4 ತಿಂಗಳುಗಳಿಂದ ಧರಣಿಯನ್ನು ನಡೆಸುತ್ತಿದ್ದರೂ ಸಹಾ ಈ ಸ್ವಚ್ಛತಾ ಕರ್ಮಿಗಳನ್ನು ಜಿಲ್ಲಾಡಳಿತವಾಗಲಿ, ಬ್ರೀಮ್ಸ್ ಆಡಳಿತವಾಗಲಿ ಧರಣಿ ಸತ್ಯಾಗ್ರಹದ ಸ್ಥಳಕ್ಕೆ ಬಂದು ಯಾವುದೇ ರೀತಿಯಾದಂತಹ ಕ್ರಮವನ್ನು ಕೈಗೊಳ್ಳದೇ ಇರುವುದು ವಿಪರ್ಯಾಸವಾಗಿದೆ.

ಈ ಆಸ್ಪತ್ರೆಯಲ್ಲಿ ಈ ಹಿಂದೆ ಸುಮಾರು 250 ಹಾಸಿಗೆಗಳಿದ್ದು, ಒಟ್ಟು 89 ಸ್ವಚ್ಛತಾ ಕರ್ಮಿಗಳು ಕೆಲಸವನ್ನು ನಿರ್ವಹಿಸುತ್ತಿದ್ದರು. ಪ್ರಸ್ತುತ, ಈ ಆಸ್ಪತ್ರೆಯು ಬ್ರಿಮ್ಸ್ ಬೋಧಕ ಆಸ್ಪತ್ರೆಯಾಗಿ ಮಾರ್ಪಟ್ಟಿದ್ದು, ಸುಮಾರು 750 ಹಾಸಿಗೆಗಳಿವೆ. ಈ ಹಳೆಯ 89 ಸ್ವಚ್ಛತಾ ಕರ್ಮಿಗಳು ಮಾತ್ರ ಇಲ್ಲಿ ಹಗಲು ರಾತ್ರಿಯೆನ್ನದೇ ಕೆಲಸ ನಿರ್ವಹಿಸಿದರೂ ಸ್ವಚ್ಛತೆಯನ್ನು ಮಾಡುವುದಕ್ಕೆ ತುಂಬಾ ತೊಂದರೆಯಾಗುತ್ತದೆ ಎಂದು ತಿಳಿದುಬಂದಿರುತ್ತದೆ. ಅಲ್ಲದೇ, ಹೊಸ ಆಸ್ಪತ್ರೆಗೆ 150–200 ಜನ ಸ್ವಚ್ಛತಾ ಕರ್ಮಿಗಳ ಅವಶ್ಯಕತೆ ಇರುವ ಕಾರಣ, ಈ ಬಡ ದಲಿತ ಹಾಗೂ ಇನ್ನಿತರ 96 ಜನ ಸ್ವಚ್ಛತಾ ಕರ್ಮಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಂಡು, ಇವರ ಜೀವನ ನಿರ್ವಹಣೆಗೆ ಅನುಕೂಲ

ಮಾಡುವ ನಿಟ್ಟಿನಲ್ಲಿ, ಸಂಬಂಧಪಟ್ಟವರಿಗೆ ನಿರ್ದೇಶನವನ್ನು ನೀಡಲು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಅರವಿಂದ ಕುಮಾರ ಅರಳಿ ರವರ ಶೂನ್ಯವೇಳೆಯ ಪ್ರಸ್ತಾಪಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಎ) ವಿಷಯ: ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹಧನ ಸೇರಿ ಇತರೆ ಸೌಲಭ್ಯಗಳ ಸಮರ್ಪಕ ವಿತರಣೆ ಬಗ್ಗೆ.**

- - - -

**ಶ್ರೀ ಪ್ರಕಾಶ್ ಕೆ. ರಾಠೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಶೂನ್ಯ ವೇಳೆಯಲ್ಲಿ ಈ ವಿಷಯವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು.

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಸಿಗಬೇಕಾದ ಶೈಕ್ಷಣಿಕ ಪ್ರೋತ್ಸಾಹ ಧನ, ಕಾರ್ಮಿಕರಲ್ಲದವರ ಮಕ್ಕಳಿಗೂ ಅನ್ಯ ಮಾರ್ಗದಲ್ಲಿ ಕೊಡಿಸುವ ದಂದೆಯೊಂದು ಎಗ್ಗಿಲ್ಲದೆ ನಡೆಯುತ್ತಿದೆ. ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಧನಸಹಾಯ ಸಿಗುವ ಅರಿವು ಇಲ್ಲದ ವಿದ್ಯಾರ್ಥಿಗಳನ್ನೇ ಗುರುತಿಸಿಕೊಂಡು ಅಕ್ರಮ ಅವ್ಯವಹಾರ ನಡೆಸಲಾಗುತ್ತಿದೆ. ಸಿಗುವ ಪ್ರೋತ್ಸಾಹ ಧನದಲ್ಲೂ 10 ರಿಂದ 15 ಸಾವಿರ ರೂ ಕಮಿಷನ್ ದುಡ್ಡು ಈ ದಂಧೆ ನಡೆಸುವ ಏಜೆಂಟ್‌ಗಳ ಪಾಲಾಗುತ್ತಿದೆ. ಶೈಕ್ಷಣಿಕ ಪ್ರೋತ್ಸಾಹಧನವನ್ನು ಪಡೆಯಲು ಯೋಗ್ಯರಲ್ಲದ ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ಹಣವು ಜಮಾವಣೆ ಮಾಡಿ, ಏಜೆಂಟರು ಕಮಿಷನ್ ಪಡೆಯುತ್ತಿರುತ್ತಾರೆ.

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶಿಶುವಿಹಾರದಿಂದ ಪಿ.ಹೆಚ್.ಡಿ., ವ್ಯಾಸಂಗ ತನಕ ಕಾರ್ಮಿಕ ಇಲಾಖೆ ಸಹಾಯಧನ ನೀಡಲಿದೆ. ಆದರೆ, ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನೀಡುವ ಮೊತ್ತ ಬರೋಬ್ಬರಿ 50 ಸಾವಿರ ರೂ. ಸಣ್ಣಪುಟ್ಟ ಕೈ ಹಾಕಿದರೆ, ಕಮಿಷನ್ ಹೆಚ್ಚು ಸಿಗುವುದಿಲ್ಲ. ಇಂಜಿನಿಯರಿಂಗ್ ವಿದ್ಯಾರ್ಥಿಗಳ ಜೊತೆಗೆ ಡೀಲ್ ಕುದುರಿಸುತ್ತಿದ್ದಾರೆ. ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಿದ್ದರೂ ಸಹ, ಪರಿಶೀಲನೆಯ ನೆಪದಲ್ಲಿ ಅಧಿಕಾರಿಗಳೇ ಮಂಜೂರು ಮಾಡಬೇಕಾಗಿರುವುದರಿಂದ ಕಾಲೇಜಿನ ಅತಿಥಿ ಉಪನ್ಯಾಸಕರು ಕೈಜೋಡಿಸಿರುವ ವಿಷಯವು ಮಾಧ್ಯಮಗಳಲ್ಲಿ ತಿಳಿದು ಬಂದಿರುವುದರಿಂದ, ಈ ಕಮಿಷನ್ ಹಾವಳಿಯನ್ನು ನಿರ್ಮೂಲನೆ ಮಾಡುವ ಸಂಬಂಧ ಸೂಕ್ತ ಕ್ರಮ ಕೈಗೊಳ್ಳಲು ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಠೋಡ್ ರವರ ಶೂನ್ಯವೇಳೆಯ ಪ್ರಸ್ತಾಪಕ್ಕೆ ಮಾನ್ಯ ಕಾರ್ಮಿಕ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

(ಮುಂದು)

(೮23) 14.09.2022 02.00 ಎಸ್‌ವಿ-ಎಂಡಿ (ಸಭಾಪತಿಯವರ ಉಪಸ್ಥಿತಿ)

**ಏ) ವಿಷಯ:- ಹುಬ್ಬಳ್ಳಿಯ ತಾರಿಹಾಳ ಕೈಗಾರಿಕಾ ಪ್ರದೇಶದಲ್ಲಿ ಸ್ಪಾರ್ಕಲ್ ಕ್ಯಾಂಡಲ್ ಕಾರ್ಖಾನೆಯಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಗಾಯಾಳು ಹಾಗೂ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡದಿರುವ ಬಗ್ಗೆ**

\- - - -

**ಶ್ರೀ ಸಲೀಂ ಅಹ್ಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹುಬ್ಬಳ್ಳಿಯ ತಾರಿಹಾಳ ಕೈಗಾರಿಕಾ ಪ್ರದೇಶದಲ್ಲಿ ಸ್ಪಾರ್ಕಲ್ ಕ್ಯಾಂಡಲ್ ಕಾರ್ಖಾನೆಯಲ್ಲಿ ಅಗ್ನಿದುರಂತ ಸಂಭವಿಸಿದಾಗ ಮೃತ ಪಟ್ಟವರ ಕುಟುಂಬಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಪರಿಹಾರ ಘೋಷಣೆಯನ್ನು ಮಾಡಿ 60 ದಿನಗಳಾದರೂ ಇಲ್ಲಿಯವರೆವಿಗೂ ಪರಿಹಾರವನ್ನು ನೀಡದೆ ಇರುವ ವಿಷಯವನ್ನು ಸದನದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

ಜುಲೈ 23ರಂದು ತಾರಿಹಾಳದಲ್ಲಿನ ಸ್ಪಾರ್ಕಲ್ ಕ್ಯಾಂಡಲ್ ಉತ್ಪಾದಿಸುವ ಆಕ್ಷನಿಕ್ ಇನ್ನೋವೇಶನ್ ಪ್ರೈವೇಟ್ ಲಿಮಿಟೆಡ್ ಸ್ಪಾರ್ಕಲ್ ಕ್ಯಾಂಡಲ್ ಕಾರ್ಖಾನೆಯಲ್ಲಿ ಅಗ್ನಿದುರಂತ ಸಂಭವಿಸಿದ್ದು, ಇದರಿಂದಾಗಿ 8 ಕಾರ್ಮಿಕರು ತೀವ್ರವಾಗಿ ಗಾಯಗೊಂಡಿದ್ದು, ಎಲ್ಲರನ್ನೂ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅದರಲ್ಲಿ ಒಂದೇ ದಿನದಲ್ಲಿ ಮೂವರು ಮೃತಪಟ್ಟರೆ, ಇನ್ನೂ ಮೂವರು 10 ದಿನಗಳ ನಂತರ ಮೃತ ಪಟ್ಟಿರುತ್ತಾರೆ. ಘಟನೆ ನಡೆದ ಮರುದಿನವೇ ಜಿಲ್ಲಾ ಉಸ್ತುವಾರಿ ಸಚಿವರು ಘಟನಾ ಸ್ಥಳಕ್ಕೆ ಮತ್ತು ಕಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಬಗ್ಗೆ ವಿಚಾರಿಸಿ, ಮೃತಪಟ್ಟವರ ಕುಟುಂಬಕ್ಕೆ ತಕ್ಷಣವೇ ರೂ.5.00 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿದ್ದರು. ಆದರೆ ಇಲ್ಲಿಯವರೆವಿಗೂ ಬಡ ಮೃತಕುಟುಂಬಗಳಿಗೆ ಪರಿಹಾರ ಸಿಕ್ಕಿಲ್ಲವಾದ್ದರಿಂದ ಕುಟುಂಬಸ್ಥರು ಕಛೇರಿಗಳಿಗೆ ಅಲೆಯುವಂತಾಗಿದೆ. ಅತ್ತ ಈ ಕಾರ್ಖಾನೆಯು ಅನಧಿಕೃತವಾಗಿದ್ದು, ಕಾರ್ಖಾನೆಯ ಮಾಲೀಕರಿಂದ ಏನಾದರೂ ಪರಿಹಾರ ಸಿಗಬಹುದೆಂಬ ನಿರೀಕ್ಷೆಯು ಮಾಯವಾಗಿದೆ. ಆದುದರಿಂದ ಕೂಡಲೇ ಮೃತಕುಟುಂಬದ ಸದಸ್ಯರಿಗೆ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಲೀಂ ಅಹ್ಮದ್‌ರವರ ಶೂನ್ಯವೇಳೆ ಪ್ರಸ್ತಾವನೆಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಐ) ವಿಷಯ:- ಆರ್ಥಿಕ ಸಂಕಷ್ಟದಲ್ಲಿರುವ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಬೇಕಾದ ರೂ.185 ಕೋಟಿ ಬಾಕಿ ಹಣ ಬಿಡುಗಡೆ ಕುರಿತು**

- - - -

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ನಾಲ್ಕು ವರ್ಷಗಳಿಂದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ವೇತನ ಪಿಂಚಣಿ ಮುಂತಾದ ವಿಷಯಕ್ಕೆ ಸಂಬಂಧಿಸಿದಂತೆ ಸುಮಾರು ರೂ.185 ಕೋಟಿ ಬಾಕಿ ಹಣ ಬಿಡುಗಡೆಯಾಗದೇ ವಿಶ್ವವಿದ್ಯಾಲಯವು ಹಲವಾರು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿರುವುದು ಈ ಕುರಿತು ಸರ್ಕಾರಕ್ಕೆ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ಮುಂತಾದ ಶಾಸಕರು ಸರ್ಕಾರಕ್ಕೆ ಹಲವಾರು ಬಾರಿ ಒತ್ತಾಯ ಮಾಡಿದರೂ ಇದುವರೆಗೂ ಅನುದಾನ ಬಿಡುಗಡೆಯಾಗದಿರುವುದು ಅತ್ಯಂತ ಖೇದ ಸಂಗತಿ.

ಸರ್ಕಾರ ವಿಶ್ವವಿದ್ಯಾಲಯದ ನಿವೃತ್ತ ನೌಕರರಿಗೆ 2018 ರಿಂದ 2022ರವರೆಗೆ ಬಿಡುಗಡೆ ಮಾಡಬೇಕಾದ ರೂ.107,89,34,754 ಯುಜಿಸಿ 7ನೇ ವೇತನ ಶ್ರೇಣಿಯ ಬಾಕಿ ಉಳಿದ ಮೊತ್ತ ರೂ.1,37,84,254 ವೇತನಕ್ಕಾಗಿ ಪಾವತಿಸಿದ ಹಣ ರೂ.40,95,49,075 ಬಾಕಿ ಅದರಂತೆ ಅತಿಥಿ ಉಪನ್ಯಾಸಕರ ಹಾಗೂ ಹೊರಗುತ್ತಿಗೆ ಸಿಬ್ಬಂದಿ ವೇತನಕ್ಕಾಗಿ ಪಾವತಿಸಿದ ರೂ.35,12,19,454 ಈ ರೀತಿ ಒಟ್ಟು ಸರ್ಕಾರದಿಂದ ರೂ.185,35,07,557 ಬಿಡುಗಡೆಯಾಗಬೇಕಾಗಿರುವುದು.

ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಕನಿಷ್ಠವಾಗಿ ಸಿಬ್ಬಂದಿಯ ಪಿಂಚಣಿ ಹಣ ಹಾಗೂ ವೇತನ ಇವುಗಳಿಗೆ ನೀಡಬೇಕಾದ ಬಾಕಿ ಹಣವನ್ನು ಕಡ್ಡಾಯವಾಗಿ ಬಿಡುಗಡೆ ಮಾಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ ಮತ್ತು ಕರ್ತವ್ಯವಾಗಿರುತ್ತದೆ. ಹೀಗಿರುವಾಗ ಆರ್ಥಿಕ ಇಲಾಖೆ ವಿಳಂಬ ಮಾಡದೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಬಿಡುಗಡೆ ಮಾಡಬೇಕಾದ ರೂ.185 ಕೋಟಿ ಬಾಕಿ ಹಣವನ್ನು ತಕ್ಷಣ ಬಿಡುಗಡೆಗೊಳಿಸಲು ಆರ್ಥಿಕ ಇಲಾಖೆಯನ್ನು ಹೊಂದಿರುವ ಮಾನ್ಯ ಮುಖ್ಯಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಂಕನೂರರವರ ಶೂನ್ಯವೇಳೆ ಪ್ರಸ್ತಾವನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:-** ಈಗ ಸದನವನ್ನು ಮಧ್ಯಾಹ್ನ ೦3 ಗಂಟೆ 3೦ ನಿಮಿಷದವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ ೦2 ಗಂಟೆ ೦4 ನಿಮಿಷಗಳಿಗೆ ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ ೦3 ಗಂಟೆ 3೦ ನಿಮಿಷಗಳಿಗೆ ಸೇರಲು ನಿಶ್ಚಯಿಸಿತು)**

(824) 14-09-2022 (3.40) ಎಂ.ವಿ-ಎಕೆ

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 46 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

<u>೦5. ವರದಿಯನ್ನೊಪ್ಪಿಸುವುದು</u>

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 2020-21ನೇ ಸಾಲಿನ ೦3ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

**ಸಭಾಪತಿಯವರು:-** ವರದಿಯನ್ನು ಒಪ್ಪಿಸಲಾಯಿತು.

೦6. ಸಭೆಯ ಮುಂದಿಡಲಾದ ಕಾಗದಪತ್ರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):-** ಭಾರತದ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಕರ್ನಾಟಕ ರಾಜ್ಯ ನೇರ ನಗದು ವರ್ಗಾವಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ (2022ನೇ ವರ್ಷದ ವರದಿ ಸಂಖ್ಯೆ-2) ಅನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಸಭಾಪತಿಯವರು:-** ಈಗ ನಿಯಮ 68ರ ಅಡಿಯಲ್ಲಿ ಚರ್ಚೆ ಪ್ರಾರಂಭ ಮಾಡೋಣ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಗಮನ ಸೆಳೆಯುವ ಸೂಚನೆ ಮತ್ತು ನಿಯಮ 330ರ ಅಡಿಯಲ್ಲಿ ಚರ್ಚೆ ಇದೆ. ಆದರೆ, ತಾವು ಅದನ್ನು ಬಿಟ್ಟು ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಚರ್ಚೆಯನ್ನು ತೆಗೆದುಕೊಳ್ಳುತ್ತಿದ್ದೀರಿ. ಗಮನ ಸೆಳೆಯುವ ಸೂಚನೆಗೆ ಸರ್ಕಾರದಿಂದ ಇನ್ನು ಉತ್ತರ ಬಂದಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು, ಮಾನ್ಯ ಸಭಾನಾಯಕರನ್ನು ಕೇಳಬೇಕು.

**ಸಭಾಪತಿಯವರು:-** ಗಮನ ಸೆಳೆಯುವ ಸೂಚನೆಗೆ ಇನ್ನು ಉತ್ತರ ಬಂದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಇವತ್ತು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೆವು. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ, ಅಷ್ಟರೊಳಗೆ ಮಂತ್ರಿಗಳನ್ನು ಕರೆಯಿಸಿ ಉತ್ತರ ಕೊಡಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಸಭಾಪತಿಯವರು:-** ಈಗ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 68ರ ಅಡಿಯಲ್ಲಿ ಚರ್ಚೆ ಪ್ರಾರಂಭ ಮಾಡುವುದು.

## ೦7. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಚರ್ಚೆ

**ವಿಷಯ:- ರಾಜ್ಯದಲ್ಲಿ ಇತ್ತೀಚೆಗೆ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿದ್ದು, ರಾಜ್ಯದ ಹೆದ್ದಾರಿ ಮತ್ತು ರಸ್ತೆಗಳು ಕೊಚ್ಚಿಹೋಗಿದ್ದು, ಕೆರೆ ಕೋಡಿಗಳು ಒಡೆದು ಅಪಾರ ಹಾನಿಯುಂಟಾಗಿ ಜನರು ಸಂಕಷ್ಟಕ್ಕೆ ಒಳಗಾಗಿರುವ ಕುರಿತು.**

- - -

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಬಿದ್ದಂತಹ ಬಾರಿ ಮಳೆ ಮತ್ತು ಮಳೆಯಿಂದ ಆಗಿರುವಂತಹ ಪ್ರವಾಹ, ಪ್ರವಾಹದಿಂದ ಭೂಕುಸಿತ ಉಂಟಾಗುತ್ತಿದ್ದು, ಈ ಒಂದು ನೈಸರ್ಗಿಕ ವಿಕೋಪಕ್ಕೆ ಸಿಲುಕಿರುವಂತಹ ಜನರ ಸಂಕಷ್ಟದ ಬಗ್ಗೆ ಮಾತನಾಡಲು ನಿಯಮ 68ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಕರ್ನಾಟಕ ರಾಜ್ಯದ ಜನರು ನತದೃಷ್ಟ ಜನರು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಒಂದು ಕಡೆಯಲ್ಲಿ ಬೆಲೆ ಏರಿಕೆ, ಮತ್ತೊಂದು ಕಡೆಯಲ್ಲಿ ನಿರುದ್ಯೋಗ ಸಮಸ್ಯೆ ಇದೆ. ಇದರ ಮಧ್ಯದಲ್ಲಿ ನೈಸರ್ಗಿಕ ವಿಕೋಪಕ್ಕೆ ಸಿಲುಕಿರುವಂತಹ ಬಡವರ ಪಾಡು ಮತ್ತು ಬಾಳನ್ನು ಯಾರೂ ಸಹ ಕೇಳದೆ ಇರುವಂತಹ ಪರಿಸ್ಥಿತಿಯಾಗಿದೆ. ಬೇಸಿಗೆ ಕಾಲದಲ್ಲೂ ಸಹ ಮಳೆ ಮತ್ತು ಪ್ರವಾಹವನ್ನು ನೋಡಿದ್ದೇವೆ. ತದನಂತರ ಮಳೆಗಾಲದಲ್ಲೂ ಸಹ ನಿರಂತರವಾಗಿ ಮಳೆ ಮತ್ತು ಪ್ರವಾಹ ಇರುವಂಥದ್ದನ್ನು ನೋಡಿದ್ದೇವೆ. ನೈಸರ್ಗಿಕ ವಿಕೋಪಕ್ಕೆ ಯಾವುದೇ ಸರ್ಕಾರವನ್ನು ದೂಷಣೆ ಮಾಡಿದರೆ ಪ್ರಯೋಜನವಿಲ್ಲ. ಆದರೆ, ಅನುಭವದ ಮೇಲೆ ಸರ್ಕಾರದ ಅಧಿಕಾರಿಗಳು ನಿರಂತರವಾಗಿ ಸುಮಾರು 35 ವರ್ಷಗಳ ಕಾಲ ಇರುತ್ತಾರೆ. ಐದು ವರ್ಷದಲ್ಲಿ ರಾಜಕಾರಣಿಗಳು ಬರುತ್ತಾರೆ ಮತ್ತೆ ಬೇರೆಯವರು ಸಹ ಬರಬಹುದು. ಈ ಅನಾಹುತಗಳನ್ನು ತಪ್ಪಿಸುವುದಕ್ಕೆ ಏನಾದರೂ ಮುಂದಾಲೋಚನೆಗಳನ್ನು ಮಾಡಿ, ಕ್ರಮ ಜರುಗಿಸಬಹುದಿತ್ತು ಎಂದು ಎಲ್ಲರಲ್ಲೂ ಸಹ ಒಂದು ಅನಿಸಿಕೆ ಇದೆ.

(ಮುಂದು)

(825) 14.09.2022 03.50 LL-AK (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್(ಮುಂದು)**

ಏಕೆಂದರೆ, ಈಗ ಮೊದಲಿನ ರೀತಿ ಇಲ್ಲ. ಮೊದಲು meteorological laboratory ಗಳಲ್ಲಿ ಮಳೆ ಬರುವುದು, ಇಲ್ಲವಾದರೆ ರೇಡಿಯೋಗಳಲ್ಲಿ ಹವಾಮಾನ ಎಂದು ಹೇಳಿ, ಇಂತಹ ಪ್ರದೇಶಗಳಲ್ಲಿ ಮಳೆ ಬರುವಂತಹ ಮುನ್ಸೂಚನೆ ಇದೆ ಎಂದು ಹೇಳುತ್ತಿದ್ದರು. ಆದರೆ, ಈಗ ನಮ್ಮಲ್ಲಿರುವ ಮೊಬೈಲ್ 'on'

ಮಾಡಿದರೆ, ಗಾಳಿ ಎಷ್ಟು ವೇಗವಾಗಿ ಬರುತ್ತಿದೆ, ಮಳೆ ಎಲ್ಲಿದೆ, ಮೋಡ ಎಲ್ಲಿದೆ ಎನ್ನುವುದು ಅದರಲ್ಲಿಯೇ ಬಂದುಬಿಡುತ್ತದೆ. ಇಷ್ಟೆಲ್ಲಾ ಇದ್ದರೂ ಸಹ ಯಾವುದೇ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳದೇ ಇರುವಂತಹ ಸಂದರ್ಭದಲ್ಲಿ ಇಂತಹ ಒಂದು ಮಳೆ ಅನಾಹುತ ನಡೆದಿರುತ್ತದೆ.

ಇದರಲ್ಲಿ ಸರ್ಕಾರದ ಹೇಳಿಕೆಯನ್ನು ನೋಡಿದಾಗ, ಮಾನ್ಯ ಸಚಿವರ ಪ್ರಕಾರ ಕಳೆದ ಜೂನ್ ತಿಂಗಳಿನಿಂದ ಮಳೆ ಸಂಬಂಧಿತ ಘಟನೆಗಳಿಂದ ಒಟ್ಟು 96 ಜನರ ಪ್ರಾಣ ಹೋಗಿದೆ. 3 ಜನ ನಾಪತ್ತೆಯಾಗಿದ್ದಾರೆ. 96 ಜನ ಮರಣ ಹೊಂದಿರುವವರ ಜೊತೆಗೆ, 3 ಜನ ನಾಪತ್ತೆಯಾಗಿರುವವರನ್ನು ಸೇರಿಸಿಕೊಂಡು ಒಟ್ಟು 99 ಜನರ ಪ್ರಾಣ ಹಾನಿಯಾಗಿದೆ ಮತ್ತು ಸಾಕಷ್ಟು ನಷ್ಟ ಸಹ ಆಗಿರುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಸರ್ಕಾರ ಯಾವ ರೀತಿ ಸ್ಪಂದಿಸುತ್ತದೆ ಎಂದು ಜನಸಾಮಾನ್ಯರು ನೋಡುತ್ತಿರುತ್ತಾರೆ. ವಿರೋಧ ಪಕ್ಷದವರು ಏನು ಮಾಡುತ್ತಾರೆ, ಸರ್ಕಾರದವರು ಏನು ಮಾಡುತ್ತಾರೆಂದು ಜನ ನೋಡುತ್ತಲೇ ಇರುತ್ತಾರೆ. ದುರದೃಷ್ಟವಶಾತ್ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕೊಡಗು ಜಿಲ್ಲೆಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಅವರ ಮೇಲೆ ಮೊಟ್ಟೆ ಎಸೆಯುವಂತಹ ಪ್ರಸಂಗಗಳೆಲ್ಲಾ ನಡೆದು ಹೋಯಿತು. ಇದು ಆಗಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದವರದ್ದೇ ಆದಂತಹ ಜವಾಬ್ದಾರಿ ಇದೆ. ಸರ್ಕಾರಕ್ಕೆ ಅವರದ್ದೇ ಆದಂತಹ ಜವಾಬ್ದಾರಿ ಇದೆ. ನಮ್ಮ ಜವಾಬ್ದಾರಿಯನ್ನು ನಾವು ನಿಭಾಯಿಸುವುದಕ್ಕೆ ಹೋದಾಗ, ಈ ರೀತಿಯ ನಡವಳಿಕೆಗಳು ಸರಿಯಲ್ಲ.

ಮಳೆ ಹಾನಿ ಸಂಬಂಧ, ಸರ್ಕಾರಿ ಇಲಾಖೆಗಳು ನೀಡಿರುವ ಅಂದಾಜಿನ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 9,500 ಕೋಟಿ ರೂಪಾಯಿಗಳ ಹಾನಿ. ಅದರಲ್ಲಿಯೂ ಸಹ, ಆಗಸ್ಟ್ ತಿಂಗಳಿನಿಂದ ಸಂಭವಿಸಿದ ಪ್ರವಾಹದಿಂದ 3,57,426 ಹೆಕ್ಟೇರ್ ಕೃಷಿ ಭೂಮಿಯಲ್ಲಿ ಬೆಳೆ ನಾಶವಾಗಿರುತ್ತದೆ. ಇದರಿಂದಾಗಿ, 5,087.20 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ಅದಲ್ಲದೇ, 52,759 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿ 370 ಕೋಟಿ ರೂಪಾಯಿ ಹಾಗೂ 549 ಕೋಟಿ ರೂಪಾಯಿ ಮೌಲ್ಯದ 50,800 ಹೆಕ್ಟೇರ್ ತೋಟದ ಬೆಳೆ ಹಾನಿಯಾಗಿದೆ. ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿಯೂ ಸಹ 13,573 ಮನೆಗಳು ಹಾನಿಯಾಗಿದೆ. ಅದಕ್ಕೆ ಸರ್ಕಾರದ ಅಂದಾಜು 150 ರಿಂದ 160 ಕೋಟಿ ಮಾಡಿದ್ದಾರೆ. ಅದರಲ್ಲಿ ಕೆಲವು ಮನೆಗಳು ಸಂಪೂರ್ಣವಾಗಿ ನಾಶವಾಗಿದೆ. ಇನ್ನೂ ಕೆಲವು ಮುಕ್ಕಾಲು ಭಾಗ ಬಿದ್ದಿದೆ. ಆದರೂ ಸಹ ನಷ್ಟ ತೋರಿಸುವುದನ್ನು ನೋಡಿದರೆ, ಅದರಲ್ಲಿ ಸರ್ಕಾರದ್ದೇ ಆದಂತಹ ಗೈಡ್‌ಲೈನ್ಸ್ ಇರುತ್ತದೆ. ಉದಾಹರಣೆಗೆ, ಬೆಳೆ ನಾಶ ಎಂದರೆ, ಅದು ಶೇಕಡ 33 ರಷ್ಟು ನಾಶವಾಗಿದ್ದರೆ ಮಾತ್ರ ಅದಕ್ಕೆ ಪರಿಹಾರ ಕೊಡುತ್ತಾರೆ. ಶೇಕಡ 32 ರಷ್ಟು ಹಾನಿ ಎಂದು ಹೇಳಿದರೆ ಅದಕ್ಕೆ ಪರಿಹಾರ ಕೊಡುವುದಿಲ್ಲ. ಆದುದರಿಂದ, ಸರ್ಕಾರದವರು ಜನರಿಗೆ

ಸ್ಪಂದಿಸತಕ್ಕಂತಹ ಕೆಲಸ ಮಾಡಬೇಕು. ನಿಯಮಗಳು ಸಾಕಷ್ಟು ಇರುತ್ತವೆ. ಆದರೆ, ಇಂತಹ ಸಂಕಷ್ಟ ಸಂದರ್ಭದಲ್ಲಿ ಆ ನಿಯಮಗಳನ್ನು ಬೈಪಾಸ್ ಮಾಡಿ ಜನರಿಗೆ ಪರಿಹಾರ ನೀಡಿದರೆ ಏನೂ ತಾಪತ್ರಯ ಆಗುವುದಿಲ್ಲ. ಏಕೆಂದರೆ, ಜನರ ಹಣದಿಂದ ಸರ್ಕಾರ ನಡೆಸುವುದು. ಹಾಗಾಗಿ, ಆ ಹಣ ಜನರಿಗೆ ಹೋದರೆ ಏನೂ ತಪ್ಪಾಗುವುದಿಲ್ಲ.

ಅದಲ್ಲದೇ, ಇವೊತ್ತಿನ ಪ್ರಜಾವಾಣಿ ದಿನಪತ್ರಿಕೆಯನ್ನು ನೋಡಿದಾಗ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ 4 ಜನ ಪ್ರವಾಹಕ್ಕೆ ಸಿಕ್ಕಿ ಸಾವನ್ನಪ್ಪಿರುತ್ತಾರೆ. ಇಷ್ಟೆಲ್ಲಾ ಆದರೂ ಸಹ ಕಳೆದ ಸೆಪ್ಟೆಂಬರ್ ತಿಂಗಳಿನಿಂದ ನಿರಂತರವಾಗಿ ಪ್ರವಾಹ ಆಗುತ್ತಿದ್ದರೂ ಸಹ ನಾವು ಯಾವುದೇ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುತ್ತಿರುವುದಿಲ್ಲ. ಅಲ್ಲದೇ, ಬೆಳಗಾವಿ ಅಥವಾ ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಹ ಹೊಸದೇನಲ್ಲ. ಅಲ್ಲಿ ಪ್ರವಾಹ ಬರುತ್ತದೆಯೆಂದು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳುವುದರಲ್ಲಿ ನಾವು ಹಿಂದೆ ಸರಿದಿದ್ದೇವೆಂದು ನನಗನ್ನಿಸುತ್ತದೆ. ಅದಲ್ಲದೇ, ಪರಿಹಾರ ಹಣ ನೀಡುವ ಬಗ್ಗೆ N.D.R.F. (National Disaster Response Fund) ಮತ್ತು S.D.R.F. (State Disaster Response Fund) ಅವರದ್ದೇ ಆದಂತಹ ಗೈಡ್‌ಲೈನ್ಸ್ ಇರುತ್ತದೆ. 5 ವರ್ಷ ಆಗಿದ್ದರೂ ಸಹ ಇನ್ನೂ ನಾವು ಅದನ್ನು ರಿವೈಸ್ ಮಾಡುವುದಕ್ಕೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಏಕೆಂದರೆ, 5 ವರ್ಷಕ್ಕೊಮ್ಮೆ ಒಂದು ಬಾರಿ ಇದನ್ನು ರಿವೈಸ್ ಮಾಡುತ್ತಾರೆ. 2015 ರಲ್ಲಿ ಇದನ್ನು ರಿವೈಸ್ ಮಾಡಿದ್ದು, ಇದುವರೆವಿಗೂ ರಿವೈಸ್ ಮಾಡಿರುವುದಿಲ್ಲ. ಈ ಸದನದಲ್ಲಿ ಮಾನ್ಯ ಸಭಾನಾಯಕರಿದ್ದಾರೆ. ಆದುದರಿಂದ, ನಾನು ಈ ಸದನದ ಮುಖಾಂತರ ನಾವೇ ಒಂದು ರೆಸಲ್ಯೂಷನ್ ಮಾಡಿ ಪರಿಹಾರ ಹಣವನ್ನು ಆದಷ್ಟು ಬೇಗ ರಿವೈಸ್ ಮಾಡಬೇಕೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕೆಂದು ಹೇಳುತ್ತೇನೆ. ಏಕೆಂದರೆ, 2015ನೇ ಇಸವಿ ಬೇರೆ 2022 ನೇ ಇಸವಿ ಬೇರೆ.

ಅದಲ್ಲದೇ, ಮಳೆಯಿಂದಾಗಿ ಮನೆ ಹಾನಿಯಾಗಿರುವವರಿಗೆ ತತ್‌ಕ್ಷಣ 10 ಸಾವಿರ ರೂಪಾಯಿ ಪರಿಹಾರ ಕೊಟ್ಟಿರುತ್ತಾರೆ. ಅದು ಎಷ್ಟು ಜನಕ್ಕೆ ಕೊಟ್ಟಿದ್ದಾರೆ. ಅದು ಗೊತ್ತಿರುವುದಿಲ್ಲ. ಅದರಲ್ಲಿ ಕೆಲವು ಜನರಿಗೆ ಹೋಗಿದೆ, ಇನ್ನು ಕೆಲವರಿಗೆ ಹೋಗಿರುವುದಿಲ್ಲ. (ಗೊಂದಲ) ಕೊಟ್ಟಿದ್ದರೆ ಬಹಳ ಸಂತೋಷ. ಕೆಲವರಿಗೆ 5 ಸಾವಿರ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಹುಬ್ಬಳ್ಳಿ ಏರ್‌ಪೋರ್ಟ್‌ನಲ್ಲಿದ್ದಾಗ, ಈ ಬಗ್ಗೆ ಹೇಳಿಕೆ ನೀಡಿರುತ್ತಾರೆ. 5 ಸಾವಿರ ರೂಪಾಯಿ ಪರಿಹಾರ ಹಣ ಕೊಟ್ಟಿರುವುದನ್ನು ನಾನು ವಿಚಾರಣೆ ಮಾಡಿ, ಸರಿ ಮಾಡುತ್ತೇನೆಂದು ಹೇಳಿರುತ್ತೇನೆ. ಅದಕ್ಕಾಗಿ, ಒಂದು ಯೂನಿಫಾರ್ಮ್ ಆಗಿರತಕ್ಕಂತಹ ಪರಿಹಾರವನ್ನು ಎಲ್ಲರಿಗೂ ಕೊಡಬೇಕೆಂದು ಮಾನ್ಯ ಸಭಾಪತಿಯವರ

ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಸರ್ಕಾರ ಕೊಟ್ಟಿರುವಂತಹ ಅಂಕಿ-ಅಂಶಗಳಲ್ಲಿಯೂ ಸಹ ಕೆಲವು ಗೊಂದಲ ಇರುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ತುಂಬಾ ವಿಚಾರಗಳನ್ನು ಮುಂದಿಟ್ಟುಕೊಂಡು, ಅಧ್ಯಯನ ಮಾಡಿ, ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದಾರೆ. ಸಹಜವಾದಂತಹ ಟೀಕೆ-ಟಿಪ್ಪಣಿಗಳನ್ನು ನಾವು ಸಹಿಸಬೇಕು. ಅದರಲ್ಲಿ ಬೇರೆ ದಾರಿ ಇಲ್ಲ. ಅವರು ಹೇಳಿದ್ದು, "ಮನೆ ಹಾನಿಯಾಗಿರುವವರಿಗೆ 5 ಸಾವಿರ ಪರಿಹಾರ ಹಣ ಕೊಟ್ಟಿರುವುದನ್ನು ಮಾನ್ಯ ಮುಖ್ಯಮಂತ್ರಿಗಳು ಅದನ್ನು ಸರಿಪಡಿಸುತ್ತೇನೆಂದು ಹೇಳಿದ್ದಾರೆ" ಎಂದು ಹೇಳಿರುತ್ತಾರೆ. ಮಳೆಯಿಂದ ಹಾನಿಗೊಳಗಾದ ಮನೆಗಳಿಗೆ ಒಟ್ಟು ಮೂರು ವಿಧದ ಪರಿಹಾರಗಳನ್ನು ಅಧಿಕೃತವಾಗಿ ಕೊಡುತ್ತಿದ್ದೇವೆ. ಅದರಂತೆ, ಒಂದು ಮನೆಗೆ ನೀರು ನುಗ್ಗಿದರೆ, ಅದರಲ್ಲಿ ಏನಾಗಿದೆ ಎನ್ನುವ ಪ್ರಶ್ನೆ ಇರುವುದಿಲ್ಲ. ಬದಲಾಗಿ, ನೀರು ನುಗ್ಗಿದೆ ಎನ್ನುವಂತಹ ಪ್ರಾಥಮಿಕ ವರದಿಗೆ 10 ಸಾವಿರ ರೂಪಾಯಿ ಹಣವನ್ನು ಸಂಬಂಧಪಟ್ಟವರ ಬ್ಯಾಂಕ್ ಖಾತೆಗೆ ಹಾಕುವಂತಹ ವ್ಯವಸ್ಥೆ ಮಾಡಿದ್ದೇವೆ ಮತ್ತು ಉಳಿದಿದ್ದು ಎಷ್ಟು ನಷ್ಟವಾಗಿದೆ ಎಂಬುದನ್ನು ವರದಿ ಬಂದ ನಂತರ ನೋಡುತ್ತೇವೆ. ಯಾವುದಾದರೂ ಗೋಡೆಯ ಒಂದು ಭಾಗ ಬಿದ್ದರೂ ಸಹ ಅಂತಹ ಮನೆಗಳಿಗೆ 50 ಸಾವಿರ ರೂಪಾಯಿ ಪರಿಹಾರವನ್ನು ನೀಡುತ್ತೇವೆ. ಪೂರ್ಣ ಮನೆ ಅಥವಾ ಶೇಕಡ 75ಕ್ಕಿಂತಲೂ ಹೆಚ್ಚು ಮನೆ ಬಿದ್ದರೆ ಅವರ ಬ್ಯಾಂಕ್ ಖಾತೆಗೆ 95 ಸಾವಿರ ರೂಪಾಯಿ ಪರಿಹಾರವನ್ನು ನಗದಾಗಿ ಹಾಕಿ, ಮನೆ ಕಟ್ಟುವುದಕ್ಕೆ ಅಧಿಕೃತ ಆದೇಶ ಮಾಡಿಕೊಡುತ್ತೇವೆ. ಇದು ಸರ್ಕಾರದ ಒಟ್ಟು ಗೈಡ್‌ಲೈನ್ಸ್ ಆಗಿರುತ್ತದೆ. ಇದರಲ್ಲಿ ಒಂದು ವೇಳೆ ಏನಾದರೂ ಲೋಪಗಳಾಗಿದ್ದು, ಅದನ್ನು ಹೇಳಿದರೆ, ನಾವು ಅದನ್ನು ಸರಿಪಡಿಸುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ಟೀಕೆ ಮಾಡಬೇಕೆಂದು ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ನೀಡಿರುವುದನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಟೀಕೆ ಮಾಡುವುದಕ್ಕೂ ಸಹ ಹಕ್ಕು ಇರುತ್ತದೆ. ಟೀಕೆ ಮಾಡುವ ಉದ್ದೇಶ ಕೂಡ ಸರ್ಕಾರವನ್ನು ಸರಿ ದಾರಿ ತರುವುದು. ನಾವು ಅದನ್ನು ಸ್ವಾಗತ ಮಾಡುತ್ತೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಟೀಕೆ ಮಾಡುವ ಜಾಗದಲ್ಲಿ ಟೀಕೆ ಮಾಡೋಣ.

**ಸಭಾಪತಿಯವರು:-** ಒಂದು ವೇಳೆ ವಿರೋಧ ಪಕ್ಷದ ನಾಯಕರು ಟೀಕೆ ಮಾಡಿದರೂ ಸಹ ಅದನ್ನು ಸಲಹೆ ರೂಪದಲ್ಲಿ ಸ್ವೀಕಾರ ಮಾಡಿ. ಅದರಲ್ಲಿ ಏನೂ ತಪ್ಪಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮೂಲಭೂತ ಸೌಕರ್ಯಗಳು ಏನಿವೆ, ಅದನ್ನು ನೋಡಿದಾಗ 21,173 ಕಿಲೋ ಮೀಟರ್ ರಸ್ತೆ ಹಾನಿಯಾಗಿರುತ್ತದೆ. ಅದಲ್ಲದೇ, ರಾಜ್ಯ ಹೆದ್ದಾರಿಗಳಲ್ಲಿ ನೋಡಿದಾಗ 3,546 ಕಿಲೋ ಮೀಟರ್ ಮತ್ತು 15,985 ಕಿಲೋ ಮೀಟರ್ ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ರಸ್ತೆಗಳು ಕಣ್ಮರೆಯಾಗಿರುತ್ತವೆ. ನಗರ ಪ್ರದೇಶಗಳಲ್ಲಿರತಕ್ಕಂತಹ 1,642 ಕಿಲೋ ಮೀಟರ್ ರಸ್ತೆಗಳು, ಸೇತುವೆಗಳು 2,758 ಹಾನಿಯಾಗಿರುತ್ತವೆ. 786 ಸಣ್ಣ ನೀರಾವರಿ ಕಾಲುವೆಗಳು, 503 ಮಾನವ ನಿರ್ಮಿತ ಟ್ಯಾಂಕ್‌ಗಳು, 2,669 ಸರ್ಕಾರಿ ಕಟ್ಟಡಗಳು, 118 ನೀರು ಸರಬರಾಜು ಪೈಪುಗಳು ಮತ್ತು 2119 ನೀರು ಸರಬರಾಜು ಪೈಪುಗಳು ಈ ವರ್ಷದ ಪ್ರವಾಹದಿಂದಾಗಿ ಹಾನಿಯಾಗಿರುತ್ತವೆ. ಇದರಿಂದಾಗಿ, ಸಂಪೂರ್ಣವಾಗಿ ನಷ್ಟವಾಗಿರುವುದನ್ನು ಸರ್ಕಾರದ ಅಂಕಿ-ಅಂಶಗಳಲ್ಲಿ ನೋಡಿದಾಗ 3,261 ಕೋಟಿ ರೂಪಾಯಿ ನಷ್ಟವಾಗಿರುತ್ತದೆ. ಇವೆಲ್ಲದಕ್ಕೂ ಹಣ N.D.R.F. ಅಥವಾ S.D.R.F. ನಿಂದ ಶೇಕಡ 75 ರಷ್ಟು ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಶೇಕಡ 25 ರಷ್ಟು ಬರುತ್ತದೆ.

ಕೆಲವು ಮಾನ್ಯ ಮಂತ್ರಿಗಳು ಪ್ರವಾಹ ಪ್ರದೇಶಗಳಲ್ಲಿ ಪ್ರವಾಸ ಮಾಡಿಕೊಂಡು ಬಂದಿರುತ್ತಾರೆ. Inter-Ministerial Team visit ಮಾಡುವುದಕ್ಕೆ ನಾವು ಕೋರಿದ್ದೇವೆಂದು ನಾನು ಯಾವುದೋ ದಿನಪತ್ರಿಕೆಯಲ್ಲಿ ಓದಿರುತ್ತೇನೆ. "ಅಲ್ಲಾ ಸ್ವಾಮಿ!, ಸಾಮಾನ್ಯವಾಗಿ ಜನ ಸಂಕಷ್ಟದಲ್ಲಿದ್ದಾಗ, ಮಾನ್ಯ ಗೃಹ ಮಂತ್ರಿಗಳು ಅಥವಾ ಮಾನ್ಯ ಪ್ರಧಾನ ಮಂತ್ರಿಗಳು aerial survey ಆದರೂ ಮಾಡುತ್ತಾರೆ. ನಿರಂತರವಾಗಿ ಪ್ರವಾಹ ಬಂದಾಗ ಮಾನ್ಯ ಪ್ರಧಾನ ಮಂತ್ರಿಗಳು ಯಾವತ್ತೂ ಸಹ aerial survey ಮಾಡುವುದಕ್ಕೆ ನಮ್ಮ ರಾಜ್ಯಕ್ಕೆ ಬಂದಿರುವುದಿಲ್ಲ. ಆದರೆ, ಮಾನ್ಯ ಗೃಹ ಮಂತ್ರಿಗಳು ಒಂದು ಬಾರಿ ಬಂದು, ಒಂದೆರಡು ಜಾಗ ನೋಡಿಕೊಂಡು ಹಾಗೆಯೇ ಹೋದರು. ಇದರಿಂದಾಗಿ, ಎಲ್ಲಿಯೋ ಒಂದು ಕಡೆ ತಾರತಮ್ಯ ಇದೆ ಎಂದು ನಮಗನ್ನಿಸುತ್ತದೆ. ಕರ್ನಾಟಕ ರಾಜ್ಯ ಒಳ್ಳೆಯ ಫಲಿತಾಂಶಗಳನ್ನು ಕೊಟ್ಟಿರುತ್ತದೆ. 25 ಜನರನ್ನು ಲೋಕಸಭೆಗೆ ಕಳುಹಿಸಿದೆ, 12 ಜನರನ್ನು ರಾಜ್ಯಸಭೆಗೆ ಕಳುಹಿಸಿದ್ದಾರೆ. ಅದಕ್ಕಾದರೂ ಸಹ, ಮಾನ್ಯ ಪ್ರಧಾನ ಮಂತ್ರಿಗಳು ಒಂದು ಬಾರಿ ನಮ್ಮ ರಾಜ್ಯಕ್ಕೆ ಬಂದು, ಮೇಲೆ ಹಾರಿಕೊಂಡು ಹೋಗಿದ್ದರೆ ಚೆನ್ನಾಗಿರುತ್ತಿತ್ತು. ಅದಲ್ಲದೇ, ಪರಿಸ್ಥಿತಿ ಹೇಗಿದೆ ಎಂದು ಹೇಳದರೆ, ಇತ್ತೀಚೆಗೆ ಮಾನ್ಯ ಪ್ರಧಾನ ಮಂತ್ರಿಗಳು ಮಂಗಳೂರಿಗೆ ಬಂದಿದ್ದರು.

ಮಂಗಳೂರು ತಮ್ಮ ಊರು, ಒಂದು ರೀತಿ ನಮ್ಮ ಊರು ಸಹ ಹೌದು. Desalination Plant ಲೋಕಾರ್ಪಣೆ ಕಾರ್ಯಕ್ರಮಕ್ಕೆ ಮಾನ್ಯ ಪ್ರಧಾನ ಮಂತ್ರಿಗಳು ಬಂದಿದ್ದರು. ಅದು ಸುಮಾರು 600 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಅದು. ನನಗೆ ಸ್ವಲ್ಪ ಬುದ್ಧಿ ತಿಳಿದಿರುವುದರಿಂದ (ಗೊಂದಲ) ಮಂಗಳೂರು ಮತ್ತು ಉಡುಪಿ ಜಿಲ್ಲೆ ಸೇರಿದರೆ ಅಲ್ಲಿ ಸುಮಾರು 44 ದೊಡ್ಡ ಮತ್ತು ಸಣ್ಣ ನದಿಗಳು ಹರಿಯುತ್ತವೆ. ಶರಾವತಿ ನದಿಯಿಂದ ನೀರು discharge ಮಾಡುತ್ತಾರಲ್ಲಾ, ಅದರಿಂದ ಸುಮಾರು 2 ಸಾವಿರ ಟಿ.ಎಂ.ಸಿ. ನೀರು ಸಮುದ್ರಕ್ಕೆ ಬರುತ್ತದೆ. ನಾವು ಸುಮಾರು 600 ಕೋಟಿ ರೂಪಾಯಿ ಹಣ ಖರ್ಚು ಮಾಡಿ, ಒಂದು ಟಿ.ಎಂ.ಸಿ. ನೀರನ್ನು desalination ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ, ಸಮುದ್ರದ ನೀರನ್ನು ಕುಡಿಯಲು ಯೋಗ್ಯವಾಗುವ ಹಾಗೆ ಮಾಡತಕ್ಕಂಥ ಯೋಜನೆ ಅದು.

(ಮುಂದು)

(826) 14.09.2022 4.00 ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು)**

ಏತಕ್ಕೆ ಬೇಕು? ಹಣ ಇಲ್ಲ. ಮನೆಗಳು ನೆಲಸಮಗೊಂಡಿದ್ದು ಅದನ್ನು ಪರಿಹರಿಸಲು ಹಣ ಇಲ್ಲ, ರಸ್ತೆಗಳು ಹಾಳಾಗಿವೆ, ಹಣ ಇಲ್ಲ. ಅದರಲ್ಲಿಯೂ ದುರಂತದ ವಿಚಾರವೇನೆಂದರೆ, ಪ್ರಧಾನ ಮಂತ್ರಿಗಳು ಬರುತ್ತಿದ್ದಾರೆ ಎಂದು ರಸ್ತೆ ದುರಸ್ತಿ ಮಾಡಿದರು. ಪ್ರಧಾನ ಮಂತ್ರಿಗಳು ಬಂದು ಹೋದ ಮೇಲೆ ಮಳೆ ಬಂದು ಎಲ್ಲಾ ರಸ್ತೆಗಳು ಮತ್ತೆ ಕಿತ್ತುಕೊಂಡು ಹೋಗಿತ್ತು. ವಿರೋಧ ಪಕ್ಷದವರು ಸರ್ಕಾರಕ್ಕೆ ಶೇಕಡಾ 40 ರಷ್ಟು ಭ್ರಷ್ಟಾಚಾರ ಸರ್ಕಾರದಲ್ಲಿ ಇದೆ ಎಂದು ಹೇಳಿದರೆ ಅವರೆಲ್ಲರೂ ಸಿಟ್ಟು ಮಾಡಿಕೊಳ್ಳುತ್ತಾರೆ. ಆದರೆ, ಇಂತಹ ಸಮಸ್ಯೆ ಏತಕ್ಕೆ ಆಗುತ್ತಿದೆ ಎಂಬುದನ್ನು ಯಾರು ಸಹ ನೋಡುತ್ತಿಲ್ಲ. ನನಗೆ ಬುದ್ಧಿ ಬಂದಾಗಿನಿಂದ ಭ್ರಷ್ಟಾಚಾರ ಎನ್ನುವುದು ಎಲ್ಲಾ ಕಡೆ ಇದೆ. ಆದರೆ, ಕರಾವಳಿ ಪ್ರದೇಶದಲ್ಲಿ ಕಡಿಮೆ ಇದ್ದು, ಅಲ್ಲಿಯೂ ಇಂತಹ ರೋಗ ಬಂದಿದೆ ಎಂದರೆ, ಎಲ್ಲಿಯೋ ಒಂದು ಕಡೆ ವ್ಯವಸ್ಥೆಯಲ್ಲಿ ಏನೋ ತಪ್ಪಾಗಿದೆ. ಅದನ್ನು ಸರಿಪಡಿಸಿಕೊಂಡು ಹೋಗಬೇಕು. ಕೊಡಗು ಜಿಲ್ಲೆ ಬಗ್ಗೆ ಹೇಳುವುದಾದರೆ, ಯಾವಾಗ ಮಳೆ ಬಂದರೂ ಭೂಕುಸಿತವಾಗುತ್ತಿದೆ. ಶ್ರೀ ಪಂಡಿತ್ ಜವಾಹಾರಲಾಲ್ ನೆಹರೂರವರು 'Kashmir of South India' ಎನ್ನುವಂಥ ಮಾತನ್ನು ಹೇಳಿದ್ದಾರೆ. ಅಂತಹ ಸುಂದರವಾದ ಜಿಲ್ಲೆಯಲ್ಲಿ ಇಷ್ಟೆಲ್ಲಾ ಅನಾಹುತ ನಡೆದರೂ ಯಾವುದೇ ಸಚಿವರು ಹೋಗಲು ತಯಾರಿಲ್ಲ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಕೊಡಗು ಜಿಲ್ಲೆಗೆ ಹೋಗಿದ್ದೇನೆ.

**ಶ್ರೀ ಬಿ.ಸಿ.ನಾಗೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳನ್ನು ಹೊರತುಪಡಿಸಿ, ಎಲ್ಲಾ ಸಚಿವರು ಕೊಡಗು ಜಿಲ್ಲೆಗೆ ಹೋಗಿದ್ದಾರೆ.

**ಶ್ರೀ ಸಿ.ಸಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಹೋಗಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾರೆ. ಡಿ.ಸಿ. ಕಛೇರಿಯಲ್ಲಿ review meeting ಸಹ ಮಾಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಹಾಗಾದರೆ, ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

**ಶ್ರೀ ಬಿ.ಸಿ.ನಾಗೇಶ್:–** ಮಾನ್ಯ ಸಭಾಪತಿಯವರೇ, ನಾನು ನಾಲ್ಕು ಸಲ ಕೊಡಗಿಗೆ ಭೇಟಿ ನೀಡಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವರು ಯಾವ ಕಾರಣಕ್ಕಾಗಿ ಹೋಗಿದ್ದಾರೆ ಎಂಬುದು ನನಗೆ ಗೊತ್ತು.

**ಶ್ರೀ ಬಿ.ಸಿ.ನಾಗೇಶ್:–** ಮಾನ್ಯ ಸಭಾಪತಿಯವರೇ, ನಾನು in charge Minister ಆಗಿದ್ದೆನು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಹೌದು. ನಾನು ಅದಕ್ಕಾಗಿಯೇ ಮಾನ್ಯ ಬಿ.ಸಿ.ನಾಗೇಶ್‌ರವರು ಯಾವ ಕಾರಣಕ್ಕಾಗಿ ಹೋಗುತ್ತಾರೆ ಎಂಬುದು ನನಗೆ ಗೊತ್ತಿದೆ ಎನ್ನುವಂಥ ಮಾತನ್ನು ಹೇಳಿದ್ದು. ಹಾಗಾಗಿ, ಕೊಡಗಿನಲ್ಲಿ ನಿರಂತರವಾಗಿ ಕಾಡಾನೆ ಹಾವಳಿ, ಭೂಕುಸಿತ, ಮಳೆ ಆಗುತ್ತಿದೆ. ಇವೆಲ್ಲದರ ಮಧ್ಯೆ ಅಲ್ಲಿ ಪರಿಹಾರ ಸಿಗುವಂಥ ಕೆಲಸವಾಗಿಲ್ಲ. ಏಕೆಂದರೆ, ನಾನು ಕೊಡಗಿಗೆ 3 ತಿಂಗಳಿಗೊಮ್ಮೆ ಹೋಗುತ್ತಿರುತ್ತೇನೆ. ಈಗಾಗಲೇ ಕೊಡವ ಭಾಷೆ ಮೇಲೆ ಬಹಳಷ್ಟು ಕೆಲಸಗಳನ್ನು ಮಾಡಿದ್ದೇವೆ ಹಾಗೂ ಕೊಡವ tribals ಗೆ ಏನಾದರೂ ಸಿಗಬೇಕೆಂದು ನಿರಂತರವಾಗಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅಲ್ಲಿನ ಜನರು ಏತಕ್ಕೆ ನಮ್ಮನ್ನು ಇಷ್ಟೊಂದು ಕಡೆಗಣಿಸುತ್ತೀರಿ ಎಂದು ಅಳುತ್ತಿದ್ದಾರೆ. ಸ್ವತಂತ್ರ ಪೂರ್ವದಲ್ಲಿ ಆ ಜಿಲ್ಲೆಯೂ 'C' State ಆಗಿತ್ತು. 'C' State ಎಂದರೆ ಐದಾರು ರಾಜ್ಯಗಳು 'C' States ಆಗಿದ್ದವು. C.M. Poonacha ಅವರು ಅದರ ಮುಖ್ಯಮಂತ್ರಿಯಾಗಿದ್ದರು. ಎರಡೇ constituency ಇದ್ದರೂ ಸಹಿತ C.M. Poonacha ರವರು ಕೊಡಗಿನ ಮುಖ್ಯಮಂತ್ರಿಯಾಗಿದ್ದರು. 1956ರಲ್ಲಿ ಏಕೀಕರಣವಾದ ನಂತರ ಕರ್ನಾಟಕದೊಂದಿಗೆ ಆ ಜಿಲ್ಲೆಯನ್ನು ಸೇರಿಸಿಕೊಳ್ಳಲಾಯಿತು. ಇಲ್ಲದಿದ್ದರೆ ಕೊಡಗು ಜಿಲ್ಲೆಯೂ Madras Presidency ಗೆ ಬರುತ್ತಿತ್ತು. ಆದರೆ, ಆ ಜಿಲ್ಲೆಗೆ ನೀಡುವಂಥ ಗೌರವ ಏನೆಂಬುದನ್ನು ನಾವು ನೋಡಬೇಕಲ್ಲವೇ? ದೇಶದ ಇಬ್ಬರು ಮಹಾನ್ ದಂಡನಾಯಕರು Field Marshal Cariappa ಮತ್ತು ಜನರಲ್ ತಿಮ್ಮಯ್ಯ ಇರಬಹುದು. ಅಲ್ಲಿ ಸಿಕ್ಕಾಪಟ್ಟೆ Brigadiers ಇದ್ದಾರೆ.

ಆದರೆ, ಆ ಜಿಲ್ಲೆಗೆ ಏನು ಮಾಡುತ್ತಿದ್ದೇವೆ ಎನ್ನುವುದನ್ನು ಯೋಚನೆ ಮಾಡುತ್ತಿಲ್ಲ ಅಲ್ಲವೇ? ಅದರಲ್ಲಿಯೂ ಕೊಡಗು ಜಿಲ್ಲೆಯೂ ಒಳ್ಳೆಯ ರೆವಿನ್ಯೂ ಇರುವಂಥದ್ದಾಗಿದೆ. ಕಾಫಿ, ಏಲಕ್ಕಿ, ಮೆಣಸು ಎಲ್ಲವನ್ನೂ ಬೆಳೆಯುವಂಥ ಭಾಗದಲ್ಲಿ,....

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, all commercial crops ಇರುವಂಥದ್ದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹೌದು. all commercial crops ಮತ್ತೆ ಕೊಡಗು ಕಮರ್ಷಿಯಲ್ ಆಗಿಲ್ಲ. ಇವತ್ತಿಗೂ ಜೀವಂತವಾಗಿದೆ. ಅದೊಂದು ಪ್ರವಾಸಿಗರ ತಾಣವಾಗಿದೆ. ಚಿಕ್ಕಮಗಳೂರಿನಿಂದ ಕೊಡಗು ಜಿಲ್ಲೆಗೆ ಮಾನ್ಯ ಭೋಜೇಗೌಡರು ಹೋದರೆ ಗೊತ್ತಾಗುತ್ತದೆ. ಆದ್ದರಿಂದ ಕೊಡಗು ಜಿಲ್ಲೆಯನ್ನು ನಿರ್ಲಕ್ಷ್ಯ ಮಾಡುವುದು ಸರಿಯಿಲ್ಲ. ಎಲ್ಲಾ ರೀತಿಯಲ್ಲಿ ಪರಿಹಾರ ನೀಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ಧಾರಾಕಾರ ಮಳೆಯಾಗಿ ಈಗ ನಿಂತಿದೆ. ಅಲ್ಲಿ ಸುಮಾರು 32 ಕಿರು ಸೇತುವೆಗಳು ಮುಳುಗಡೆಯಾಗಿವೆ. ನಾಲ್ವರು ಯುವಕರ ಸಾವಾಗಿದೆ. ಇವತ್ತಿಗೂ 03 ಜಿಲ್ಲೆಗಳಲ್ಲಿ yellow alert ಇದೆ. ಜಲಾಶಯಗಳ ಮಟ್ಟ ನೋಡಿದಾಗ ಎಲ್ಲದರಲ್ಲಿಯೂ ಡೇಂಜರ್ ಮಾರ್ಕ್‌ನಲ್ಲಿದೆ. ಕೊಯ್ನಾ ಡ್ಯಾಂನಿಂದ ನೀರನ್ನು ಬಿಟ್ಟರೆ ಕೃಷ್ಣಾ ನದಿಗೆ ಬಂದು ಆಲಮಟ್ಟಿ ಜಲಾಶಯವು ತುಂಬಿದ್ದು, ಪ್ರವಾಹವಾಗಬಹುದೆಂಬ ಭಯ ಅಲ್ಲಿನ ಜನರಿಗೆ ಇರುವುದರಿಂದ ಮುಂಜಾಗ್ರತಾ ಕ್ರಮವಹಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ. ಏಕೆಂದರೆ, ನಮ್ಮಲ್ಲಿ ಬಹಳ ಮಂದಿ ಈ ವಿಚಾರವಾಗಿ ಮಾತನಾಡುವವರು ಇದ್ದು, ಉಳಿದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅವರು ಮಾತನಾಡುತ್ತಾರೆ.

ಅದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಜೋರಾಗಿ ಇದ್ದು, ಮಳೆಗಾಲ ಬಂದರೆ ಮನೆಯಿಂದ ಹೊರಗೆ ಬರುವುದೇ ಕಷ್ಟವಾಗಿದೆ. ಜುಲೈ ಮಾಹೆಯಲ್ಲಿ ಭಾರಿ ಮಳೆ ಬಂದ ಪ್ರಯುಕ್ತ ಉಳ್ಳಾಲದಲ್ಲಿ ಕಡಲ ಕೊರೆತವಾಗಿತ್ತು. ಅದರ ಬಗ್ಗೆ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೂ ಗೊತ್ತಿದೆ. ಅದೇ ರೀತಿ ಸುರತ್ಕಲ್‌ನ ಅದ್ಯಾಪಾಡಿಯಲ್ಲಿ ಮೀನಿನ ಮಾರುಕಟ್ಟೆ ಇದ್ದು, ಸಂಪೂರ್ಣವಾಗಿ ಜಲಸಮಗೊಂಡಿದೆ. ಅದರ ಜೊತೆಗೆ ಕಣ್ಣೂರು ಎಂಬ ಊರು ಗುಡ್ಡದ ಮೇಲೆ ಇದ್ದು, 2 ವರ್ಷಗಳ ಹಿಂದೆ 24 ಮನೆಗಳು ಕುಸಿದಿತ್ತು ಮತ್ತು ನಾಲ್ಕು ಮಂದಿ ಮರಣ ಹೊಂದಿದ್ದರು. ಸರ್ಕಾರದವರು ಆ ನಾಲ್ಕು ಜನರಿಗೆ ತಲಾ ರೂ.5.00 ಲಕ್ಷದಂತೆ ಪರಿಹಾರ ನೀಡಿದ್ದಾರೆ. ಎರಡು ವರ್ಷಗಳು ಕಳೆದರೂ ಅಲ್ಲಿ ಇನ್ನೂ ಒಂದೇ ಒಂದು ಮನೆಯನ್ನು ನಿರ್ಮಿಸಿಲ್ಲ. ಅಲ್ಲಿ ಸಹ ತಾರತಮ್ಯ ಬಹಳ ನಡೆಯುತ್ತಿದೆ. ಬೆಳಗ್ಗೆ ಕಣ್ಣೂರು ಹತ್ತಿರ ಭೂ ಕುಸಿತ ಎಂದು ಒಬ್ಬ

ಸದಸ್ಯರು ಪ್ರಶ್ನೆಯನ್ನು ಕೇಳಿದಾಗ, ಅದಕ್ಕೆ ಮಾನ್ಯ ಸಚಿವರು "ಪ್ರವಾಹದಿಂದ ಬೆಟ್ಟದ ಅಡಿಗೆ ನೀರು ಬಂದಾಗ ಸಡಿಲಗೊಂಡು ಭೂ ಕುಸಿತವಾಗುತ್ತದೆ" ಎಂದು ಉತ್ತರವನ್ನು ನೀಡುತ್ತಿದ್ದರು. ಆದರೆ, ಅದು ನಿಜವಲ್ಲ. ಮೇಲಿರುವ ಬೆಟ್ಟವನ್ನು ಕಡಿದು ಮನೆಯನ್ನು ನಿರ್ಮಿಸಿದಾಗ ಸಡಿಲಗೊಂಡು ಭೂ ಕುಸಿತವಾಗಲು ಶುರುವಾಗುತ್ತದೆ. ಅದರ ಮೇಲೆ ಒಳ್ಳೆಯ ಟಾರ್ಪಾಲ್ ಹಾಕಿ ಬಿಟ್ಟಿದ್ದಾರೆ. ಏಕೆ ಟಾರ್ಪಾಲ್ ಹಾಕಲಾಗಿದೆ ಎಂದು ಕೇಳಿದರೆ, ಬೆಟ್ಟದ ಅಡಿಗೆ ನೀರು ಹೋಗಬಾರದು ಎಂದು ಹಾಕಿದ್ದೇವೆ ಎಂದು ಹೇಳುತ್ತಾರೆ. ಆದ್ದರಿಂದ ಅಲ್ಲಿ ಬೆಳೆ ನಾಶವಾಗಿದೆ. ಕಳೆದ ವರ್ಷ ಮಳೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಮಂಗಳೂರು ಜಿಲ್ಲೆಗೆ ಭೇಟಿ ನೀಡಿದಾಗ ರೂ.200.00 ಕೋಟಿ ಪರಿಹಾರ ನೀಡಿದ್ದೇನೆ ಎಂದು ಹೇಳಿದರು. ಆದರೆ, ಅಲ್ಲಿ ರೂ.20.00 ಕೋಟಿ ಸಹ ಹಣ ಬಂದಿಲ್ಲ. ಈ ಸಲ ಸಹ ಹೋಗಿದ್ದು, ಪರಿಹಾರ ನೀಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ಎಷ್ಟು ಪರಿಹಾರ ಹಣವನ್ನು ನೀಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಗೆ ರೂ.200.00 ಕೋಟಿ ಪರಿಹಾರ ನೀಡಿದ್ದು, ನಾನು ಅಲ್ಲಿಯ ಉಸ್ತುವಾರಿ ಸಚಿವನಾಗಿದ್ದು, ಕಾಮಗಾರಿ ನಡೆಯುತ್ತಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲೆಯಲ್ಲಿ ಕಡಲ ಕೊರೆತ ಆದಾಗ ರಾತ್ರಿ ವೇಳೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದು, ಆಗ ಪರಿಹಾರ ಹಣವನ್ನು ಘೋಷಣೆ ಮಾಡಿದರು. ಅದು ಕಳೆದ ವರ್ಷ ಹೇಳಿದ್ದು, ಇವತ್ತಿಗೂ ಪರಿಹಾರ ಹಣ ಬಂದಿಲ್ಲ. ಅದನ್ನು ಆದಷ್ಟು ಬೇಗ ಕೊಡಿಸಬೇಕು. ಎಲ್ಲರಿಗೂ ಆಶ್ರಯ ನೀಡುವಂಥ ನಮ್ಮ ಊರಾದ ಬೆಂಗಳೂರು ಏನಿದೆ, it is a city of opportunities. ಮೊದಲು ಗಾರ್ಡನ್ ಸಿಟಿ, pensioners' paradise ಎಂದು ಕರೆಯಲಾಗುತ್ತಿತ್ತು. ನಂತರ ಇತಿಹಾಸಕ್ಕೆ ಹೋದಾಗ ಸಿಲ್ಕ್ ಸಿಟಿ ಆಗಿತ್ತು. ತದನಂತರ ಡಾ॥ ಸಿ.ವಿ.ರಾಮನ್ ಬಂದ ಮೇಲೆ "ಸೈನ್ಸ್ ಸಿಟಿ" ಎಂದಾಗಿತ್ತು. ಶ್ರೀ ಎಂ.ವಿ.ಕೃಷ್ಣಪ್ಪನವರು ಎಂ.ಪಿ. ಆದ ಬಳಿಕ "ಮಿಲ್ಕ್ ಸಿಟಿ" ಆಯಿತು. 1985 ರಲ್ಲಿ ರಾಜೀವ್ ಗಾಂಧಿಯವರು ಅಧಿಕಾರಕ್ಕೆ ಬಂದ ಮೇಲೆ ಮಾಹಿತಿ ತಂತ್ರಜ್ಞಾನ ಪ್ರಾರಂಭ ಮಾಡಿದ ಮೇಲೆ ಸಿಲಿಕಾನ್ ಸಿಟಿ ಎಂದು ಹೆಸರನ್ನು ಮಾರ್ಪಡಿಸಲಾಯಿತು. ಬೆಂಗಳೂರು ನಗರದಲ್ಲಿ silk to silicon ಬಹಳ ದೂರ ಬಂದಿದ್ದೇವೆ. ಬೆಂಗಳೂರು ನಗರವು ಏನಾದರೂ ವಿಶ್ವವಿಖ್ಯಾತವಾಗಿರುವುದಕ್ಕೆ ಎಲ್ಲರೂ ಸಹ contribute ಮಾಡಿದ್ದಾರೆ. ಶ್ರೀ ಸಿ.ಕೆ.ಜಾಫರ್ ಷರೀಫ್ ಎಂ.ಪಿ. ಆಗಿದ್ದ ಸಂದರ್ಭದಲ್ಲಿ wheel and axle plant ತಂದರು. ಪ್ರತಿಯೊಬ್ಬರೂ ಸಹ ಬೆಂಗಳೂರು ನಗರಕ್ಕೆ ಕಾಣಿಕೆಯನ್ನು ನೀಡಿದ್ದಾರೆ. ಆದರೆ, ಈಗ ಎಂ.ಪಿ. ಆಗಿ ಆಯ್ಕೆಗೊಳ್ಳುತ್ತಿರುವವರು ಏನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಜನರು ಕಾದು ನೋಡುತ್ತಿದ್ದಾರೆ. 1986ನೇ ಸಾಲಿನಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ

ಸ್ವಲ್ಪ transformation start ಆಯಿತು. ಬೆಂಗಳೂರು ನಗರವು 54 square kilo metre ಇದ್ದಿದ್ದು, ಇವತ್ತು 800 square kilo metre ದಾಟಿದೆ. ಉದ್ದ, ಅಗಲ ಎಲ್ಲಾ ಕಡೆ ಬೆಳೆಯುತ್ತಿದೆ. ಈ ಒಂದು ಅನಾಹುತಕ್ಕೆ ಏನು ಕಾರಣ ಎಂಬುದರ ಕುರಿತು ಶ್ರೀ ಎ.ಟಿ.ರಾಮಸ್ವಾಮಿಯವರ ಮತ್ತು Saldana ರವರ ನೇತೃತ್ವದಲ್ಲಿ ಸದನ ಸಮಿತಿ ಸಹ ರಚಿಸಲಾಗಿತ್ತು. ಏಕೆಂದರೆ, ಹಸಿರು ಕಡಿಮೆಯಾಗುತ್ತಿದೆ ಎಂಬ ಕಾರಣಕ್ಕಾಗಿ ಸಮಿತಿ ರಚಿಸಲಾಗಿತ್ತು. ಜೊತೆಗೆ ಮಾಜಿ ಸ್ಪೀಕರ್‌ರಾದ ಶ್ರೀ ಕೆ.ಬಿ.ಕೋಳಿವಾಡರವರ ನೇತೃತ್ವದಲ್ಲಿ ಸಹ ಸಮಿತಿ ರಚಿಸಲಾಗಿತ್ತು. ಈ 3 ಸಮಿತಿಯಲ್ಲಿ ಬೆಂಗಳೂರು ನಗರದ ಕುರಿತು ಹಲವಾರು ವರದಿಗಳನ್ನು ನೀಡಲಾಗಿತ್ತು. ನಾನು ಕೇವಲ ಭಾರತೀಯ ಜನತಾ ಪಾರ್ಟಿ ಸರ್ಕಾರದ ಕುರಿತು ಹೇಳುತ್ತಿಲ್ಲ. ಅಧಿಕಾರಕ್ಕೆ ಬಂದ ಸರ್ಕಾರವೆಲ್ಲವೂ ಸಹ ಆ ಒಂದು ವರದಿಯನ್ನು ಅನುಷ್ಠಾನಕ್ಕೆ ತರಲು ಏತಕ್ಕೆ ಹಿಂದೆ, ಮುಂದೆ ನೋಡಿದರು ಎಂಬುದು ಇವತ್ತಿಗೂ ಸಹ ಜನ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು "ಇಡೀ ಬೆಂಗಳೂರು ನಗರವು ಮುಳುಗಡೆಯಾಗಿಲ್ಲ. ಕೆಲವು ಭಾಗ ಅಷ್ಟೇ ಮುಳುಗಡೆಯಾಗಿದೆ" ಎಂದು ಒಂದು ಹೇಳಿಕೆ ನೀಡಿದರು. ನಾನು ಸಹ ಬೆಂಗಳೂರು ನಗರದಲ್ಲಿಯೇ ಬೆಳೆದಿದ್ದು. ನಾವು ಪ್ರವಾಹ ಎಂದಾಕ್ಷಣ ಯಾವುದೋ ಹಳ್ಳಿಗಳಲ್ಲಿ ಪ್ರವಾಹ ಬರುವುದನ್ನು ನೋಡಿದ್ದೇವೆ, ಕೇಳಿದ್ದೇವೆ. ಬೆಂಗಳೂರಿನಲ್ಲಿ ಪ್ರವಾಹವಾಗಿರುವುದನ್ನು ನೋಡಿಲ್ಲ, ಕೇಳಿಲ್ಲ. ಈಗ ಕೆಲವು ಬೆಳವಣಿಗೆಯಾದ ನಂತರ ಅದರಲ್ಲಿಯೂ ಬೊಮ್ಮನಹಳ್ಳಿ, ಮಹದೇವಪುರ, ಆರ್.ಆರ್.ನಗರ, ಕೆಲವು ಜಾಗಗಳಲ್ಲಿ ನೋಡಿದರೆ ನಿರಂತರವಾಗಿ ಮಳೆ ಬರುತ್ತಿದೆ. ಮಹದೇವಪುರ, ಬೊಮ್ಮನಹಳ್ಳಿಯಲ್ಲಿ ಬೋಟ್‌ನಲ್ಲಿ ಸಹ ಓಡಾಡುತ್ತಿದ್ದಾರೆ. ನಾನು ಬೆಂಗಳೂರು ಬಿಟ್ಟು ಸುಮಾರು 25 ವರ್ಷ ಕಳೆದಿತ್ತು. ಚುನಾವಣೆ ಸಂದರ್ಭದಲ್ಲಿ ಆ ಜಾಗಗಳಿಗೆ ಹೋಗಿದ್ದೆ. 10 ಅಡಿ ರಸ್ತೆ ಇಲ್ಲದಿದ್ದರೂ 30 ಮಹಡಿ ಕಟ್ಟಲು ಜಾಗ ನೀಡಿದ್ದಾರೆ. ಅದೇ ರೀತಿ Noida ದಲ್ಲಿ twin tower ನಿರ್ಮಿಸಲು ಅನುಮತಿ ನೀಡಲಾಗಿದ್ದು, ಅದನ್ನು ಸಹ ನೆಲಸಮಗೊಳಿಸಲಾಯಿತು. ಈ ಲ್ಯಾಂಡ್ ಮಾಫಿಯಾ ಬಂದು ಒಬ್ಬರನ್ನು ಸಹ ಬಿಟ್ಟಿಲ್ಲ. ಶ್ರೀ ಎ.ಟಿ.ರಾಮಸ್ವಾಮಿಯಂಥವರು ರಾಜಕಾರಣದಲ್ಲಿ ಇದ್ದಾರೆ ಎಂದರೆ ಆಶ್ಚರ್ಯವಾಗುತ್ತದೆ. ಅಂತಹ ಒಂದು ಒಳ್ಳೆಯ ವರದಿಯನ್ನು ನೀಡಿದರೂ ಯಾವುದೇ ಕ್ರಮವನ್ನು ಆ ವಿಚಾರದಲ್ಲಿ ಜರುಗಿಸಿಲ್ಲ.

(ಮುಂದು)

(827) 4.10, 14-09-2022, ಟಿಸಿಹೆಚ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು)**

ಇದಕ್ಕೆಲ್ಲಾ ಕಾರಣ ಯಾರು? ನೀವು ಹೇಳಬಹುದು politicians ಕಾರಣ ಎಂದು ಹೇಳಬಹುದು. ಶೇ.25 ರಷ್ಟು politicians ಕಾರಣ ಇರಬಹುದು. ಇನ್ನು ಶೇ.75 ರಷ್ಟು ಅಧಿಕಾರಿಗಳು ಪರ್ಮಿಷನ್ ಕೊಡುತ್ತಾರಲ್ಲಾ

ಅವರುಗಳೇ ಕಾರಣ. ಏಕೆಂದರೆ Corporation ನಲ್ಲಿ ಲೈಸೆನ್ಸ್ ಆಗಬೇಕು. ಬಿ.ಡಬ್ಲ್ಯೂ.ಎಸ್.ಎಸ್.ಬಿ., ಮತ್ತು ಎಲೆಕ್ಟ್ರಿಸಿಟಿ ಪರ್ಮಿಷನ್ ಕೊಟ್ಟಿರುತ್ತಾರೆ. ಅಕಸ್ಮಾತ್ ಎಷ್ಟೋ ಒತ್ತುವರಿಯಾಗಿರತಕ್ಕಂಥ ಜಾಗಗಳ ಸಂಬಂಧ ಕೋರ್ಟ್‌ಗೆ ಹೋದಾಗ, ಆ ಕೋರ್ಟ್‌ನಲ್ಲಿ ಸರ್ಕಾರಿ ವಕೀಲರು ಅದರ ಬಗ್ಗೆ ಮಾತನಾಡುವುದೇ ಇಲ್ಲ. ಯಾರಾದರೂ Public Accounts Committee members ಇದ್ದಾಗ ಅವರಿಗೆ ಚೆನ್ನಾಗಿ ಗೊತ್ತಿರುತ್ತದೆ. ನಾವು ನೋಡಿದಂತೆ ಸುಮಾರು ಹತ್ತತ್ತು ವರ್ಷಗಳಿಂದ ಕೇಸ್ ನಡೆದುಕೊಂಡೇ ಹೋಗುತ್ತಿರುತ್ತದೆ. ಆ ಸರ್ಕಾರಿ ವಕೀಲರು ಸರ್ಕಾರದಿಂದ ಪೆನ್ಷನ್ ತೆಗೆದುಕೊಂಡಂತೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ೯೦ ವರ್ಷದಲ್ಲಿ ಮೊಟ್ಟಮೊದಲನೆಯ ಬಾರಿಗೆ ಈ ರೀತಿಯ ಮಳೆಯಾಗಿದೆಯೆಂದು ಎಲ್ಲರೂ ಕೂಡ ಹೇಳುತ್ತಿದ್ದಾರೆ. ಆದರೆ ೯೦ ವರ್ಷಗಳ ಹಿಂದೆ ಮಳೆಯಾದರೂ ಈ ರೀತಿ ಎಲ್ಲೂ ಯಾರೂ ಕೂಡ ಕೊಚ್ಚಿ ಹೋಗುತ್ತಿರಲಿಲ್ಲ. ೨೦೦೮ ರಲ್ಲಿ delimitation ಆದ ನಂತರ 12 ಕ್ಷೇತ್ರಗಳು ಇದ್ದಿದ್ದು ಈಗ ೨೮ ಕ್ಷೇತ್ರಗಳಾಗಿದೆ. ಏನಾದರೂ ಜೋರು ಮಳೆ ಬಂದರೆ ಯಾವುದಾದರೂ ಗುಡಿಸಲು ಪ್ರದೇಶದಲ್ಲಿ ತೊಂದರೆಯಾಗುವುದೇ ವಿನಃ ಪ್ರವಾಹ ಎಲ್ಲೂ ಕೂಡ ಇರುತ್ತಿರಲಿಲ್ಲ. ಈಗ ಬೊಮ್ಮನಹಳ್ಳಿ ಮತ್ತು ಮಹದೇವಪುರದಲ್ಲಿ ಏಕೆ ಹೀಗೆ ಆಗಿದೆಯೆಂದು ನೀವು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಮಳೆ ಬಂದಂತಹ ನೀರು ಎಲ್ಲಿಗೆ ಹೋಗಬೇಕೆಂದು ಗೊತ್ತಿಲ್ಲ. ೧೯೬೦ನೇ ಇಸವಿಯಲ್ಲಿ ಬೆಂಗಳೂರು ಸುತ್ತಮುತ್ತ ಸುಮಾರು ೨೮೦ ಕೆರೆಗಳಿದ್ದವು. ಆದರೆ ಈಗ ಅದು ೬೦ ವರ್ಷಗಳಲ್ಲಿ ೮೦ ಕೆರೆಗಳಿಗೆ ಬಂದಿದೆ. Storm water drain ಗೆ ರಾಜಕಾಲವೆ ಎಂದು ಹೆಸರಿಟ್ಟಿರುತ್ತೇವೆ. ಮೊದಲನೇ storm water drain ಸ್ಯಾಂಕಿ ಟ್ಯಾಂಕ್ ನಿಂದ ಮೈಸೂರು ರಸ್ತೆಯವರೆಗೆ ಇದೆ. ಅದು ನಮ್ಮ ಮನೆಯ ಹತ್ತಿರವೇ ಇರತಕ್ಕಂಥದ್ದು. ನಾವು ಕೆರೆಯಲ್ಲಿ ಜಾಸ್ತಿ ನೀರು ಬಂದಾಗ ಅದು ಮೋರಿಯಲ್ಲಿ ಹೋಗುತ್ತದೆಂದು ನೋಡುತ್ತಿದ್ದೆವು. ಆದರೆ ಎಲ್ಲೂ ಕೂಡ ಪ್ರವಾಹ ಬರುತ್ತಿರಲಿಲ್ಲ. ಆದರೆ ಈಗ ಏನಾಗಿದೆಯೆಂದು ನೋಡಿ. ಇಲ್ಲಿ ಸಭಾನಾಯಕರಾದ ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಇದ್ದಾರೆ. ಅವರ ಜಿಲ್ಲೆಯಲ್ಲಿ ಒಂದು ಬಿದಿರಿನಲ್ಲಿ ಕಟ್ಟಿರತಕ್ಕಂಥ ಕಾಲು ಸೇತುವೆ ಮಂಗಳೂರು ಭಾಷೆಯಲ್ಲಿ ಅದನ್ನು ಕಾಲುಸಂಕ ಎಂದು ಕರೆಯುತ್ತಾರೆ. ಸ್ಕೂಲ್‌ಗೆ ಹೋಗತಕ್ಕಂಥ ಒಬ್ಬ ಹೆಣ್ಣುಮಗು ದಾಟುವಾಗ ಆ ಕಾಲುಸಂಕದಿಂದ ಬಿದ್ದಿದೆ. ಆದರೆ ಬಾಡಿ ಇನ್ನೂ ಸಿಕ್ಕಿಲ್ಲ. ನಾವ್ಯಾರು ಸಹ ಹೋಗಿಲ್ಲ. ಅದಕ್ಕೆ ನಾವೆಲ್ಲಾ ತಲೆ ತಗ್ಗಿಸಬೇಕು. ಬೇರೆ ಏನಾದರೂ ಕೊಲೆ ಮತ್ತು ಗಲಾಟೆಗಳಾದರೆ ನಾವು ಮತ್ತು ನೀವು ಹೋಗುತ್ತೇವೆ. ಸ್ಕೂಲ್‌ಗೆ ಹೋಗುವುದಕ್ಕೆ ಒಬ್ಬ ಹೆಣ್ಣು ಮಗುವಿಗೆ ಇನ್ನು ಸರಿಯಾದ ದಾರಿ ಆಗಿಲ್ಲವೆಂದು ಹೇಳಿದರೆ ನಾವು ಎಲ್ಲಿದ್ದೇವೆಂದು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿಯವರು ಆ ಹಳ್ಳಿ ಕಾಲ್ತೋಡ್ ಗ್ರಾಮ ಪಂಚಾಯಿತಿ, ಬೈಂದೂರು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆ ಹಳ್ಳಿ ಕಾಲ್ತೋಡ್ ಗ್ರಾಮ ಪಂಚಾಯಿತಿ, ಬೈಂದೂರು ವಿಧಾನಸಭಾ ಕ್ಷೇತ್ರ, ಬೈಂದೂರು ತಾಲ್ಲೂಕು, ಉಡುಪಿ ಜಿಲ್ಲೆಯಲ್ಲಿ ಬರುತ್ತದೆ. ಆದರೆ ಆ ಕಾಲುಸಂಕದಲ್ಲಿ ಹೋಗುವಾಗ ಮಗು ನೀರಿನಲ್ಲಿ ಕೊಚ್ಚಿಹೋಗಿ ತೀರಿಹೋಗಿದೆ. ಆ ಹೆಣ್ಣುಮಗಳು ಐದು ಅಥವಾ ಆರನೆಯ ತರಗತಿ ಓದುತ್ತಿತ್ತು. ನಾನು ಅವರ ಮನೆಗೂ ಕೂಡ ಹೋಗಿದ್ದೆ. ಆ ಮಗುವಿನ ಬಾಡಿ ಸಿಕ್ಕಿದೆ. ಅದೊಂದು ದುರಂತ. ಅದರ ಬಗ್ಗೆ ವ್ಯವಸ್ಥೆ ಮಾಡುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಈ ರೀತಿಯ ದುರಂತಗಳು ನಡೆದಾಗಲೇ ನಾವು ಎಚ್ಚೆತ್ತುಕೊಳ್ಳುವುದಾಗದಿದ್ದರೆ, ನಾವು ಬಹಳ ಸಾವು-ನೋವುಗಳನ್ನು ನೋಡಬೇಕಾಗುತ್ತದೆ. ಇಂತಹ ದುರಂತ ಆಗುವುದಕ್ಕೆ ಮೊದಲೇ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸರ್ಕಾರಗಳು ಇರುವುದು. ಅದಕ್ಕೆ ನಾವು planning ಮಾಡುತ್ತೇವೆ, ಎಲ್ಲಾ ಇರುತ್ತದೆ.

**ಶ್ರೀ ಸಿ.ಸಿ.ಪಾಟೀಲ್ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಆಗುತ್ತಿರತಕ್ಕಂಥ ಪ್ರವಾಹಗಳಿಗೆ ನಮ್ಮ ಸರ್ಕಾರ ಸುಮಾರು 1405 ಕಾಲುಸಂಕಗಳಿಗೆ ಈಗಾಗಲೇ ಅನುದಾನವನ್ನು ಬಿಡುಗಡೆ ಮಾಡಿದೆ. ಅದರಲ್ಲಿ ಹಲವಾರು ಕಾಲುಸಂಕಗಳು ಮುಗಿದಿವೆ. ಉಳಿದಂತೆ ಕಾಲುಸಂಕಗಳು ಪ್ರಗತಿಯಲ್ಲಿವೆ. This is for your information.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರ ಸರ್ಕಾರ ಇದ್ದಾಗ, at a time 100 ಕಾಲುಸಂಕಗಳನ್ನು ಕೊಟ್ಟಿದ್ದೇವೆ.

**ಶ್ರೀ ಸಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾವು 1400 ಕಾಲುಸಂಕಗಳನ್ನು ಕಟ್ಟುತ್ತಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಬಹಳ ಸಂತೋಷ. ಅವು ಆದಷ್ಟು ಬೇಗ complete ಆಗಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಮೇ 2022 ರಿಂದೀಚೆಗೆ ಸುಮಾರು 62 ದಿವಸಗಳ ಕಾಲ ಮಳೆ ಬಿದ್ದಿದೆ. ಬೆಂಗಳೂರು ನಗರದಲ್ಲಿ ಕಾರ್ಪೋರೇಷನ್‌ನವರಿಗೆ ಜಾಸ್ತಿ ಮಳೆ ಬರುತ್ತದೆ, ಅದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಮುನ್ಸೂಚನೆಗಳು ಕೂಡ ಇರುತ್ತದೆ. ಈ ಮುಂಚೆ ಗಾಂಧೀನಗರದ ಕಿನೋ ಥಿಯೇಟರ್ ಹತ್ತಿರ ಒಂದು ಅಂಡರ್ ಪಾಸ್ ಇತ್ತು. ಅಲ್ಲಿ ಮಳೆ ಬಂದಾಗ ಬಸ್‌ಗಳು ನಿಂತುಹೋಗುತ್ತಿತ್ತು. ಆದರೆ ಈಗ ಅಲ್ಲಿ ಯಾವ ಬಸ್ ಕೂಡ ನಿಲ್ಲುವುದಿಲ್ಲ. ನೀರು ಸರಾಗವಾಗಿ ಹೋಗುತ್ತಿದೆ. ಆ ರೀತಿ ಮುಂಜಾಗೃತಾ ಕ್ರಮ ತೆಗೆದುಕೊಂಡು ನೀವು ಮಾಡಿದಾಗ ಎಲ್ಲಾ ಸರಿಯಾಗುತ್ತದೆ.

ಈಗಲೂ ಕೂಡ ಬಿ.ಬಿ.ಎಂ.ಪಿ., ಯವರು 169 ಪ್ರದೇಶಗಳನ್ನು ಅಪಾಯ ಪರಿಸ್ಥಿತಿ ಪ್ರದೇಶವೆಂದು ಗುರುತಿಸಿದ್ದಾರೆ. ಆದರೆ ಅಲ್ಲಿ ಏನು ಮಾಡಬೇಕೆಂದು ಅವರಿಗೆ ಇನ್ನೂ ಕೂಡ ಗೊತ್ತಾಗುತ್ತಿಲ್ಲ. ಕೇಂದ್ರ ಸರ್ಕಾರದಿಂದ ‘ಸ್ಮಾರ್ಟ್ ಸಿಟಿ’ ಕಾರ್ಯಕ್ರಮ ಇದೆ. ನಾನು ಆ ‘ಸ್ಮಾರ್ಟ್ ಸಿಟಿ’ ಕಾರ್ಯಕ್ರಮವನ್ನು introduce ಮಾಡಿದಾಗಲೇ ನಮ್ಮ ಬೆಂಗಳೂರು ಸಿಟಿಗೆ ‘ಸ್ಮಾರ್ಟ್ ಸಿಟಿ’ ಬೇಕಾಗಿಲ್ಲ, Bengaluru is the smartest city ಎಂದು ಹೇಳಿದ್ದೆನು. ಏಕೆಂದರೆ ನನ್ನ ಅನುಭವದಲ್ಲಿ ಹೇಳುವುದಾದರೆ, national average ತೆಗೆದುಕೊಂಡಾಗ, Bengaluru Corporation is one of the best governed Corporations. ರಾಜ್ಯದ average ತೆಗೆದುಕೊಂಡಾಗ, it is one of the worst Corporations ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಬಾಂಬೆ, ದೆಹಲಿ, ಹೈದ್ರಾಬಾದ್, ಚೆನ್ನೈ ಮತ್ತು ಕೊಲ್ಕೊತ್ತಾ ಬೇರೆ ಯಾವುದೇ ಕಾರ್ಪೋರೇಷನ್ ತೆಗೆದುಕೊಂಡಾಗ, ನಾವು national average ತೆಗೆದುಕೊಂಡಾಗ Bengaluru is the best. ಆದರೆ, ಕರ್ನಾಟಕದ ಸರಾಸರಿ ನೋಡಿದಾಗ, worst maintained Corporation ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಏನಾಗುತ್ತಿದೆ ಎಂಬುದನ್ನು ಕೂಡ ನೋಡಬೇಕು. ನಾನು ಕಾರ್ಪೋರೇಷನ್‌ನ್ನು ಮೊದಲಿನಿಂದಲೂ ನೋಡುತ್ತಿದ್ದೇನೆ. ಅವರು ಎರಡು ವರ್ಷ contract ಮಾಡುತ್ತಾರೆ, 4ನೇ ವರ್ಷ ರೂ.100 ಕೋಟಿ ವ್ಯಾಪಾರ ಎಂದು ಹೇಳುತ್ತಿರುತ್ತಾರೆ. ಎಲ್ಲಿಂದ ದುಡ್ಡು. . . ನಾವು ಟ್ಯಾಕ್ಸ್ ಕೊಡುತ್ತೇವೆ, highest GST ಕೊಡುತ್ತೇವೆ. Income tax ನಲ್ಲೂ ಕೂಡ ದೆಹಲಿ, ಮಹಾರಾಷ್ಟ್ರ, ಚೆನ್ನೈ ಹೊರತುಪಡಿಸಿದರೆ ನಾವು 6ನೇ ಸ್ಥಾನದಲ್ಲಿದ್ದೇವೆ. ಇಷ್ಟೆಲ್ಲಾ ಕೊಟ್ಟರೂ ಕೂಡ ಬೆಂಗಳೂರಿಗೆ ಏನು ಮಾಡುತ್ತಿಲ್ಲವೆಂದರೆ ನಾವು ಏನು ಮಾಡಬೇಕು ಹೇಳಿ. ಇಲ್ಲಿ ದೊಡ್ಡ ದೊಡ್ಡ corporate sectors ಇದೆ. ನಮ್ಮ ಮಾಜಿ ಮುಖ್ಯಮಂತ್ರಿಯವರಾದ ಸನ್ಮಾನ್ಯ ಎಸ್.ಎಂ.ಕೃಷ್ಣ ರವರು ‘ಬೆಂಗಳೂರು ಬ್ರಾಂಡ್ ಎಂದು ಏನು ಇತ್ತೋ, ಅದಕ್ಕೆ ಬಹಳ ಹೊಡೆತ ಬಿದ್ದಿದೆ' ಎಂದು’ ಅವರು ಕೂಡ ಒಂದು ಪತ್ರ ಬರೆದಿದ್ದಾರೆ. ಅದಕ್ಕೆ ಕಾರಣ ಏನಾಗಿದೆಯೆಂದು ಹೇಳಿ. ಈಗ ಬೆಂಗಳೂರು ಅನಾಥವಾಗಿದೆ. ಯಾರು ಕೂಡ ಇಲ್ಲಿ ಧಾತರು ಇಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರು ಬೆಂಗಳೂರು ನಗರಕ್ಕೆ ಉಸ್ತುವಾರಿ ಇರುವುದನ್ನು ನಾವು  ಮೊಟ್ಟಮೊದಲನೆಯ ಬಾರಿಗೆ ನೋಡುತ್ತಿದ್ದೇವೆ. ಸನ್ಮಾನ್ಯ ಮುಖ್ಯಮಂತ್ರಿಯವರು ಸ್ವತಃ ಬೆಂಗಳೂರು ಉಸ್ತುವಾರಿ ಇದ್ದಾರೆ. ಬೆಂಗಳೂರಿನಲ್ಲಿ ಸಂಪೂರ್ಣವಾಗಿ ಮೂಲಭೂತ ಸೌಕರ್ಯಗಳು ಕುಸಿತವಾಗಿದೆ. ಅದಕ್ಕೆ ಯಾರು ಜವಾಬ್ದಾರರು. ಅಂದರೆ ಬೆಂಗಳೂರಿನಲ್ಲಿರತಕ್ಕಂಥ ಎಂ.ಎಲ್.ಎ.,ಗಳಾಗಲಿ ಅಥವಾ ಮಾನ್ಯ ಸಚಿವರಾಗಲೀ ಯಾರೂ ಕೂಡ competent Ministers ಇಲ್ಲ ಎಂದು ಅರ್ಥವೇ? ಸಂಪೂರ್ಣವಾಗಿ ಕುಸಿದಿದೆ. ಅವರಿಗೆ ಅಷ್ಟೊಂದು ಕೆಲಸ ಇರುವಾಗ ಅವರ ಜೊತೆಗಿರುವ ಯಾರನ್ನಾದರೂ ನಂಬಿ ಮಾಡಬೇಕು, ಆದರೆ ಏನೂ ಮಾಡಿಲ್ಲ. Corporation ಅಂಕಿ-ಅಂಶಗಳನ್ನು ತೆಗೆದುಕೊಂಡಾಗ ಸುಮಾರು 10,282 ರಸ್ತೆ ಗುಂಡಿಗಳಿವೆ. ಗುಂಡಿಗಳಲ್ಲೇ  ಗುಂಡಿಗಳಿವು. ಬೆಂಗಳೂರು ನಗರದಲ್ಲಿ ಕೊಳೆಗಳು

ಕಡಿಮೆಯಾಗುತ್ತಿದೆ. ಜನ ಸ್ಕೂಟರ್‌ಗಳಲ್ಲಿ ಹೋಗುವಾಗ ಆ ಗುಂಡಿಗಳಲ್ಲಿ ಬಿದ್ದು ಸಾಯುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದ್ದರಿಂದ ಎಲ್ಲೋ ಒಂದು ಕಡೆ ನಾವು ಸಂಪೂರ್ಣವಾಗಿ ಬೆಂಗಳೂರು ನಗರವನ್ನು ನಿರ್ಲಕ್ಷ್ಯ ಮಾಡುತ್ತಿದ್ದೇವೆ ಎಂದು ನಾನು ತಮ್ಮ ಗಮನಕ್ಕೆ ತರುತಿದ್ದೇನೆ. ಬೆಂಗಳೂರು ನಗರದಲ್ಲಿ ಒಟ್ಟು 842 ರಾಜಕಾಲುವೆಗಳಿದ್ದವು. ಆದರೆ ಆ ರಾಜಕಾಲುವೆಗಳ ಮೇಲೂ ಕೂಡ ಬಿಲ್ಡಿಂಗ್ ಕಟ್ಟಿದ್ದಾರೆ. ಇವತ್ತು ಏನೋ ಸ್ವಲ್ಪ sample save ಮಾಡುತ್ತಿದ್ದಾರೆ. ನಮ್ಮ ಪಕ್ಷದ ಒಬ್ಬರು ಶಾಸಕರ ಬಿಲ್ಡಿಂಗ್‌ನ್ನು ಹೋಗಿ ಹೊಡೆದಿದ್ದಾರೆ. ಅದೇ ಧೈರ್ಯ ಮಾಡಿ ಎಲ್ಲಾ ಮಾಫಿಯಾಗಳಿದ್ದಾರಲ್ಲಾ, ಅಂದರೆ ಲ್ಯಾಂಡ್ ಮಾಫಿಯಾದವರು, ಬಿಲ್ಡಿಂಗ್ ಮಾಫಿಯಾದವರು ಮತ್ತು ರಿಯಲ್ ಎಸ್ಟೇಟ್ ಮಾಫಿಯಾದವರು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ವಿರೋಧ ಪಕ್ಷ ನಾಯಕರಿಗೆ ಒಂದು ವಿನಂತಿ ಮಾಡುತ್ತೇನೆ. ಈ ಪರಿಸ್ಥಿತಿಗಳು ಮತ್ತು ಒತ್ತಡಗಳು ಒಟ್ಟಾರೆಯಾಗಿ ಪ್ರವಾಹವಾದ ಹಿನ್ನೆಲೆಯಲ್ಲಿ, ರಾಜಕಾಲುವೆಯನ್ನು ತೆರವು ಮಾಡಬೇಕಾದುದ್ದು ಅನಿವಾರ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ದಾಖಲೆಗಳಿಲ್ಲದೇ ಅತಿಕ್ರಮವಾಗಿ ಕಟ್ಟಿರುವಂತಹ ಕೆಲವು ಕಟ್ಟಡಗಳನ್ನು ತೆಗೆಯಲೇಬೇಕಾದಂಥ ಹಿನ್ನೆಲೆಯಲ್ಲಿ, ಕೆಲವು ಕಟ್ಟಡಗಳನ್ನು ತೆರವು ಮಾಡುತ್ತಿದ್ದೇವೆ. ನಾವು ಯಾವುದೇ ಪಕ್ಷವೆಂದು ನೋಡಿಲ್ಲ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅರ್ಥ ಮಾಡಿಕೊಳ್ಳಬೇಕು. ಆಕಸ್ಮಿಕ ಕಾರಣಕ್ಕಾಗಿ ನಿಮ್ಮ ಪಕ್ಷದ ಯಾರೋ ಒಬ್ಬರು ಶಾಸಕರು ರಾಜಕಾಲುವೆ ಮೇಲೆ ಕಟ್ಟಡ ಕಟ್ಟಿದ್ದರೆ ಅದು ಹೋಗಿರಬಹುದು. ಆದರೆ ಉದ್ದೇಶಪೂರ್ವಕವಾಗಿ ಹೊಡೆದಿಲ್ಲ. ಇದು ಅವರ ಗಮನದಲ್ಲಿರಲಿ ಎಂದು ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ, ನಾವು ಮಾತನಾಡುವಾಗ ತಾವು ಸ್ವಲ್ಪ ಸಾವಧಾನವಾಗಿ ಇದ್ದರೆ ಒಳ್ಳೆಯದು. ನಾನು ಮಾತನಾಡಿ ಮುಗಿಸಿಬಿಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಬಹಳ ತಾಳ್ಮೆಯಿಂದ ಕೇಳುತ್ತಿದ್ದೆ. ಏಕೆಂದರೆ, ಅವರ ಮೇಲೆ ಪ್ರೀತಿ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರ . . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ, ನೀವು ನನ್ನ ಮಾತಿಗೆ ಬ್ರೇಕ್ ಹಾಕುತ್ತಿದ್ದರೆ, ಸುಮ್ಮನೆ ನಾವು ಆಮೇಲೆ deviate ಮಾಡಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಬ್ರೇಕ್ ಹಾಕುತ್ತಿಲ್ಲ. ಅವರ ಪ್ರೀತಿ, ಗೌರವ ಮತ್ತು ಅಭಿಮಾನದಿಂದ ತಾಳ್ಮೆಯಿಂದ ಕೇಳುತ್ತಿದ್ದೆ. ಆದರೆ ತಾಳ್ಮೆಗೂ ಒಂದು ಮಿತಿ ಇದೆಯಲ್ಲಾ. ಅದಕ್ಕೋಸ್ಕರ ನಾನು ಎದ್ದು ನಿಂತೆನು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಾವು ಮಾತನಾಡಬೇಡಿ ಎಂದರೆ ಕುಳಿತುಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಏನೂ ಇಲ್ಲ. . .

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನೀವು ನಮ್ಮ ಮಾನ್ಯ ಶಾಸಕರ ಬಿಲ್ಡಿಂಗ್‌ನ್ನು ಕೆಡವಿರುವುದು ನಾನು ತಪ್ಪು ಎಂದು ಹೇಳುತ್ತಿಲ್ಲ. ಅದೇ ರೀತಿ ಎಲ್ಲರ ಮೇಲೂ ಕ್ರಮ ಜರುಗಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಗುತ್ತಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಅವನು ಎಷ್ಟೇ ದೊಡ್ಡವನು ಇರಲಿ. ಯಾರಿಗೂ ಧೈರ್ಯ ಇಲ್ಲ ಸ್ವಾಮಿ. ನಾನು ಬೆಂಗಳೂರಿನವನು, ನನಗೆ ಗೊತ್ತಿದೆ. ನಾನು ಧೈರ್ಯವಾಗಿ ಮಾತನಾಡುತ್ತೇನೆ. ನಾನು ಯಾವುದೇ ರಿಯಲ್ ಎಸ್ಟೇಟ್ ಮತ್ತು ಯಾವುದೇ ಬ್ಯುಸಿನೆಸ್ ಮಾಡುವವನಲ್ಲ. ನಾನು ಒಬ್ಬ political activist ಆಗಿರತಕ್ಕಂಥವನು. ಆ ಧೈರ್ಯದಿಂದ ನಾನು ಹೇಳುತ್ತಿದ್ದೇನೆ. ಇನ್ಯಾರಿಗೂ ಈ ರೀತಿ ಹೇಳುವುದಕ್ಕಾಗುವುದಿಲ್ಲ. ನಾನು ಬೆಂಗಳೂರಿನವನಾಗಿ ಹೇಳುತ್ತಿದ್ದೇನೆ. ಹಾಗಾಗಿ, ಬೆಂಗಳೂರಿನಲ್ಲಿ ಏನೇನು ನಡೆಯುತ್ತಿದೆಯೆಂದು ನೋಡಿದ್ದೇನೆ. ಮಾನ್ಯ ಸಿ.ಸಿ.ಪಾಟೀಲ್ ಸಾಹೇಬ್ರೆ, ತಾವು ಅಷ್ಟು ಹೇಳುತ್ತಿದ್ದೀರಲ್ಲಾ, ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆ ಇಡೀ ಏಷ್ಯಾದಲ್ಲೇ one of the best hospitals. ಇಡೀ ಇಂಡಿಯಾದಲ್ಲಿ ಯಾರಾದರು ಬೆಂಗಳೂರಿಗೆ ಬರಬೇಕಾದರೆ ತಾವು ಒಂದು ಬೆಡ್ ಕೊಡಿಸಿ ಎಂದು ನನಗೆ ಫೋನ್ ಮಾಡುತ್ತಾರೆ.

(ಮುಂದು)

(೮೨೮)14.9.2022/4.20/ಎಂ.ಎಂ-ಕೆ.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು):-**

ಬೆಡ್‌ಗೆ ನಾವು ಒಂದು ವಾರದಿಂದ 10 ದಿವಸಗಳವರೆಗೆ ಕಾಯಬೇಕು. ಆ ಆಸ್ಪತ್ರೆಯ ೦3 ಎಕರೆ ಜಾಗವನ್ನು ಬಿಲ್ಡರ್ಸ್ ಹೊಡೆದಿದ್ದಾರೆ. ಅದು ಕಾರ್ಪೋರೇಷನ್ ಜಾಗ. ಇವತ್ತಿಗೂ ಸಹ ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಅಂದರೆ ಆ ಬಿಲ್ಡರ್ಸ್ ಅಷ್ಟು powerful ಎಂದಾಯಿತು ಅಲ್ಲವೇ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ನಾವು normally ನಿಮಗೆ ಅವಕಾಶ ಕೊಡುವುದಿಲ್ಲ. ಕೇಳುತ್ತಿದ್ದೀರಿ ಒಳ್ಳೆಯ ಕೆಲಸ ಇದ್ದರೆ ಒಳ್ಳೆಯದು. ದ್ವೇಷವಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಹರಿಪ್ರಸಾದ್‌ರವರಿಗೆ ನನ್ನ ಮೇಲೆ ಬಹಳ ಪ್ರೀತಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನೀವು ಕೂಡ ಬಿ.ಎ.ಸಿ. (Business Advisory Committee) ಯಲ್ಲಿದ್ದಿರಿ ಎಲ್ಲವನ್ನೂ ಹೇಳಿ.

**ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಹರಿಪ್ರಸಾದ್‌ರವರಿಗೆ ಒಂದು ಪ್ರಶ್ನೆ ಕೇಳುತ್ತೇನೆ. ಬಿ.ಬಿ.ಎಂ.ಪಿ., ಯಲ್ಲಿ ಇಷ್ಟರವರೆಗೆ ಏನು ಕೇಸ್‌ಗಳು, ಅದರ standard ಏನು; Delhi Corporation, Mumbai Corporation ಹಾಗೂ Chennai Corporation standard ಗಳೇನೆಂದು ಹೇಳಿದರು. 'Bengaluru Corporation is best among all those Corporations' ಎಂದು ಹೇಳಿದರು. ಅದಕ್ಕೆ ಅವರು ಅಭಿನಂದನೆಯನ್ನು ಹೇಳಬೇಕು. ಆದರೆ ಹೇಳುತ್ತಿಲ್ಲ. ಇದು ಮೊದಲನೆಯದು. ಎರಡನೆಯದಾಗಿ, ಇವತ್ತು ಏನು ರಿಯಲ್ ಎಸ್ಟೇಟ್ ಇದೆ; ಬೆಂಗಳೂರಿನ ಮರ್ಯಾದೆಯನ್ನು ತೆಗೆಯಬೇಡಿ ಎನ್ನುವುದು ಟಿ.ವಿ.,ಯಲ್ಲಿ, ಪತ್ರಿಕೆಯಲ್ಲಿ ಬಂತು. ಯಾರು ತೆಗೆಯುತ್ತಿದ್ದಾರೆ? ಬೆಂಗಳೂರಿನಲ್ಲಿ ಏನು ಅಕ್ರಮ ಒತ್ತುವರಿಗಳಾಗಿವೆ ಅದು clean ಆಗಬೇಕು. ಅದನ್ನು clean ಮಾಡುತ್ತಿದ್ದಾರೆ. ಅದಕ್ಕೆ ನಾವು support ಮಾಡಬೇಕು. ಅದರಲ್ಲಿ ಯಾವುದೇ ಪಕ್ಷದ ಶಾಸಕರಿರಲಿ, ಯಾರೇ illegal occupy ಮಾಡಿಕೊಂಡಿರಲಿ ಅದನ್ನು clean ಮಾಡಲೇಬೇಕು. ಆದರೆ ಅಕ್ರಮ ಕಟ್ಟಡಗಳು ಯಾರ ಕಾಲದಲ್ಲಿ ಕೊಟ್ಟಿದ್ದಾರೆ ಎಂಬ ಬಗ್ಗೆಯೂ ಮಾಹಿತಿ

ಕೊಡಿ. ಅದನ್ನು ಎಷ್ಟನೇ ಇಸವಿಯಲ್ಲಿ ಕೊಟ್ಟಿದ್ದೀರಿ? ಯಾರು ಕೊಟ್ಟಿದ್ದು? ಉದಾಹರಣೆಗೆ illegal constructions ಆಗಿದೆಯಲ್ಲಾ ಅದು ಯಾರ ಕಾಲದಲ್ಲಿ ಆಗಿದೆ ಎಂಬುದನ್ನೂ ಹೇಳಿ. ಅದನ್ನೇಕೆ ಮುಚ್ಚಿ ಇಡುತ್ತೀರಿ?

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, (ಗೊಂದಲ)

**ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ, ಅವರಿಗೆ ಅವಕಾಶ ಕೊಡಬೇಕಾದರೆ ತಾವು ನನ್ನನ್ನು ಕೇಳಿ ಕೊಟ್ಟಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ರವಿಕುಮಾರ್‌ರವರೇ, ಆಯಿತು, ನಿಮ್ಮದೆಲ್ಲವನ್ನೂ ಕೇಳಿದೆ, ಕುಳಿತುಕೊಳ್ಳಿ. (ಗೊಂದಲ) ಬರುತ್ತೇನೆ, ನೀವು ಏನೂ ಯೋಚನೆ ಮಾಡಬೇಡಿ. ಅವಾಗೆಲ್ಲಾ ಕೊಟ್ಟುಕೊಂಡು ಬಂದೆವು ನೋಡಿ theosophical society, ರಾಷ್ಟ್ರೋತ್ಥಾನ ಪರಿಷತ್ 34 ರೂಪಾಯಿಗೆ ನೀವು ತೆಗೆದುಕೊಂಡಿದ್ದೀರಿ.

**ಶ್ರೀ ಎನ್. ರವಿಕುಮಾರ್:–** ಇಸವಿ ಸಮೇತ ಬನ್ನಿ, ನಾವೂ ಬರುತ್ತೇವೆ. ಯಾರು ಪರ್ಮಿಷನ್ ಕೊಟ್ಟಿದ್ದರು ಎಂದು ಮಾಹಿತಿ ಸಹಿತವಾಗಿ ಬರುತ್ತೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಇದರಲ್ಲಿ ರಾಜಕೀಯ ಬೇಡ. ಬೆಂಗಳೂರು ನಗರ ಇದು.

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):–** ಸ್ವಲ್ಪ ಹೊತ್ತು ಇರಿ ಅವರು ಮುಗಿಸಲಿ. ಅವರು ಮಾತನಾಡುವಾಗ ಏತಕ್ಕೆ ಮಾತನಾಡುತ್ತೀರಿ? (ಗೊಂದಲ) ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಏತಕ್ಕೆ ಅಡ್ಡ ಬರುತ್ತೀರಿ? ಅಡ್ಡ ಬರುವುದಕ್ಕೆ ನೀವು ಯಾರು? Let him complete it. No, this is not correct. ಅವರು ಮಾತನಾಡುವುದಕ್ಕೆ ಬಿಡಿ.

**Sri N. RAVIKUMAR:–** I know very well as to which is correct and which is not correct.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಎ.ಟಿ. ರಾಮಸ್ವಾಮಿಯವರ ವರದಿ 2007ರಲ್ಲಿ ಬಂತು. 2008 ರಿಂದ 2013ರವರೆಗೆ ಯಾವ ಸರ್ಕಾರ ಇತ್ತು? ಕಾಂಗ್ರೆಸ್ ಸರ್ಕಾರವೇ? ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ಸರ್ಕಾರವೇ? ಆಗ ನಿಮ್ಮ ಸರ್ಕಾರವಿತ್ತಲ್ಲಾ, ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಬೇಡವೆಂದು ಯಾರು ಹೇಳಿದರು? ನೀವು ಸಹ ಅದರಲ್ಲಿ ಸೇರಿಕೊಂಡಿರಿ ಎಂದು ನಿಮಗೆ ಹೇಳುತ್ತಿದ್ದೇನೆ. ಯಾರೂ ಸಹ ಅದರ ಮೇಲಿಲ್ಲ. ಇನ್ನೂ ಬೇಕಾದರೆ ಪೂರ್ತಿ ದಾಖಲೆ ನನ್ನ ಬಳಿ ಇದೆ. ಆದ್ದರಿಂದ ಬೆಂಗಳೂರನ್ನು ಡ್ಯಾಮೇಜ್ ಮಾಡುವುದು, ಬ್ರ್ಯಾಂಡ್ ಮಾಡುವುದನ್ನು ನಾವು ಮಾಡುತ್ತಿಲ್ಲ. ನಿಮಗೆ ಅದಕ್ಕೆ ಹೇಳಿದ್ದು. ಸಿಲ್ಕ್ ಸಿಟಿ, ಶ್ರೀ ಟಿಪ್ಪುಸುಲ್ತಾನ್ ಕಾಲದಿಂದ ಹಿಡಿದು ಸಿಲಿಕಾನ್ ಸಿಟಿವರೆಗೂ ಬರುವಾಗ ಅದಕ್ಕೆ ಬಹಳಷ್ಟು ಜನರು ಕೆಲಸ ಮಾಡಿದ್ದಾರೆ, ಬೆವರು ಸುರಿಸಿದ್ದಾರೆ. ಅದರಲ್ಲಿಯೂ ಹೆಚ್ಚಿನ ಪಾಲು ಕಾಂಗ್ರೆಸ್ ಪಕ್ಷದವರು ಮತ್ತು ಜನತಾ ಪಾರ್ಟಿಯವರು ಎಂದು ಹೇಳುವುದಕ್ಕೆ ನಾನು ಹೆಮ್ಮೆ ಪಡುತ್ತೇನೆ. ಆದರೆ ಇವರು ಬೆಂಗಳೂರಿನಲ್ಲಿ ಯಾವುದಾದರೂ ಒಂದು ಕಾರ್ಖಾನೆಯನ್ನು ತಂದು ಏನಾದರೂ ಮಾಡಿದ್ದಾರಾ ಎಂದು ಹೇಳಲಿ? ಇರುವ ಕಾರ್ಖಾನೆಗಳನ್ನು ಮುಚ್ಚುತ್ತಿದ್ದಾರೆ. ಕಾರ್ಪೋರೇಷನ್‌ನಲ್ಲಿ ಪ್ರತಿವರ್ಷ ಸಾವಿರಾರು ಕೋಟಿ ರೂಪಾಯಿಗಳ ಕೆಲಸವನ್ನು ಮಾಡುತ್ತಾರೆ. ಆದರೆ ಅದು ಜಗಜ್ಜಾಹೀರು, ಎಂದರೆ ಬೆಂಗಳೂರಿನಲ್ಲಿ ಯಾರನ್ನೇ ಕೇಳಿದರೂ ಸಹ "ಹಳೆ ಕಲ್ಲು, ಹೊಸ ಬಿಲ್ಲು" ಎಂದು ಹೇಳುತ್ತಾರೆ. ಕೆಲಸವೇನೂ ನಡೆಯುವುದಿಲ್ಲ. ನಾನೇ ಒಂದು ಕೇಸ್‌ನಲ್ಲಿ ಸುಪ್ರೀಂ ಕೋರ್ಟ್‌ವರೆಗೂ ಹೋಗಿದ್ದೆ. 1700 ಕೋಟಿ ರೂಪಾಯಿಗಳ ಕಾಮಗಾರಿಗೆ ಒಂದೇ ಒಂದು ಕಲ್ಲನ್ನೂ ಇಟ್ಟಿಲ್ಲ, ಲೂಟಿ ಹೊಡೆದರು. ಸುಪ್ರೀಂ ಕೋರ್ಟ್‌ನಿಂದ ಅದನ್ನು ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಲಿ ಎಂದು ಹೇಳಿ ಅದನ್ನು ಸಿ.ಓ.ಡಿ., ಗೆ ಕಳುಹಿಸಿದರು. ಸಿ.ಓ.ಡಿ., ಯಲ್ಲಿ ಅದನ್ನು ಹಾಗೇ ಮುಚ್ಚಿಬಿಟ್ಟರು. ಇದೆಲ್ಲಾ ಚರ್ಚೆಯಾಗಬೇಕು, ಇದಕ್ಕೆ ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ಚರ್ಚೆ ಇಡಿ, ಅಲ್ಲಿ ಮಾತನಾಡೋಣ. ಮುಖ್ಯಮಂತ್ರಿಗಳು ನವ ನಗರೋತ್ಥಾನ ಯೋಜನೆಗಳು; ಮೂರು ವರ್ಷದಲ್ಲಿ 1060 ಕೋಟಿ ರೂಪಾಯಿಗಳನ್ನು ರಾಜಕಾಲುವೆಗಳ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡಿದ್ದಾರೆ. ಅದರಲ್ಲಿಯೂ ಸಹ 440 ಕಿ.ಮೀ. ಉದ್ದದ ರಾಜಕಾಲುವೆಗಳ ವಾರ್ಷಿಕ ನಿರ್ವಹಣೆಗೆ ಯೋಗ ಅಂಡ್ ಕಂಪನಿಗೆ 36 ಕೋಟಿ ರೂಪಾಯಿಗಳ ಮೊತ್ತಕ್ಕೆ ಗುತ್ತಿಗೆ ನೀಡಲಾಗಿದೆ. ಏತಕ್ಕೆ ರಾಜಕಾಲುವೆಗಳೆಲ್ಲಾ ಮುಚ್ಚಿ ಹೋಗುತ್ತಿವೆ? 1060 ಕೋಟಿ ರೂಪಾಯಿಗಳು ಎಲ್ಲಿ ಹೋಗಿದೆ? ಮತ್ತು ಮಳೆ ಹಾನಿಯಾಗಿ 5000 ಅರ್ಜಿಗಳು ಬಂದಿವೆ. ನಾವೆಲ್ಲಾ ಬೆಂಗಳೂರು ಉತ್ತರ ಈ ಕಡೆ ಇರುವವರು. ನೀವು ಅಲ್ಲಿಗೆ ಹೋದಾಗ ಅಲ್ಲಿನ ಪರಿಸ್ಥಿತಿ ನಿಮಗೆ ಗೊತ್ತಾಗುತ್ತದೆ. ಅಲ್ಲಿ ಕನ್ನಡದವರು ಕಡಿಮೆ. ಎಲ್ಲರೂ ಉತ್ತರ ಭಾರತದವರು, ಪೂರ್ವ ಭಾರತದವರು ಅಲ್ಲಿದ್ದಾರೆ. ಅಲ್ಲಿ ಕನ್ನಡ ಮಾತನಾಡುವವರು ಸಿಕ್ಕುವುದಿಲ್ಲ. ಇಷ್ಟೆಲ್ಲಾ ಆದರೂ, 5000 ಅರ್ಜಿಗಳು ಬಂದರೂ ಕೂಡ; ನಮ್ಮ ಸಭಾನಾಯಕರು ರೂ. 10,000/-ಗಳ ಪರಿಹಾರ ಕೊಡುವುದಕ್ಕೆ ನಾವೆಲ್ಲಾ ಮಾತನಾಡಿದ್ದೇವೆ ಎಂದು ಹೇಳಿದರು. ಆದರೆ ಬೆಂಗಳೂರು ಸುಧಾರಣೆ ಆಗಬೇಕಾದರೆ

part-time ಮಂತ್ರಿ ಆಗುವುದಿಲ್ಲ. Full-time ಒಬ್ಬ ಮಂತ್ರಿ ಅಥವಾ ಇಬ್ಬರನ್ನು ಹಾಕುವುದು ಸೂಕ್ತ. ಈಗ ೦೮ ವಲಯಕ್ಕೆ ಎಂಟು ಉಸ್ತುವಾರಿ ಮಂತ್ರಿಗಳನ್ನು ನೇಮಿಸಿದ್ದಾರೆ. ಅದು ಆಗುವುದಿಲ್ಲ. ಯಾರಾದರೂ ಒಬ್ಬ competent ಮಂತ್ರಿಗಳನ್ನು ಮಾಡಿದರೆ ಸರಿಯಾಗುತ್ತದೆ. ಬೆಂಗಳೂರಿನ ಹೆಸರನ್ನು ಕೆಡಿಸಿ ಎಂದು ಹೇಳಿದವರು ಯಾರು? 'ಮಳೆ ಅವಾಂತರ- ಬೆಂಗಳೂರು ಬ್ರ್ಯಾಂಡ್ ಉಳಿಸಿಕೊಳ್ಳಲು ಮುಖ್ಯಮಂತ್ರಿಗೆ ಎಸ್.ಎಂ. ಕೃಷ್ಣ ಸಲಹೆ'. ಇದನ್ನು ನಾವು ಹೇಳಿದ್ದಲ್ಲ, ನಾವು ಮಸಿ ಬಳಿಯುತ್ತಿಲ್ಲ. ಅದರಲ್ಲಿಯೂ ಸಹ ದಕ್ಷಿಣ, ಪೂರ್ವ ಏಷ್ಯಾದಲ್ಲಿ ಅತಿ ಹೆಚ್ಚಿನ ವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ; ಯಾರಾದರೂ ನಾವು ಬೆಳೆಸುತ್ತಿದ್ದೇವೆ ಎಂದು ಅಂದುಕೊಂಡರೆ ಅದು ತಪ್ಪು. Multinational Companies ಬಂದಿದೆ, ದೊಡ್ಡ ದೊಡ್ಡ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ ಅವರು ಅದನ್ನು ಬ್ರ್ಯಾಂಡ್ ಮಾಡಿದ್ದಾರೆ. ಇನ್ಫೋಸಿಸ್ ಇರಬಹುದು ಅಥವಾ ವಿಪ್ರೋ ಇರಬಹುದು ಈ ರೀತಿ ಹಲವಾರು ಕಂಪನಿಗಳು ಬಂದಿವೆ. ಈ ರೀತಿಯ ಮಳೆ ೯೦ ವರ್ಷದಲ್ಲಿ ಆಗಿಲ್ಲ, ಬೆಂಗಳೂರಿನಲ್ಲಿ 51 ವರ್ಷದಲ್ಲಿಯೇ ಈ ರೀತಿಯ ಮಳೆ ಆಗಿಲ್ಲ. ಈಗ ಮೊಟ್ಟಮೊದಲ ಬಾರಿಗೆ ಆಗಿದೆ. ಈ ರೀತಿಯ ಮಳೆಯಲ್ಲಿ ಏನೇನಾಗಿದೆ ಎಂದರೆ ಮೊನ್ನೆ ದಿವಸ 'The Hindu' ಪತ್ರಿಕೆಯಲ್ಲಿ, 'Rains dampen Bengaluru's brand image and more' ಎಂದು full page ಬಂದಿದೆ. ಈಗ ದೊಡ್ಡ ದೊಡ್ಡ ಕಂಪನಿಗಳಿವೆ. ಅವರು ಕೆಲಸಕ್ಕೆ ರಜೆ ಕೊಡುತ್ತಾರೆ, ಮನೆಯಲ್ಲಿರುತ್ತಾರೆ, ಬದುಕುತ್ತಾರೆ. ಅಲ್ಲಿ secondary economy ಎಂದು ಇರುತ್ತದೆ. ನಾನು ಬೆಳಗ್ಗೆ ಕೂಡ ಹೇಳಿದೆ. ರಸ್ತೆಯಲ್ಲಿ ಇಡ್ಲಿ, ದೋಸೆ, ಕಾಫಿ, ಪಕೋಡ ಅಂದರೆ, ಪ್ರಧಾನ ಮಂತ್ರಿಯವರು ಪಕೋಡ ಮಾರಬೇಕೆಂದು ಹೇಳಿದ್ದಾರೆ. ಫುಟ್‌ಪಾತ್‌ನಲ್ಲಿ ಇವೆಲ್ಲವನ್ನೂ ಮಾರುತ್ತಿರುತ್ತಾರೆ. ಅವರ ಸ್ಥಿತಿ ಏನಾಗಿದೆ? ಒಂದು ವಾರ ಅವರು ಈಚೆಗೆ ಬರುವುದಕ್ಕೆ ಆಗುವುದಿಲ್ಲ. ಟ್ಯಾಕ್ಸಿ ಡ್ರೈವರ್ಸ್ ವಿಶೇಷವಾಗಿ Ola, Uber ಅವರಿಗೆ ಆ ಕಡೆ ಹೋಗುವುದಕ್ಕಾಗುವುದಿಲ್ಲ, ಹೋದರೆ ಈ ಕಡೆಗೆ ಬರುವುದಕ್ಕಾಗುವುದಿಲ್ಲ. ಆಟೋ ರಿಕ್ಷಾ ಚಾಲಕರು ಮತ್ತು ಮನೆ ಕೆಲಸ ಮಾಡುವಂತಹ ಅದರಲ್ಲಿಯೂ ಸಹ ಹೆಣ್ಣುಮಕ್ಕಳು ಇವರ ಸ್ಥಿತಿ ಏನಾಗಿದೆ ಎಂದು ಯಾರೂ ಸಹ ಯೋಚನೆ ಮಾಡುತ್ತಿಲ್ಲ. ಆದ್ದರಿಂದ ಬೆಂಗಳೂರು ನಗರದ ಮಳೆ ಎಷ್ಟು ಅವಾಂತರ ಮಾಡಿದೆ ಎಂದು ಹೇಳಿದರೆ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಒತ್ತುವರಿ ವಿಚಾರ ಬಂತು. ಅದರಲ್ಲಿ ಎರಡು ರಿಪೋರ್ಟ್ ಕೊಟ್ಟಿದೆ. ಬೆಂಗಳೂರು ಪ್ರತಿ ವರ್ಷ ೩.೩ರಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದೆ. ಅದಕ್ಕೆ ತಕ್ಕಂತೆ ನಾವು ಏನು ಮೂಲ ಸೌಕರ್ಯಗಳನ್ನು ಕೊಡಬೇಕು ಅದನ್ನು ಕೊಡುವುದಕ್ಕೆ ನಾವು ಸಂಪೂರ್ಣವಾಗಿ ವಿಫಲರಾಗಿದ್ದೇವೆ. ಕೆಲವು ಕ್ಷೇತ್ರಗಳಲ್ಲಿ ಆಗಿನ ಕಾಲದಲ್ಲಿ ಮಾಡಿರುವ ಹಳೆಯ ಲೇಔಟ್‌ಗಳನ್ನು ನೋಡಿ, ಹೊಸ ಲೇಔಟ್‌ಗಳನ್ನು ನೋಡಿ. ಹಳೆಯ ಲೇಔಟ್‌ಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ. ಹೊಸ ಲೇಔಟ್‌ಗಳು ಬಂದಿವೆ, ಅವುಗಳಿಗೆ ದಿಢೀರನೆ ಹೊಸ ಸೌಕರ್ಯಗಳು ಆಗಿವೆ. ಕೆಲವು ರಾಜಕಾರಣಿಗಳೇ ಕಂಟ್ರ್ಯಾಕ್ಟರ್‌ಗಳಾಗಿರುತ್ತಾರೆ. Tar contractors ಮೆಜಾರಿಟಿ ರಾಜಕಾರಣಿಗಳೇ ಆಗಿದ್ದಾರೆ. ಅದಕ್ಕೇ

ಪ್ರಧಾನಮಂತ್ರಿಯವರು ಬಂದು ಹೋದ ತಕ್ಷಣವೇ ರಸ್ತೆಗಳು ಕಿತ್ತುಹೋಗುತ್ತವೆ. ಯಾರೂ ಹೇಳುವವರು, ಕೇಳುವವರು ಇಲ್ಲ. ಅದಲ್ಲದೇ ಕರ್ನಾಟಕದಲ್ಲಿ ಅಂದಾಜು ಮಾಡಿದಾಗ ಸರ್ಕಾರದ ಅಂಕಿ ಅಂಶಗಳ ಪ್ರಕಾರ ಒಟ್ಟು 23,794 ಮನೆಗಳು damage ಆಗಿವೆ. ಇದಕ್ಕೆ ಆದಷ್ಟು ಬೇಗ ಪರಿಹಾರವನ್ನು ಕೊಡಬೇಕು ಮತ್ತು ರಸ್ತೆ ವ್ಯಾಪಾರಿಗಳಿಗೆ, ಆಟೋ ರಿಕ್ಷಾ ಚಾಲಕರಿಗೆ, ಟ್ಯಾಕ್ಸಿ ಡ್ರೈವರ್‌ಗಳಿಗೆ ಪರಿಹಾರಗಳನ್ನು ಎಷ್ಟು ಬೇಗ ಕೊಡುತ್ತೀರೋ ಅಷ್ಟು ಒಳ್ಳೆಯದು ಎಂದು ಹೇಳಿ ಕೆಲವು ವಿಚಾರಗಳನ್ನು; ಒತ್ತುವರಿ ಎನ್ನುವುದನ್ನು ಯಾರೂ ತಡೆಯುವುದಕ್ಕೆ ಆಗುತ್ತಿಲ್ಲ.

(ಮುಂದು)

(829) 14-09-2022 4-30 ಕೆಹೆಚ್-ಕೆಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು):-**

ಮೊದಲನೇ ವರದಿಯಲ್ಲಿಯೇ ಬಂದಿತ್ತು. ನಮ್ಮಲ್ಲಿ 1,18,668 ಎಕರೆಗಳಷ್ಟು ಗೋಮಾಳ ಮತ್ತು ಬಂಜರು ಭೂಮಿ ಇದೆ. ಅದರಲ್ಲಿ 9,294 ಎಕರೆ ಜಾಗ ಒತ್ತುವರಿಯಾಗಿದೆ. 67,175 ಎಕರೆ ಗೋಮಾಳ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ. ಇವೆಲ್ಲಾ ಆಗುವಂತಹ ಸಂದರ್ಭದಲ್ಲಿ ಗೋಮಾಳಗಳನ್ನು ಸಂಘ ಸಂಸ್ಥೆಗಳಿಗೆ ಕೊಡುತ್ತಿದ್ದಾರೆ. ನೀರಿಗೆ ಜ್ಞಾಪಕ ಶಕ್ತಿ ಜಾಸ್ತಿಯಂತೆ. ಮಳೆ ಬಂದಾಗ ಆ ದಾರಿಯಲ್ಲಿಯೇ ಹೋಗುತ್ತದೆ. ಮಧ್ಯದಲ್ಲಿ ಬಿಲ್ಡಿಂಗ್ ಇದ್ದರೆ ಬಿಲ್ಡಿಂಗ್ ಹೋಗಿಬಿಡುತ್ತದೆ. ಮಾನ್ಯ ಸಭಾನಾಯಕರಾದ ಕೋಟ ಶ್ರೀನಿವಾಸ ಪೂಜಾರಿಯವರು ಮಹದೇವಪುರ ಮತ್ತು ಬೊಮ್ಮನಹಳ್ಳಿಯಲ್ಲಿ ಮಳೆ ನೀರು ಮನೆಗೆ ನುಗ್ಗಿದರೆ 5 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು. ಆ ಮನೆಗೆ ಮಳೆ ನೀರು ನುಗ್ಗಿ ಪಾತ್ರೆ, ಸಾಮಾನು ಎಲ್ಲವೂ ಹೋಗಿಬಿಟ್ಟಿದೆ. ಇವರು ಕಾರು, ಸ್ಕೂಟರ್, ಸೈಕಲ್‌ಗೆ ಏನು ಪರಿಹಾರ ಕೊಟ್ಟಿಲ್ಲ. ಇದಕ್ಕೂ ಕೂಡ ಪರಿಹಾರ ಕೊಡಬೇಕು. ಏಕೆಂದರೆ, ಸ್ಕೂಟರ್‌ನಲ್ಲಿ ಕಷ್ಟ ಬಿದ್ದು ಕೆಲಸ ಮಾಡುವಂತಹ swiggy delivery boys ಮತ್ತು ಹೆಣ್ಣು ಮಕ್ಕಳು ಇರುತ್ತಾರೆ. ಅವರ ಸ್ಕೂಟರ್‌ಗಳೆಲ್ಲಾ ನಾಶವಾಗಿ ಬಿಟ್ಟಿದೆ. ಅವರಿಗೆ ಮೊದಲೇ ನಿರುದ್ಯೋಗ ಸಮಸ್ಯೆ. ಅವರಿಗೆ ಈ ಸ್ಥಿತಿ ಬರಬೇಕಾದರೆ, ಮೂಲಭೂತ ಸೌಕರ್ಯಗಳಲ್ಲಿ ಹಣ ಏನು ಖರ್ಚಾಗಬೇಕಾಗಿತ್ತು. ಅದು ಸರಿಯಾದ ರೀತಿಯಲ್ಲಿ ಖರ್ಚಾಗದೇ ಅದರಲ್ಲಿ ಶೇಕಡಾ 40 ರಷ್ಟು ಹಣವನ್ನು ಒಡೆದು ಸರಿಯಾದ ರೀತಿಯಲ್ಲಿ ಕೆಲಸ ಆಗದೇ ಈ ಸ್ಥಿತಿಗೆ ಬಂದಿದೆ. ಹಾಗಾಗಿ ಸರ್ಕಾರ ಈಗಲಾದರೂ ಆದಷ್ಟು ಬೇಗ ಎಚ್ಚೆತ್ತುಕೊಳ್ಳಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

**ಡಾ|| ಸಿ.ಎನ್.ಅಶ್ವತ್ಥ ನಾರಾಯಣ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ. ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಚಿವರೇ ನಾನು ಮಾತನಾಡಿ ಮುಗಿಸುತ್ತೇನೆ. ತಾವು ಮಂತ್ರಿಗಳು ಆಮೇಲೆ ಮಾತನಾಡಿ.

**ಡಾ॥ ಸಿ.ಎನ್.ಅಶ್ವತ್ಥ ನಾರಾಯಣ:–** ಮಾನ್ಯ ಸದಸ್ಯರೇ ಒಂದು ನಿಮಿಷ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಚಿವರೇ ನಾನು yield ಆಗುವುದಿಲ್ಲ.

**ಡಾ॥ ಸಿ.ಎನ್.ಅಶ್ವತ್ಥ ನಾರಾಯಣ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು yield ಆಗಲಿ, ಬಿಡಲಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, yield ಆಗಲಿ, ಬಿಡಲಿ ಎಂದು ಅಲ್ಲ.

(ಗೊಂದಲ)

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಪ್ರಧಾನಿಗಳು ಈ ಸದನದಲ್ಲಿ ಇಲ್ಲ.  ಅವರನ್ನು ಅವಮಾನ ಮಾಡುತ್ತಾ....

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಚಿವರೇ, ತಮಗೆ ಧೈರ್ಯ ಇದ್ದರೆ, ಇದನ್ನು ತನಿಖೆ ಮಾಡಿಸಿ. (ಗೊಂದಲ) ನೀವೇ ಕಂಟ್ರಾಕ್ಟರ್, ನಿಮ್ಮ ಮನೆಯವರೇ ಕಂಟ್ರಾಕ್ಟರ್, ಇದನ್ನು ನೀವೇ ನುಗ್ಗಿ ಮಾಡಿದ್ದೀರಾ. ನಿಮ್ಮ ತಮ್ಮ ಕಂಟ್ರಾಕ್ಟರ್. ಇದರ ಬಗ್ಗೆ ನನಗೆ ಗೊತ್ತಿಲ್ಲವೇ?  ಸ್ಯಾಂಕಿ ಟ್ಯಾಂಕ್ ನಲ್ಲಿ smart...

**ಡಾ॥ ಸಿ.ಎನ್.ಅಶ್ವತ್ಥ ನಾರಾಯಣ:–** ಮಾನ್ಯ ವಿರೋಧಪಕ್ಷದ ನಾಯಕರೇ, ಇದಕ್ಕೆ ಸಾಕ್ಷಿ ಕೊಡಿ. ಇವರು ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವರು ಭ್ರಷ್ಟಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಇವರಿಗೆ ಏನು ನೈತಿಕತೆ ಇದೆ.

(ಗೊಂದಲ)

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಂ.ಕೆ.ಪ್ರಾಣೇಶ್‌ರವರೇ ಮತ್ತು ಮಾನ್ಯ ಸದಸ್ಯರಾದ ಸಲೀಂ ಅಹ್ಮದ್ ರವರೇ ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ದಯಮಾಡಿ ತಾವು ಮಾತನಾಡಿ.

**ಡಾ॥ ಸಿ.ಎನ್.ಅಶ್ವತ್ಥ ನಾರಾಯಣ:–** ಮಾನ್ಯ ಸಭಾಪತಿಯವರೇ, ಇವರು ಏನೇನು ಹೇಳಿದ್ದಾರೆ, ಅದಕ್ಕೆ ಸಾಕ್ಷಿ ಕೊಡಲಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಮಂತ್ರಿಗಳೇ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**ಡಾ॥ ಸಿ.ಎನ್.ಅಶ್ವತ್ಥ ನಾರಾಯಣ:–** ಮಾನ್ಯ ಸದಸ್ಯರಾದ ಎಂ.ನಾಗರಾಜುರವರೇ, ತಾವು ತಮ್ಮ ಜಾಗದಿಂದ ಮಾತನಾಡಿ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಕುರ್ಚಿಗೆ ಹೋಗಿ ಮಾತನಾಡುವುದಕ್ಕೆ ಹೇಳಿ.

**ಸಭಾಪತಿಯವರು:–** ಎಲ್ಲರೂ ತಮ್ಮ ತಮ್ಮ ಕುರ್ಚಿಗಳಿಗೆ ಹೋಗಿ. ಮಾನ್ಯ ಸದಸ್ಯರಾದ ಪ್ರಕಾಶ್ ಕೆ.ರಾಥೋಡ್‌ರವರೇ, ತಾವು ತಮ್ಮ ಕುರ್ಚಿಗೆ ಹೋಗಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಸಲೀಂ ಅಹಮದ್‌ರವರೇ, ಒಂದು ನಿಮಿಷ. ನಾನು ನಿಂತುಕೊಂಡಿದ್ದೇನೆ. ಮಾನ್ಯ ಸಭಾಪತಿಯವರು ನಿಂತಿದ್ದಾಗ ಮಾತನಾಡಬಾರದು ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ ದಯಮಾಡಿ ಮಾತನಾಡಿ. ಮಾನ್ಯ ಸಚಿವರು ತಾವು ದಯವಿಟ್ಟು ಮಾತನಾಡಬೇಡಿ. ಅವರು ಮಾತನಾಡಿ ಮುಗಿಸುತ್ತಾರೆ.

(ಗೊಂದಲ)

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಬಾವಿಗೆ ಬಂದು ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗುತ್ತಾ ಧರಣಿಯಲ್ಲಿ ನಿರತರಾಗಿದ್ದರು)**

**ಸಭಾಪತಿಯವರು:-** ದಯವಿಟ್ಟು, ಯಾವುದೂ ಕಡತಕ್ಕೆ ಹೋಗಬಾರದು. ಯಾರೂ ಏನೇ ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲ. ಯಾರ್ಯಾರು ಮಾತನಾಡಬೇಕೋ, ಅವರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಮಾತನಾಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೇ ದಯವಿಟ್ಟು ತಮ್ಮ ಸದಸ್ಯರುಗಳಿಗೆ ಹೇಳಿ. (ಗೊಂದಲ) ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 4 ಗಂಟೆ 37 ನಿಮಿಷಕ್ಕೆ 10 ನಿಮಿಷಗಳ ಅವಧಿಗೆ ಮುಂದೂಡಲ್ಪಟ್ಟಿತು)**

(೮30) 14.9.2022 5.00 ಪಿಕೆ:ಎಂಡಿ

**(ಸಂಜೆ 4 ಗಂಟೆ 37 ನಿಮಿಷಕ್ಕೆ 10 ನಿಮಿಷಗಳ ಅವಧಿಗೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಸಂಜೆ 5 ಗಂಟೆ 6 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ ತಮ್ಮ ಮಾತನ್ನು ಮುಂದುವರೆಸಿ.

**ಡಾ: ಸಿ.ಎನ್.ಅಶ್ವತ್ಥ ನಾರಾಯಣ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಗಳೆ, ನಮ್ಮ ಪ್ರತಿಪಕ್ಷದ ನಾಯಕರು 40 ಪರ್ಸೆಂಟ್ ಕಮಿಷನ್‌ನ ಆಪಾದನೆ ಮಾಡಿದ್ದಾರೆ. ಯಾವ ಸಾಕ್ಷಿ-ಆಧಾರವನ್ನಿಟ್ಟುಕೊಂಡು ಈ ಆಪಾದನೆ ಮಾಡಿದ್ದಾರೆ ತಿಳಿಸಬೇಕು. ನಿರಾಧಾರವಾಗಿ ಆಪಾದನೆ ಮಾಡಿದ್ದಾರೆ. ಸಾಕ್ಷಿ ಇದ್ದರೆ ಅದನ್ನು ಮಂಡಿಸಿ ಮಾತನಾಡಲಿ; ಪ್ರೂಫ್ ಕೊಡಲಿ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾನು ಈಗ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ನಾನು ಯಾವುದೋ ಒಂದು ಮೀಟಿಂಗ್‌ಗೆ ಹೋಗಬೇಕು. ಈ ಸರ್ಕಾರದಲ್ಲಿ 40 ಪರ್ಸೆಂಟ್ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿರುವುದು ನಿಜ. ಪ್ರಧಾನಿಗಳು "ನ ಖಾವುಂಗಾ, ನಾ ಖಾನೇ ದುಂಗಾ" ಎಂದು ಹೇಳಿದ . . .

**ಡಾ: ಸಿ.ಎನ್.ಅಶ್ವತ್ಥ ನಾರಾಯಣ:-** ಈಗ ಅದೆಲ್ಲಾ ಬೇಕಿಲ್ಲ ...

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** 2018ರಲ್ಲಿ ನಮ್ಮ ರಾಜ್ಯಕ್ಕೆ ಬಂದು 10 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಯಾವ ಆಧಾರವನ್ನಿಟ್ಟುಕೊಂಡು ಹೇಳಿದರು?

(ಗೊಂದಲ)

**ಡಾ: ಸಿ.ಎನ್.ಅಶ್ವತ್ಥ ನಾರಾಯಣ:-** ಹೊರಿಸುತ್ತಿರುವ ಆಪಾದನೆಗೆ ದಾಖಲೆಗಳನ್ನು ಕೊಡಲಿ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಒಬ್ಬ ಪ್ರಧಾನ ಮಂತ್ರಿ ರಾಜ್ಯಕ್ಕೆ ಬಂದು ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ 10 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಹೇಳಿದಾಗ ಅವರ ಹತ್ತಿರ ಯಾವ ದಾಖಲೆ ಇತ್ತು?

(ಗೊಂದಲ)

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಡಾ॥ ವೈ.ಎ. ನಾರಾಯಣಸ್ವಾಮಿ(ಆಡಳಿತ ಪಕ್ಷದ ಮುಖ್ಯ ಸಚೇತಕರು):-** ನೀವು ಲೋಕಾಯುಕ್ತವನ್ನು ಮುಚ್ಚಿಸಿದಿರಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಒಂದು ವಿಚಾರವನ್ನು ಸದನದ ಗಮನಕ್ಕೆ ತರುತ್ತೇನೆ. ಮಾನ್ಯ ಸಭಾಪತಿಗಳೆ, ಅವರ ಕಾಲದಲ್ಲಿ ಲೋಕಾಯುಕ್ತವನ್ನು ಬಂದ್ ಮಾಡಿದರು. ನಾವು ಮತ್ತೆ ಲೋಕಾಯುಕ್ತವನ್ನು ಓಪನ್ ಮಾಡಿದ್ದೇವೆ. ಅವರು ಏನೇ ದೂರು ಕೊಡುವುದಿದ್ದರೂ ಲೋಕಾಯುಕ್ತಕ್ಕೆ ಕೊಡಲಿ.

(ಗೊಂದಲ)

**ಶ್ರೀ ಬಿ.ಕೆ. ಹರಿಪ್ರಸಾದ್:-** ಕರ್ನಾಟಕ ರಾಜ್ಯದ ಹೈಕೋರ್ಟ್ ನಿಮ್ಮ ಸರ್ಕಾರಕ್ಕೆ ಚಾಟಿ ಬೀಸಿದೆ. ಭ್ರಷ್ಟಾಚಾರ ಇಲ್ಲದೇ ಯಾವುದೇ ಇಲಾಖೆಗಳಲ್ಲಿ ಕೆಲಸ ಆಗುವುದಿಲ್ಲ ಎಂದು ಹೈಕೋರ್ಟ್ ಚಾಟಿ ಬೀಸಿದೆ. 2018ರಲ್ಲಿ 1700 ಕೋಟಿ ಗುಳುಂ . . . .

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನೀವು ಹೇಳುತ್ತಿರುವುದಕ್ಕೆ ಕನಿಷ್ಠ ಆಧಾರವನ್ನು ಒದಗಿಸಿ ಕೊಡಿ.

(ಗೊಂದಲ)

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ಈ ಮೇಲ್ಮನೆಗೆ ಒಂದು ಗೌರವ ಇದೆ; ಇದಕ್ಕೆ ಚಿಂತಕರ ಚಾವಡಿ ಎಂದು ಕರೆಯುತ್ತಾರೆ. ಈ ಮನೆಯ ಗೌರವವನ್ನು ಕಾಪಾಡಿಕೊಳ್ಳುವಂತಹ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ.

(ಮುಂದು)

(831) 14-09-2022 5.10 ಡಿಎಸ್-ಎಂಡಿ

**ಸಭಾಪತಿಯವರು(ಮುಂದು):-**

ಸ್ವಾಭಾವಿಕವಾಗಿ ಜಾಸ್ತಿ ಇರಲೇಬೇಕು. ನಾನು ಇಲ್ಲ ಎಂದು ಹೇಳುತ್ತಿಲ್ಲ. ನಾವು ಈಗ ನಿಯಮ 68 ರಡಿಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ಈಗ ಮಳೆಯಿಂದ ಹಾನಿಯಾದಂತಹ ವಿಚಾರದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:-** ಮಾನ್ಯ ಪ್ರಕಾಶ್ ರಾಥೋಡ್‌ರವರೇ, ನೀವೇ ಬಂದು ಇಲ್ಲಿ ಕುಳಿತುಕೊಳ್ಳಿ. ಒಬ್ಬ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಸದನ ನಡೆಸಬೇಕಾದ ಜವಾಬ್ದಾರಿ ನಿಮ್ಮ ಮೇಲೂ ಇದೆ. ನನ್ನೊಬ್ಬನ ಮೇಲಷ್ಟೇ ಅಲ್ಲ. ಹಾಗಾಗಿ ನಾನು ಎಲ್ಲರಿಗೂ ವಿನಂತಿಯನ್ನು ಮಾಡುತ್ತಿದ್ದೇನೆ. ನೀವುಗಳು ಮಾತನಾಡಬೇಕಾದರೆ ಸುಮ್ಮನೆ ನಮ್ಮ ಪ್ರಮುಖ ವಿಷಯವನ್ನು ಬಿಟ್ಟು, ಇಲ್ಲ ಇದೇ ಒಂದು ಸುದ್ದಿಯಾಗಬೇಕೆನ್ನುವ ದಿಕ್ಕಿನಲ್ಲಿ ಆಡಳಿತ ಪಕ್ಷದವರಾಗಲಿ, ವಿರೋಧ ಪಕ್ಷದವರಾಗಲಿ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ನೀವು ಮಾತನಾಡಿ, ನಾನು ಬೇಡ ಎಂದು ಹೇಳುತ್ತಿಲ್ಲ. ಈ ವಿಷಯಕ್ಕೆ ತಕ್ಕಂತೆ ಸರ್ಕಾರಕ್ಕೆ ಚಾಟಿ ಬೀಸುವಂತಹ ಕೆಲಸವನ್ನು ವಿರೋಧ ಪಕ್ಷ ಮಾಡಬೇಕು. ವಿರೋಧ ಪಕ್ಷ ಎಷ್ಟು ಚಾಟಿ ಬೀಸುತ್ತದೆಯೋ ಅಷ್ಟೇ ಆಡಳಿತ ಪಕ್ಷಕ್ಕೆ, ಜನರ ಹಿತದೃಷ್ಟಿಯಿಂದ ಒಳ್ಳೆಯದು. ಆದರೆ ಸಾಕ್ಷ್ಯಾಧಾರಗಳಿಲ್ಲದಂತಹ ಆರೋಪಗಳು ಸರಿಯಲ್ಲ. ಯಾವುದೋ ಒಂದು ಹಂತದಲ್ಲಿ

ಯಾವುದೋ ಒಂದು ಶಬ್ದ ಹೇಳುತ್ತಾರೆ, it can be excused. ಪದೇಪದೇ ಯಾವುದೋ ಒಂದು ಶಬ್ದವನ್ನಿಟ್ಟುಕೊಂಡು ಅದನ್ನೇ ವಿಸ್ತರಿಸುವುದು ಸರಿಯಲ್ಲ. ಅವರು ನನಗೆ ಸಾಕ್ಷಿ ಕೊಡಿ ಎಂದು ಹೇಳುತ್ತಾರೆ, ನೀವು ಇನ್ನೊಂದು ಯಾವುದೋ ಉದಾಹರಣೆ ಕೊಡುತ್ತೀರಿ. ದಯವಿಟ್ಟು ಅದನ್ನು ನಿಲ್ಲಿಸಿ ವಿಷಯಕ್ಕೆ ಬನ್ನಿ. ಇಲ್ಲದಿದ್ದರೆ ನನಗೆ ಸದನ ನಡೆಸುವುದಕ್ಕೆ ಕಷ್ಟವಾಗುತ್ತದೆ.

**ಡಾ:ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ...

(ಗೊಂದಲ)

**ಸಭಾಪತಿಯವರು:–** ಶ್ರೀಮತಿ ತೇಜಸ್ವಿನಿ ಗೌಡರವರೇ, ಎರಡು ನಿಮಿಷ ಕುಳಿತುಕೊಳ್ಳಿ. ನಾನು ಆಗಲೇ ಹೇಳಿದ್ದೇನೆ, ನಾನು ಹೇಳುವವರೆಗೆ ಯಾವುದೇ ಮಾತುಗಳು ಕಡತಕ್ಕೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಯಾವುದೂ ಕಡತಕ್ಕೆ ಹೋಗಬಾರದು ಎಂದು ಆದೇಶಿಸಿದರು)**

(ಗೊಂದಲ)

**ಸಭಾಪತಿಯವರು:–** ನಾನು ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಯಾವುದೂ ಕಡತಕ್ಕೆ ಹೋಗುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಡಾ:ಸಿ.ಎನ್.ಅಶ್ವತ್ಥ್ ನಾರಾಯಣ:–** ಮಾನ್ಯ ಸಭಾಪತಿಯವರೇ,...

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾನ್ಯ ನರೇಂದ್ರ ಮೋದಿಯವರು ಅವರಿಗಿಂತ ಚೆನ್ನಾಗಿ ನನಗೆ ಗೊತ್ತು. ಅವರಿಗಿಂತ ಚೆನ್ನಾಗಿ ನನಗೆ ಪರಿಚಯವಿದೆ, ದಯಮಾಡಿ ಅವರು ಕುಳಿತುಕೊಳ್ಳಲಿ. ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ, ತಾವು ನನಗೆ ರಕ್ಷಣೆ ಕೊಡುತ್ತೀರೋ ಇಲ್ಲವೋ ಅಷ್ಟೆ ಹೇಳಿ.

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:–** ನೀವೊಬ್ಬರೇ ಅಲ್ಲ, ಸದನದ ಎಲ್ಲಾ ಸದಸ್ಯರುಗಳನ್ನು ರಕ್ಷಣೆ ಮಾಡುವುದು ನನ್ನ ಜವಾಬ್ದಾರಿ.

**ಡಾ:ಸಿ.ಎನ್.ಅಶ್ವತ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದ ನಾಯಕರು ಮಾನ್ಯ ಪ್ರಧಾನ ಮಂತ್ರಿಗಳು ಹೇಳಿರುವ ಮಾತನ್ನು ಉಲ್ಲೇಖ ಮಾಡುತ್ತಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನೀವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ನನಗೆ ಮಾತು ಮುಗಿಸುವುದಕ್ಕೆ ಅವಕಾಶ ಕೊಡಿ, ನಾನು ಯೀಲ್ಡ್ ಆಗುವುದಿಲ್ಲ.

**ಡಾ:ಸಿ.ಎನ್.ಅಶ್ವತ್ ನಾರಾಯಣ:–** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

**ಶ್ರೀ ಕೆ.ಅಬ್ದುಲ್ ಜಬ್ಬರ್:–** ಅದೆಲ್ಲಾ ಮಾತನಾಡುವುದಕ್ಕಾಗುವುದಿಲ್ಲ.

**ಡಾ:ಸಿ.ಎನ್.ಅಶ್ವತ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಸನ್ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಅವರು ಹೇಳಿದಂತಹ ಹೇಳಿಕೆಯನ್ನು ಉಲ್ಲೇಖಿಸಬಯಸುತ್ತೇನೆ. ನೂರು ರೂಪಾಯಿಯಲ್ಲಿ ಹತ್ತು ರೂಪಾಯಿ ಮಾತ್ರ ನಾಗರೀಕರಿಗೆ ತಲುಪುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮೂರ್ಖ ಶಿಖಾಮಣಿಗಳು.... ಅಂತಹ ಪರಿಸ್ಥಿತಿ.

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 5 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ:15ನೇ ಸೆಪ್ಟೆಂಬರ್ ಮಾಹೆ 2022ರ ಗುರುವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>